ಡಾ॥ ಕೃಷ್ಣಾನಂದ ಕಾಮತ್



ಕಾವಿ ಕಲೆ

Jyotsna Kamat

22nd April 2012

ಪ್ರಗತಿ ಪುಸ್ತಕಮಾಲೆ–112

ಕಾವಿ ಕಲೆ

(ಕರ್ನಾಟಕದ ಕರಾವಳಿಯ ಕಣ್ಮರೆಯಾದ
ಕಲೆಯೊಂದರ ಸಚಿತ್ರ ಅಧ್ಯಯನ)

ಡಾ. ಕೃಷ್ಣಾನಂದ ಕಾಮತ್

ಪ್ರಗತಿ ಗ್ರಾಫಿಕ್ಸ್–ಬೆಂಗಳೂರು

KAAVI KALE - written by **Dr. Krishnananda Kamath,** 110, Shashikirana, 18th Cross, Malleswara, Bangalore-560 055

Publisher: **M. Byregowda** for **Pragati Graphics**, Bangalore, # 119, 3rd cross, 8th main, Hampinagara(RPC Layout- Vijayanagara), Bengaluru-560104, Ph: 080-2340 9512

ISBN	:	978-93-81441-24-4
pages	:	xvi + 104 + 8 color pages
First Impression :		1993
Revised First edn. :		2012
paper	:	NS Maplitho 80 GSM
price	:	₹ 100/–
size :		1/8 Demy
ಪುಟಗಳು	:	xvi + 104 + 8 ಬಣ್ಣದ ಪುಟಗಳು
ಮೊದಲ ಆವೃತ್ತಿ	:	1993
ಪರಿಷ್ಕೃತ ಪ್ರಥಮ ಆವೃತ್ತಿ:		2012
ಕಾಗದ	:	ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ
ಬೆಲೆ	:	₹ 100/–
©	:	ಡಾ. ಜ್ಯೋತ್ಸ್ನಾ ಕಾಮತ್
ಸೈಜ್	:	1/8 ಡೆಮಿ
ಪ್ರತಿಗಳು	:	1000
ಸಲಹಾ ಸಮಿತಿ	:	ಪ್ರೊ. ಶಿವರಾಮಯ್ಯ ಡಾ. ಕೆ.ವೈ. ನಾರಾಯಣಸ್ವಾಮಿ ಡಾ. ಕೆ. ಪುಟ್ಟಸ್ವಾಮಿ ಡಾ. ಎಚ್.ಬಿ. ರಮೇಶ್
ರಕ್ಷಾಪುಟ ವಿನ್ಯಾಸ	:	ಅಜಿತ್
ಪ್ರಕಾಶಕರು	:	ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್ – ಬೆಂಗಳೂರು ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ ಬೆಂಗಳೂರು–104. ದೂರವಾಣಿ: 080–23409512
ಮುದ್ರಕರು	:	ಪೂರ್ಣಿಮಾ ಪ್ರಿಂಟರ್ಸ್ ವಿಜಯನಗರ, ಬೆಂಗಳೂರು ಫೋ: 080–2335 9588





ಹಿನ್ನೆಲೆಯಾಗಿ

ನಮ್ಮ ಪೂರ್ವಜರು ಕಟ್ಟಿಸಿದ ಮನೆಯ ಬೈಠಕಖಾನೆಯಲ್ಲಿ ಅನೇಕಾನೇಕ ಕಾವಿಚಿತ್ರಗಳಿದ್ದವು. ತೀರ ಚಿಕ್ಕವನಿದ್ದಾಗಲೇ ಅದನ್ನು ಹೇಗೆ ಚಿತ್ರಿಸುತ್ತಾರೆಂದು ವಿಸ್ಮಯಪಟ್ಟದ್ದುಂಟು. ಪ್ರಾಥಮಿಕ ಶಾಲೆಗೆ ಹೋಗಲಾರಂಭಿಸಿದಾಗ, ಹಲವಾರು ದೇವಾಲಯಗಳ ಎದುರಿನಿಂದ ನಡೆದು ಹೋಗಬೇಕಾಗಿತ್ತು. ಅವುಗಳಲ್ಲಿ ಹನುಮಂತ, ಗೋಪಾಲಕೃಷ್ಣ, ಗಣಪತಿ, ಶಾರದಮ್ಮ ದೇವಾಲಯಗಳ ಗೋಡೆಗಳು, ಪೌರಾಣಿಕ ಸನ್ನಿವೇಶಗಳಿಂದ ಅಲಂಕೃತವಾಗಿರುವುದನ್ನು ನೋಡುತ್ತ ನಿಲ್ಲುವುದು, ಒಂದು ಹವ್ಯಾಸವಾಗಿತ್ತು. ಊರಿನ ಮಾಸ್ತಿ ಗುಡಿ ಕಟ್ಟುತ್ತಿರುವಾಗ, ಅದರ ಹೊರ ಗೋಡೆಯ ಮೇಲೆ ರಚಿಸಲಾಗುತ್ತಿದ್ದ ಹುರಮಂಜಿ ಚಿತ್ರಗಳನ್ನು ತದೇಕ ಚಿತ್ತದಿಂದ ವೀಕ್ಷಿಸುತ್ತಿರುವಲ್ಲಿ ಗಡಿಯಾರ ಮುಂದೆ ಓಡಿದ್ದೇ ಅರಿವಾಗದೇ, ವಿಳಂಬವಾಗಿ ಹಿಂದಿರುಗಿದ್ದಕ್ಕಾಗಿ ಮನೆಯವರಿಂದ ಬೈಗಳ ಮಂಗಳಾರತಿ ಬೆಳಗಿಸಿಕೊಂಡದ್ದೂ ಇದೆ. ಅಂತೆಯೇ ದೊಡ್ಡವನಾದ ಮೇಲೆ ಕಾವೀ ಕಲಾಕಾರನಾಗಿ ಇಂತಹ ಚಿತ್ರ ರಚನೆ ಮಾಡಿ ಆನಂದಿಸಬೇಕೆಂದು ಕನಸು ಕಂಡದ್ದೂ ಇದೆ. ಆದರೆ ಇದ್ದವುಗಳೂ ನಶಿಸಿ ಹೋಗುವುದನ್ನು ಕಣ್ಣಾರೆ ಕಾಣಬೇಕಾದ ಪ್ರಸಂಗ ಬಂದೀತು, ಎಂದು ಅನಿಸಿರಲೇ ಇಲ್ಲ! ಅವನ್ನು ಉಳಿಸಿಕೊಳ್ಳುವುದು ಅಸಾಧ್ಯವಾಗಿದ್ದರಿಂದ ಅಳಿದುಳಿದವನ್ನು ಭಾವೀಪೀಳಿಗೆಗಾಗಿ ಛಾಯಾಚಿತ್ರಗಳ ರೂಪದಲ್ಲಾದರೂ ರಕ್ಷಿಸಿ ಇಡಬೇಕೆನಿಸಿತು. ಅಂತೆಯೇ ಕಳೆದ ಒಂದು ದಶಕದಲ್ಲಿ, ಕರ್ನಾಟಕದ ಉದ್ದಗಲಕ್ಕೂ, ಗೋವಾಕ್ಕೂ ಅಲೆದಾಡಿ, ಕ್ಯಾಮರಾ ಕ್ಲಿಕ್ಕಿಸುವುದರ ಜೊತೆಗೆ ಅಪೂರ್ವ ಮಾಹಿತಿ ಸಂಗ್ರಹಿಸುವಂತಾಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾವಿ ಚಿತ್ರಗಳಿರುವ ಹೆಚ್ಚಿನ ದೇವಾಲಯಗಳು ಇದ್ದವು. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಾಲಯಗಳಲ್ಲಿ ಮಾತ್ರ ಇಂಥ ಚಿತ್ರಗಳಿದ್ದವು. ಗೋವಾದಲ್ಲಿ ಇದ್ದವುಗಳ ಮೇಲೆ ಪೇಂಟ್ ಮತ್ತು ವಾರ್ನಿಶ್ ಬಳೆದು ಹಾಳುಗೆಡವಿದ್ದಾರೆ.

ಕನ್ನಡ ಓದುಗರಿಗೆ ಈ ಚಿತ್ರಗಳ ಕುರಿತು ಅರಿವು, ಆದರಗಳು ಅಂಕುರಿಸಿ ಕೊನೆಯುಸಿರು ಬಿಡಲಿರುವ ಕೆಲವುಗಳನ್ನಾದರೂ ಅವರು ಸಂರಕ್ಷಿಸಲಿ,

ಎನ್ನುವ ಉದ್ದೇಶದಿಂದ 'ತರಂಗ' ವಾರಪತ್ರಿಕೆಯು 1985 ನವೆಂಬರ್ 11-17ರ ಸಂಚಿಕೆಯಲ್ಲಿ 'ನಾವೇ ನಾಶ ಮಾಡುತ್ತಿರುವ ಕರಾವಳಿಯ ಕಾವಿ ಚಿತ್ರಗಳು' ಎಂಬ ಲೇಖನ ಪ್ರಕಟಿಸಿದೆ. ಅದರಿಂದಾಗಿ ಅವುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಪ್ರಾರಂಭವಾಗದಿದ್ದರೂ, ಕೆಲ ಕಲಾ ಪ್ರೇಮಿಗಳಾದರೂ ಇವುಗಳ ಇರುವನ್ನು ಅರಿಯುವಂತಾಯಿತು. ಅಂತೆಯೇ ಡಿಸೆಂಬರ್ 1985ರಲ್ಲಿ ಕರ್ನಾಟಕ ಆರ್ಕಿಯಾಲಾಜಿ ವಿಭಾಗದವರು ತಮ್ಮ ಶತಮಾನೋತ್ಸವದ ಅಂಗವಾಗಿ ಏರ್ಪಡಿಸಿದ ರಾಷ್ಟ್ರಮಟ್ಟದ ವಿಚಾರಗೋಷ್ಠಿಯಲ್ಲಿ 'ಕಾವಿ ಕಲೆ' ಕುರಿತಾಗಿ ಒಂದು ಪ್ರಬಂಧ ಮಂಡಿಸಲು ವಿನಂತಿಸಿಕೊಂಡರು. ಆದರೆ ಈ ವಿದ್ವಜ್ಜನ ಗೋಷ್ಠಿಯಲ್ಲಿ ಪಾಲುಗೊಳ್ಳಲು ಅವಶ್ಯವಿರುವ ಇತಿಹಾಸ ಇಲ್ಲವೇ ಕಲೆಗಳ ಆಳವಾದ ಅಧ್ಯಯನದ ಅನುಭವಗಳು ಇಲ್ಲದ್ದರಿಂದ ಬಂದ ಆಮಂತ್ರಣ ಸ್ವೀಕರಿಸಲು ಹಿಂಜರಿದಾಗ, ಆಗ ಆ ಇಲಾಖೆಯ ನಿರ್ದೇಶಕರಾಗಿದ್ದ ಡಾ.ಅ.ಸುಂದರ ಅವರು ಪಟ್ಟು ಹಿಡಿದು ಒಪ್ಪಿಸಿದರು. ಸೇರಿದ ಧೀಮಂತರಲ್ಲಿ ಹೆಚ್ಚಿನವರು ಪ್ರಬಂಧವನ್ನೂ ಛಾಯಾಚಿತ್ರಗಳನ್ನೂ ಬಹಳವಾಗಿ ಮೆಚ್ಚಿದರು. ಕೇಂದ್ರ ಪುರಾತತ್ವ ಇಲಾಖೆಯ ಮಾಜಿ ಮಹಾನಿರ್ದೇಶಕರಾದ ಡಾ.ಎಮ್.ಎನ್. ದೇಶಪಾಂಡೆಯವರು 'ಕರ್ನಾಟಕದ ಪುರಾತನ ಕಲೆಗೆ ಇದೊಂದು ಸಂಶೋಧನೆಯ ಹೊಸ ಕೊಡುಗೆ' ಎಂದು ಪ್ರಶಂಸಿಸಿದರು. ಡಾ। ಸೌಂದರರಾಜನ್ ಅವರು 'ಇದು ಕರ್ನಾಟಕದ ಕಲಂಕಾರಿ ಕಲೆ' ಎಂದರು. ಡಾ। ರತನ್ ಪರಿಮೂ ಎನ್ನುವವರು ಪುರಾತತ್ವ ಇಲಾಖೆಯ ಕಟ್ಟಡವನ್ನು ಇಂಥ ಚಿತ್ರಗಳಿಂದ ಅಲಂಕರಿಸಬೇಕು, ಎಂದು ಸೂಚಿಸಿದರೆ, ಡಾ। ಅ.ಸುಂದರ ಅವರು ಅಳಿದುಳಿದ ಚಿತ್ರಗಳಿಗೆ ಸಕಲ ಸಂರಕ್ಷಣೆ ಕೊಡಲಾಗುವುದೆಂದು ಆಶ್ವಾಸನೆಯಿತ್ತರು. ಆ ನಂತರ ಮನಿಲಾ (ಫಿಲಿಪೈನ್ಸ್)ದಲ್ಲಿ ನಡೆದ ಏಷಿಯಾ ಖಂಡದ ಆರ್ಕಿಯಾಲಜಿ ಕ್ಷೇತ್ರದಲ್ಲಿ ನಡೆದ ಪ್ರಗತಿ ಗೋಷ್ಠಿಯಲ್ಲಿ ಕಾವಿ ಕಲೆಯ ಸಂಶೋಧನೆಯ ಬಗ್ಗೆ ಭಾರತೀಯ ಪ್ರತಿನಿಧಿ ಬೆನ್ನು ಚಪ್ಪರಿಸಿಕೊಂಡೂ ಆಯಿತು!

ಬರೋಡಾ ವಿಶ್ವವಿದ್ಯಾಲಯದ ಕಲಾ ಕಾಲೇಜಿನ ಕಲಾ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ರತನ ಪರಿಮೂ ಅವರು ತಮ್ಮ 11-1-1986ರ ವೈಯಕ್ತಿಕ ಪತ್ರದಲ್ಲಿ ಇನ್ನೊಮ್ಮೆ ಕಾವಿ ಕಲೆಯ ಕುರಿತಾದ ಪ್ರಬಂಧವನ್ನು ಪ್ರಶಂಸಿಸಿ ಭಾರತೀಯ ಕಲಾಪ್ರೇಮಿಗಳು ಅದನ್ನು ಗಣನೆಗೆ ತೆಗೆದುಕೊಳ್ಳುವಂತೆ ಆ ಕುರಿತು ಲೇಖನಗಳನ್ನು ಬರೆದು ಪ್ರಚಾರ ಮಾಡಬೇಕು! ಎಂದು ಸೂಚಿಸಿದರು. ಡಾ। ಅ.ಸುಂದರರು ಈ ಅಪೂರ್ವ ಕಲೆಯ ಕುರಿತು ಒಂದು ಗ್ರಂಥವನ್ನೇ ಬರೆದು ಕೊಡುವಂತೆ ಅಧಿಕೃತವಾಗಿ ವಿನಂತಿಸಿಕೊಳ್ಳುತ್ತೇವೆಂದರು. ಆದರೆ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧವಾಗಲಿ, ಪ್ರಚಾರ ಲೇಖನವಾಗಲಿ ಪ್ರಕಟವಾಗದ್ದರಿಂದ, ಗ್ರಂಥ

ಬರೆಯುವ ವಿಚಾರ ದೂರದಲ್ಲಿಯೇ ಉಳಿಯಿತು. ಅದರಂತೆ ಹೊಸ ಕಾವಿ ಚಿತ್ರಗಳ ರಚನೆಯಾಗಲಿ, ಹಳೆಯವುಗಳ ರಕ್ಷಣೆಯಾಗಲಿ ನಡೆಯಲೇ ಇಲ್ಲ. ನಾವೆಲ್ಲ ಮಾತಿನ ಮಲ್ಲರಲ್ಲವೇ?

1988ರಲ್ಲಿ ಡಿಸೆಂಬರ್ 21 ರಿಂದ 26ರವರೆಗೆ ನಡೆದ ಐದನೆಯ ಕರ್ನಾಟಕ ಕಲಾಮೇಳದ ಅಂಗವಾಗಿ ಹೊರತಂದ ಸ್ಮರಣ ಸಂಚಿಕೆಯಲ್ಲಿ 'ಕಾವಿ ಭಿತ್ತಿ ಚಿತ್ರಗಳಲ್ಲಿ ಸಾಮಾಜಿಕ ಜೀವನ' ಎಂಬ ಲೇಖನ ಪ್ರಕಟವಾಯಿತು. ಈ ಒಬ್ಬಂಟಿಗನ ಆಸಕ್ತಿ, ಪರಿಶ್ರಮಗಳ ಫಲಶ್ರುತಿ ಎಂಬಂತೆ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ತಮ್ಮ ಸೆಪ್ಟೆಂಬರ್ 25, 1992ರ ಪತ್ರದಲ್ಲಿ ಕಾವಿ ಕಲೆ ಕುರಿತು ಒಂದು ಪುಸ್ತಕದ ಹಸ್ತಪ್ರತಿ ಸಿದ್ಧಮಾಡಿಕೊಡಲು ವಿನಂತಿಸಿಕೊಂಡಾಗ, ಆದ ಆನಂದಕ್ಕೆ ಮೇರೆಯೇ ಇರಲಿಲ್ಲ. ಕಳೆದ ಒಂದು ದಶಕದಲ್ಲಿಯೇ ಅನೇಕ ಚಿತ್ರಗಳು ನಶಿಸಿ ಹೋಗಿದ್ದರಿಂದ, ಕೆಲವಾದರೂ ಪುಸ್ತಕರೂಪದಲ್ಲಿ ಬದುಕಿರುತ್ತವೆ, ಎಂಬುದೇ ನೆಮ್ಮದಿಯ ಮಾತು.

ಇಂದು ಬಹುಸಂಖ್ಯಾತ ಕಾವಿ ಚಿತ್ರಗಳು ಭಗ್ನಾವಶೇಷಗಳಾಗಿ ನಿಂತಿವೆ. ದಶಕಗಳಲ್ಲಿ ಅವುಗಳ ಮೇಲೆ ಸಂಚಯವಾದ ಧೂಳು ಝಾಡಿಸುವವರಿಲ್ಲದೇ ಅವು ಮಸುಕಾಗಿವೆ. ಬಿಸಿಲು, ಗಾಳಿ, ಮಳೆಗಳಿಂದಾಗಿ ಬಿರುಕುಬಿಟ್ಟಿವೆ. ಸೂರಿನ ಹಂಚು ಒಡೆದು ಮಳೆ ನೀರು ಧಾರೆಯಾಗಿ ಹರಿದು, ಯಥೇಷ್ಟವಾಗಿ ಹಾವಸೆ ಬೆಳೆದಿದೆ. ಇಷ್ಟು ಸಾಲದೆಂಬಂತೆ, ದೇವಾಲಯಕ್ಕೆ ಬರುವ ಪೋಲಿಗಳು ತಮ್ಮ ಮತ್ತು ತಮ್ಮ ಗೆಳತಿಯರ ಹೆಸರುಗಳನ್ನು ಚಿತ್ರಗಳ ಮೇಲೆ ಕೊರೆದು, ಅವು ಶಾಶ್ವತವಾಗಿರುವ ಏರ್ಪಾಡು ಮಾಡಿದ್ದಾರೆ. ಅಂತೆಯೇ ಮುದ್ರಣಕ್ಕಾಗಿ ಛಾಯಾಚಿತ್ರಗಳನ್ನು ಸ್ಫುಟವಾಗಿ ಕಾಣಿಸುವುದು ಅನಿವಾರ್ಯವಾಯಿತು. ಕಾವಿ ಚಿತ್ರಗಳಿಂದ ಅಂದ-ಚೆಂದ ಸವಿಯಲು ಬರುವಂತೆ, ಅನವಶ್ಯಕವಾದ ಅಕ್ಕ ಪಕ್ಕದ ವಿವರಗಳನ್ನು ಕೈಬಿಡಲಾಗದೆ.

ಈ ಗ್ರಂಥ ರಚನೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು, ರಿಜಿಸ್ಟ್ರಾರರು ಹಾಗೂ ಕಲಾಕಾರರಾದ ಅ.ಲ. ನರಸಿಂಹನ್ ಅವರಿಗೆ ಕೃತಜ್ಞನಾಗಿದ್ದೇನೆ.

ಸಂಕ್ರಾಂತಿ

ಕೃಷ್ಣಾನಂದ ಕಾಮತ್
14-1-1993

ಮರುಮುದ್ರಣ ಕುರಿತು ಒಂದು ಮಾತು

ದಿ.ಡಾ.ಕೃಷ್ಣಾನಂದ ಕಾಮತರ 'ಕಾವಿಕಲೆ' ಕರ್ನಾಟಕ ಲಲಿತ ಕಲಾ ಅಕಾಡೆಮಿಯಿಂದ 1993ರಲ್ಲಿ ಬೆಳಕು ಕಂಡಿತು. ಕರಾವಳಿಯ ವಿಶಿಷ್ಟ ಕಲೆಯಾಗಿ ಬೆಳೆದು ಬಂದ ಈ ಕಲೆ, ಜಾನಪದ, ಶಿಷ್ಟ ಪ್ರಕಾರವೆಂಬ ಭೇದ ಭಾವವಿಲ್ಲದೇ ಸರ್ವಜನ ಮಾನ್ಯವಾಗಿ ಶತಶತಮಾನಗಳ ಕಾಲ, ಗುಡಿ-ಗುಂಡಾರ, ಸಿರಿವಂತರ ಮಹಲು, ಮನೆ-ಮಠಗಳಲ್ಲೆಲ್ಲ ಸುಂದರ ಕಲಾಕೃತಿಗಳನ್ನು ಹೊಂದಿತ್ತು. ಕರಾವಳಿಯ ಮೂರು ತಿಂಗಳ ಜಡಿ ಮಳೆ ಮತ್ತು ಆರದ ತೇವಗಳಿಂದಾಗಿ ಇತರೇ ಬಣ್ಣಗಳೆಲ್ಲ ಬಲು ಬೇಗ ಅಳಿಸಿ ಹೋಗುತ್ತವೆ. ಹೀಗಾಗಿ ಅಲ್ಲಿಯ ನಿವಾಸಿಗಳು ಬಿಳಿ ಗೋಡೆಗಳ ಮೇಲೆ ಕಾವಿ (ಹುರಮುಂಜಿ; ಕೆಂಪು ಮಣ್ಣು) ಯಿಂದ ಚಿತ್ರಗಳನ್ನು ಮೂಡಿಸಿ ತಮ್ಮ ಕಲಾಪ್ರಿಯತೆ ಮೆರೆದಿದ್ದಾರೆ. ಕೇವಲ ಅರವತ್ತು ವರ್ಷಗಳ ಹಿಂದಿನವರೆಗೂ ಉತ್ತರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದೇಗುಲದ ಪ್ರಾಂಗಣಗಳು, ಪೂಜಾಸ್ಥಾನಗಳು, ಸಭಾಂಗಣ, ಸಾರ್ವಜನಿಕ ಭವನಗಳನ್ನು ಸ್ಥಳೀಯವಾಗಿ ಸುಲಭ ಲಭ್ಯವಿದ್ದ ಕಾವಿ ಬಣ್ಣದಿಂದ, ಏಕವರ್ಣೀಯವಾಗಿದ್ದರೂ ಸುಂದರವಾಗಿ ಚಿತ್ರ, ದೃಶ್ಯಗಳು ಕಂಗೊಳಿಸುವಂತೆ ಚಿತ್ರಿಸುತ್ತಿದ್ದರು. ಅದೆಷ್ಟೊ ಹುಟ್ಟು ಕಲಾವಿದರು, ತಮಗೆ ಸಿಗುತ್ತಿದ್ದ ಪಾರಂಪರಿಕ ವಿದ್ಯೆಯ ಹಿನ್ನೆಲೆಯಿಂದ ಅಪರೂಪದ ಕಲಾಕೃತಿಗಳನ್ನು ನಿರ್ಮಿಸಿದರು. ಜನರಿಗೆ ಚಿರಪರಿಚಿತವಿದ್ದ ರಾಮಾಯಣ, ಮಹಾಭಾರತ ಪುರಾಣಗಳ ಕಥೆ, ಕಥಾನಕ, ಸನ್ನಿವೇಶಗಳಿಗೆ ಚಿತ್ರರೂಪ ನೀಡಿದರು. ಪರಿಸರಕ್ಕೂ ಕಾಲ್ಪನಿಕ ರೂಪ ಕೊಟ್ಟರು. ಕರ್ನಾಟಕದ ಇತರ ಕಲಾಪ್ರಕಾರಗಳಂತೆ ಕಾವಿ ಕಲೆಯಿಂದ ಅಲಂಕೃತವಾದ ದೇವಾಲಯುಗಳು ಆಯಾ ದೇವತೆಯ ಪುಣ್ಯ ಪ್ರಸಂಗಗಳನ್ನು ನೆನಪಿಸುವಂತೆ, ಮನರಂಜನೆಯನ್ನೂ ನೀಡುತ್ತಿದ್ದವು.

ಆದರೆ ಆಧುನೀಕರಣದ ಓಘದಲ್ಲಿ ಈ ಕಲಾಕೃತಿಗಳೆಲ್ಲ ನೆಲಸಮವಾದವು. ಗುಡಿ-ಗುಂಡಾರ, ಮಠಗಳಿಗೆಲ್ಲ ಸಿಮೆಂಟ್ ಕಾಂಕ್ರೀಟ್‌ನ ಸುಭದ್ರತೆ ಒದಗಿಸುವ ಆತುರದಲ್ಲಿ ಈ ಕಲೆ ಮಾಯವಾಯಿತು. ಸರಕಾರ ಸುಶಿಕ್ಷಿತರು, ಕಲಾವಿಮರ್ಶಕರು, ಕಲಾಪ್ರಿಯರೆನಿಸಿಕೊಳ್ಳುವವರೆಲ್ಲ ಇವುಗಳತ್ತ ಗಮನವನ್ನೆ ಹರಿಸದಿದ್ದಾಗ ಗ್ರಾಮೀಣ ಜನಸಾಮಾನ್ಯರಿಗೆ ಅರಿವಾಗುವದೆಂತು? ಕಾವಿ ಕಲೆ-ಕಲಾಕಾರರೆಲ್ಲ ಮಾಯವಾದರು ಹೇಳಹೆಸರಿಲ್ಲದೇ!

ಬಾಲ್ಯದಿಂದಲೇ ಕೃಷ್ಣಾನಂದ ಕಾಮತರು ಮನೆಗಳಲ್ಲಿ ಮತ್ತು ಇತರೇ ಕಟ್ಟಡಗಳಲ್ಲಿ ಆಗಿನ್ನೂ ಜೀವಂತವಾಗಿದ್ದ ಕಾವಿ ಕಲೆಯನ್ನು ಹೆಚ್ಚಿನ ಆಸಕ್ತಿಯಿಂದ ವೀಕ್ಷಿಸುತ್ತಿದ್ದರು. ಅವರೊಳಗಿನ ಕಲಾವಿದ, ಕಾವಿ ಕಲೆ ಚಿತ್ರಣವಾಗುತ್ತಿದ್ದ ಸ್ಥಳಗಳನ್ನು ಅರಸಿಕೊಂಡು ಹೋಗುತ್ತಿದ್ದ. ನಂತರದ ವರ್ಷಗಳಲ್ಲೂ ಅವಕಾಶ ದೊರೆತಾಗಲೆಲ್ಲ ಹೆಚ್ಚಿನ ಆಸಕ್ತಿಯಿಂದ ಕ್ಲಿಕ್ಕಿಸಿದರು. ಈಗಿನ ಡಿಜಿಟಲ್ ಕ್ಯಾಮರಾ ಆಗಲಿ, ಸುಸಜ್ಜಿತ, ಸೂಕ್ಷ್ಮವಾದ ಲೆನ್ಸ್ ಸೌಲಭ್ಯವಾಗಲಿ ಇಲ್ಲದ ದಿನಗಳಲ್ಲಿ ಮಣಭಾರದ ಟ್ರೈಪೊಡ್, ಟೆಲಿ ಲೆನ್ಸ್, ಫ್ಲ್ಯಾಶ್‌ಗನ್, ಬುಲ್ಬುಗಳಾದಿ ಉಪಕರಣಗಳನ್ನು ಹೊತ್ತು, ತುಂಬಿ ತುಳುಕುತ್ತಿದ್ದ ಗ್ರಾಮಾಂತರಗಳ ಬಸ್ಸು ಹತ್ತಿ, ಇಳಿದು, ಕಾವಿಕಲೆಯಿನ್ನೂ ಅರೆಜೀವ ತಾಳಿ ಉಳಿದಿದ್ದ ತಾಣಗಳನ್ನು ಹುಡುಕಿಕೊಂಡು ಹೋದರು. ಕೆಲ ಬಾರಿ ಅನ್ನ-ನೀರುಗಳಿಲ್ಲದೇ ಕ್ಲಿಕ್ಕಿಸಿದರು. ಬೆಳಕಿನ ಸೌಲಭ್ಯದಿಂದ ವಂಚಿತರಾಗಿ, ಪೇಚಾಡುತ್ತ ಹಿಂದಿರುಗಿದ ಪ್ರಸಂಗಗಳಿದ್ದವು. ಅವರ ಆ ಪರಿಶ್ರಮದ ಫಲವಾಗಿ ಅಂದು ಅವರ ಕ್ಯಾಮರಾ ಕಣ್ಣಿಗೆ ಕಂಡು, ಹಿಡಿದಿಟ್ಟ ಚಿತ್ರಗಳೇ 'ಕಾವಿಕಲೆ' ಪುಸ್ತಕದಲ್ಲಿ ಉಳಿದುಕೊಂಡಿವೆ. ಅವರ ಸ್ವಾನುಭವ ಹಾಗೂ ಕಲಾಪ್ರಕಾರಗಳ ತೌಲನಿಕ ಅಧ್ಯಯನದ ಚಿತ್ರವು 'ಕಾವಿ ಕಲೆ'ಯಲ್ಲಿ ಮೂಡಿದೆ. ಕಣ್ಮರೆಯಾದ ವಿಶಿಷ್ಟ ಕಲಾಪ್ರಕಾರವೊಂದು ಅಧ್ಯಯನ ರೂಪದಲ್ಲಿ ಮೊದಲ ಬಾರಿಗೆ ಬೆಳಕು ಕಾಣುವಂತಾಯಿತು. ಆನಂತರದ ವರ್ಷಗಳಲ್ಲಿ, ಅಳಿದು ಉಳಿದ ಚಿತ್ರಗಳೂ ನಶಿಸಿ ಹೋಗಿವೆ.

ಖ್ಯಾತ ಕಲಾವಿಮರ್ಶಕರೂ, 'ತರಂಗ' ವಾರ ಪತ್ರಿಕೆಯ ಸಂಪಾದಕರೂ ಆಗಿದ್ದ ದಿ. ಸಂತೋಷಕುಮಾರ ಗುಲ್ವಾಡಿ ಅವರು, "ಇನ್ನು ಮುಂದೆ ಕಾವಿಚಿತ್ರಗಳನ್ನು ಕಾಮತರ ಕೃತಿಗಳಲ್ಲಿ ಅಷ್ಟೇ ಕಾಣುವಂತಾಗಬಹುದು!" ಎಂದು 2000ನೇ ವರ್ಷದಲ್ಲಿ ಉದ್ಗರಿಸಿದ್ದರು. ಅವರ ಮಾತು ನಿಜವಾಯ್ತು.

ಪುಸ್ತಕ ರೂಪದಲ್ಲಿ ಮೂಡಿಸಿದ ಚಿತ್ರಗಳೂ ಮಾಯವಾಗುವುದರಲ್ಲಿದ್ದವು! ಮೊದಲ ಮುದ್ರಣದ ಪ್ರತಿಗಳೆಲ್ಲ ತೀರಿ ಹೋಗಿ ಒಂದೂವರೆ ದಶಕ ಕಳೆದಿತ್ತು. ಈಗ ಕಣ್ಮರೆಯಾದ ಈ ಕಲೆ ಕುರಿತ ಅಪರೂಪದ ಕೃತಿ, ಮರುಮುದ್ರಣ ಕಾಣುತ್ತಿರುವುದು ಪ್ರಕಾಶಕ ಡಾ. ಎಂ. ಬೈರೇಗೌಡ ಅವರ ಆಸಕ್ತಿಯಿಂದಾಗಿ. ಮೊದಲ ಮುದ್ರಣವನ್ನು ಅಂದಿನ ಲಲಿತಕಲಾ ಅಕಾಡೆಮಿ ಅಧ್ಯಕ್ಷ, ಹೆಸರಾಂತ ಕಲಾವಿದ, ಕಲಾವಿಮರ್ಶಕ ದಿ. ಪಿ.ಆರ್. ತಿಪ್ಪೇಸ್ವಾಮಿ ಅವರ ಪ್ರೋತ್ಸಾಹ, ಕೃಷ್ಣಾನಂದ ಕಾಮತರ ಆಪ್ತ ಸ್ನೇಹಿತ ಡಾ. ಅ.ಲ. ನರಸಿಂಹನ್ ಅವರ ಒತ್ತಾಸೆಯಿಂದಾಗಿ ಹೊರಬಂದಿತ್ತು. ಅವರನ್ನೂ ಮರುಮುದ್ರಣದ ಸಾಹಸಕ್ಕೆ ಕೈ ಹಾಕಿದ ಬೈರೇಗೌಡ ಅವರನ್ನೂ ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇನೆ. ಬಣ್ಣದ ಚಿತ್ರಗಳನ್ನು ನೀಡಿರುವ ಡಿ.ಜಿ. ಮಲ್ಲಿಕಾರ್ಜುನ ಅವರಿಗೆ ಆಭಾರಿ.

ಹೊನ್ನಾವರ

ಡಾ. ಜ್ಯೋತ್ಸ್ನಾ ಕೃಷ್ಣಾನಂದ ಕಾಮತ್


सूर्य मंडल

ಚಿತ್ರಗಳಿರುವ ಊರುಗಳು

ಕಾವಿ ಚಿತ್ರಗಳ ಅಂದ ಚಂದಗಳನ್ನು ವಿವರಿಸುವಾಗ ಅವುಗಳು ಎಲ್ಲಿವೆ? ಎಂದು ಹೇಳುವುದು ಅನಿವಾರ್ಯವಾಗುತ್ತದೆ. ಅಂತೆಯೇ ಪ್ರತಿಯೊಂದು ಊರಿನಲ್ಲಿರುವ ದೇವಾಲಯಗಳಲ್ಲಿ ಮಾದರಿಯಾಗಿ ಒಂದೊಂದನ್ನು ಆರಿಸಿ ಅವುಗಳಿರುವ ಊರು, ಜಿಲ್ಲೆ, ತಾಲ್ಲೂಕುಗಳನ್ನು ಈ ಕೆಳಗೆ ನಮೂದಿಸಲಾಗಿದೆ. ಪಠ್ಯದಲ್ಲಿ ಈ ದೇವಾಲಯಗಳನ್ನು ಕೇವಲ ಊರ ಹೆಸರಿನಿಂದ ಮಾತ್ರ ಗುರುತಿಸಲಾಗಿದೆ. ಉದಾಹರಣೆಗಾಗಿ, 'ಹೊಸಾಡ ಶೈಲಿ' ಎಂದರೆ 'ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿರುವ ಹೊಸಾಡದ ಮುಖ್ಯಪ್ರಾಣ, ಲಕ್ಷ್ಮಿ ವೆಂಕಟೇಶ ದೇವಸ್ಥಾನದ ಗೋಡೆಗಳನ್ನು ಅಲಂಕರಿಸಿದ ಕಾವಿ ಚಿತ್ರಗಳ ಶೈಲಿ' ಎಂದು ಅರ್ಥೈಸಿಕೊಳ್ಳಬೇಕು.

	ಊರು	ಜಿಲ್ಲೆ	ತಾಲ್ಲೂಕು	ದೇವಾಲಯ
1.	ಅಘನಾಶಿನಿ	ಉತ್ತರ ಕನ್ನಡ	ಕುಮಟಾ	ನಾರಾಯಣ
2.	ಅವರ್ಸಾ	ಉತ್ತರ ಕನ್ನಡ	ಅಂಕೋಲಾ	ಶ್ರೀರಾಮ
3.	ಅಗ್ರಹಾರ	ಉತ್ತರ ಕನ್ನಡ	ಕುಮಟಾ	ವಿಷ್ಣು
4.	ಅಮದಳ್ಳಿ	ಉತ್ತರ ಕನ್ನಡ	ಕಾರವಾರ	ಹನುಮಂತ
5.	ಅಂಕೋಲಾ	ಉತ್ತರ ಕನ್ನಡ	ಅಂಕೋಲಾ	ಆರ್ಯದುರ್ಗಾ
6.	ಕವಳೆ	ಗೋವಾ		ಶಾಂತಾ ದುರ್ಗಾ
7.	ಕುಮಟಾ	ಉತ್ತರ ಕನ್ನಡ	ಕುಮಟಾ	ಮಹಾಳಸಾ ನಾರಾಯಣಿ
8.	ಕುಂದಾಪುರ	ದಕ್ಷಿಣ ಕನ್ನಡ	ಕುಂದಾಪುರ	ವೆಂಕಟೇಶ
9.	ಕೆಕ್ಕಾರ	ಉತ್ತರ ಕನ್ನಡ	ಹೊನ್ನಾವರ	ಮಾರುತಿ
10.	ಕೊಲ್ಲೂರು	ದಕ್ಷಿಣ ಕನ್ನಡ	ಉಡುಪಿ	ಮೂಕಾಂಬಿಕಾ
11.	ಗುಣವಂತೆ	ಉತ್ತರ ಕನ್ನಡ	ಹೊನ್ನಾವರ	ಈಶ್ವರ
12.	ಗೋಕರ್ಣ	ಉತ್ತರ ಕನ್ನಡ	ಕುಮಟಾ	ಜೀವೋತ್ತಮ ಮಠ
13.	ಚಿತಾಕುಲಿ	ಉತ್ತರ ಕನ್ನಡ	ಕಾರವಾರ	ನಾಗೇಶ
14.	ಬನವಾಸಿ	ಉತ್ತರ ಕನ್ನಡ	ಸಿರ್ಸಿ	ಮಧುಕೇಶ್ವರ
15.	ಬರ್ಗಿ	ಉತ್ತರ ಕನ್ನಡ	ಅಂಕೋಲಾ	ಘೋಳಿಬೀರ
16.	ಬಳಲೆಗ್ರಾಮ	ಉತ್ತರ ಕನ್ನಡ	ಅಂಕೋಲಾ	ದೇವಿ
17.	ಬಿಚೋಲಿ	ಗೋವಾ		ವೇತಾಳ
18.	ಬಾಂದೋಡೆ	ಗೋವಾ		ಮಹಾಲಕ್ಷ್ಮಿ
19.	ಬಾಂದಿವಡೆ	ಗೋವಾ		ನಾಗೇಶಿ
20.	ಬಾಳೆಗದ್ದೆ	ಉತ್ತರ ಕನ್ನಡ	ಹೊನ್ನಾವರ	ಈಶ್ವರ
21.	ಬಿಳಿಗಿ	ಉತ್ತರ ಕನ್ನಡ	ಸಿದ್ದಾಪುರ	ನಾರಾಯಣ
22.	ಮಂಗಳೂರು	ದಕ್ಷಿಣ ಕನ್ನಡ	ಮಂಗಳೂರು	ವೀರ ವಿಠ್ಠಲ
23.	ಮಾಜಾಳಿ	ಉತ್ತರ ಕನ್ನಡ	ಕಾರವಾರ	ಗ್ರಾಮದೇವತೆ
24.	ಮಾವಿನಕುರ್ವೆ	ಉತ್ತರ ಕನ್ನಡ	ಹೊನ್ನಾವರ	ಅಮ್ಮನವರು

25.	ಮಾಸೆಲ್	ಗೋವಾ		ದೇವಕಿಕೃಷ್ಣ ರವಳನಾಥ
26.	ಪರತಕಾಳ	ಗೋವಾ		ಜೀವೊತ್ತಮ
27.	ಶಿರಾಲಿ	ಉತ್ತರ ಕನ್ನಡ	ಭಟ್ಕಳ	ಹನುಮಾನ
28.	ಶೆಟಗೇರಿ	ಉತ್ತರ ಕನ್ನಡ	ಅಂಕೋಲಾ	ದೇವಿ
29.	ಸದಾಶಿವಗಡ	ಉತ್ತರ ಕನ್ನಡ	ಕಾರವಾರ	ದುರ್ಗಾ
30.	ಶಿರ್ಸಿ	ಉತ್ತರ ಕನ್ನಡ	ಶಿರ್ಸಿ	ಮಾರಿಕಾಂಬಾ
31.	ಹಳದೀಪುರ	ಉತ್ತರ ಕನ್ನಡ	ಹೊನ್ನಾವರ	ವೆಂಕಟರಮಣ
32.	ಹೊನ್ನಾವರ	ಉತ್ತರ ಕನ್ನಡ	ಹೊನ್ನಾವರ	ಶ್ರೀರಾಮ ಮಂದಿರ



ವಿಷಯ ಸೂಚಿ



ದ್ರೌಪದಿ



ನಾಚೋಲಿಯ ಸಿಂಹ



ಸುಂದರವಾದ ಸಂಯೋಜನೆ

1. ಕರಾವಳಿಯ ದೇವಾಲಯಗಳು

ಚಾಲುಕ್ಯರ ಬಾದಾಮಿ ಗುಹಾಲಯಗಳು, ರಾಷ್ಟ್ರಕೂಟರ ಬೃಹತ್ ಶಿಲೆಯ ದೇವಾಲಯಗಳು, ಹೊಯ್ಸಳರ ಮಿದುಗಲ್ಲಿನ ದೇವಾಲಯಗಳು, ವಿಜಯನಗರ ಕಾಲದ ಗಟ್ಟಿ ಪಾಷಾಣದ ದೇವಾಲಯಗಳು, ಕರ್ನಾಟಕದ ಕರಾವಳಿಯಲ್ಲಿ ಇಲ್ಲವೇ ಇಲ್ಲ. ಜೂನ್ ತಿಂಗಳಿನಿಂದ ಸೆಪ್ಟೆಂಬರದವರೆಗೆ ಸತತವಾಗಿ ಸುರಿಯವ ಮುಂಗಾರು ಮಳೆಯ ಅಬ್ಬರವನ್ನು ಈ ಅಂದದ ದೇವಾಲಯಗಳಿಂದ ತಾಳಿಕೊಳ್ಳುವುದು ಸಾಧ್ಯವೇ ಇಲ್ಲ. ಅಂತೆಯೇ ಪಶ್ಚಿಮ ಕರಾವಳಿಯ ಉದ್ದಕ್ಕೂ ವಿಶಿಷ್ಟವಾದ ದೇವಾಲಯದ ವಾಸ್ತುಶಿಲ್ಪ ಬೆಳೆದು ಬಂದಿದೆ. ಶಿಲಾಸಂಗ್ರಹ ಹೆಚ್ಚಾಗಿರದ್ದರಿಂದ, ಸಹ್ಯಾದ್ರಿ ಪರ್ವತಾವಳಿಗಳಲ್ಲಿ ಬಂಡೆಗಲ್ಲುಗಳನ್ನು ಕೊರೆದು ಪಡೆಯುವ ಮರಗಲ್ಲುಗಳಿಂದಲೇ ಕಟ್ಟಡಗಳನ್ನು ನಿರ್ಮಿಸುತ್ತಾರೆ. ಈ ಬೆಟ್ಟಗಳಲ್ಲಿ ಕಬ್ಬಿಣದ ಆದಿರು ಸಂಚಯವಾಗಿರುವುದರಿಂದ ಅವು ಕೆಂಬಣ್ಣ ತಳೆದಿರುತ್ತವೆ. ಈ ಮರಗಲ್ಲುಗಳು ಮಿದು ಮತ್ತು ಗಟ್ಟಿಮಣ್ಣಿನಿಂದ ನಿರ್ಮಿತವಾಗಿರುವುದರಿಂದ ಜಡಿಮಳೆಗೆ ಮಿದುಮಣ್ಣು ಹರಿದುಹೋಗಿ ಗಟ್ಟಿಮಣ್ಣಿನ ಹಂದರ ಮಾತ್ರ ಉಳಿದುಕೊಳ್ಳುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ಕಟ್ಟಡದ ಕೆಲಸ, ಮಳೆಗಾಲ ಮುಗಿದ ನಂತರ, ಅಂದರೆ ನವೆಂಬರ್ ತಿಂಗಳಲ್ಲಿ ಪ್ರಾರಂಭಿಸಿ ಮೇ ತಿಂಗಳೊಳಗಾಗಿ ಮುಗಿಸಬೇಕಾಗುತ್ತದೆ.

ಮರಗಲ್ಲುಗಳನ್ನು ಕೊರೆಯುವ ತಜ್ಞರು ಕರಾವಳಿಯ ಉದ್ದಕ್ಕೂ ಇದ್ದಾರೆ. ಅವರು ಹಾರೆ, ಪಿಕಾಸುಗಳ ನೆರವಿನಿಂದ ಒಂದೂವರೆ ಅಡಿ ಉದ್ದ ಒಂಬತ್ತು ಇಂಚು ದಪ್ಪದ ಕಲ್ಲುಗಳನ್ನು ಸಿದ್ಧಮಾಡುವುದು ವಾಡಿಕೆ. ಅವನ್ನು ಎತ್ತಿನಗಾಡಿಯಲ್ಲಿ ಕಟ್ಟಡದ ಸ್ಥಳಕ್ಕೆ ಸಾಗಿಸುತ್ತಾರೆ. ಸ್ಥಾನೀಯಗಾಂವಡಿಗಳು (ಗಾರೆಯವರು) ಅವನ್ನು ಕೆತ್ತಿಕೊಂಡು ಸಮಪಾತಳಿಯವನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಅವನ್ನು ಜೋಡಿಸಲು ಅಲ್ಲಿಯೇ ಲಭ್ಯವಿರುವ ಸಾಮಗ್ರಿಯಿಂದಲೇ ಗಚ್ಚು ಸಿದ್ಧಮಾಡಿಕೊಳ್ಳುತ್ತಾರೆ. ಕಡಲ ದಂಡೆಯಲ್ಲಿ ವಿಫುಲವಾಗಿ ದೊರೆಯುವ ಸಿಂಪುಗಳನ್ನು ಸುಟ್ಟು ಬೆಣ್ಣೆಯಂತೆ ನುಣಪಾದ ಸುಣ್ಣ ತಯಾರಿಸಿ, ಹುಳಿಯಾದ ಬೆಲ್ಲ, ಮರಳು, ಬೆಣಚುಗಲ್ಲಿನ ಹುಡಿಯೊಂದಿಗೆ ಎರಡು ವಾರ ಕೊಳೆಹಾಕುತ್ತಾರೆ. ನಂತರ ಹೆಣ್ಣಾಳುಗಳು ದಪ್ಪವಾದ ಒನಕೆಗಳಿಂದ ಚೆನ್ನಾಗಿ ಕುಟ್ಟಿ ಮಿಶ್ರಣವನ್ನು ಹದಮಾಡುತ್ತಾರೆ. ಗಚ್ಚು, ಹೆಚ್ಚಿನ ಪ್ರಮಾಣದಲ್ಲಿ ಬೇಕಿದ್ದರೆ, ವರ್ತುಲಾಕಾರದ ಕಲ್ಲುಗಳನ್ನು ಎತ್ತುಗಳ ನೆರವಿನಿಂದ ತಿರುವಿಸಿ, ತಯಾರಿಸುತ್ತಾರೆ. ಈ ಗಚ್ಚು, ಎಂಥ ಜಡಿಮಳೆ, ಬಿರುಗಾಳಿ, ಉರಿಯುವ ಬಿಸಿಲನ್ನೂ ಐದಾರು ಶತಕಗಳವರೆಗೆ ತಡೆದುಕೊಳ್ಳುತ್ತದೆ ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.



ಅಂಕಣದ ವಿವರಗಳು

ಮರಗಲ್ಲುಗಳು ವಿಪರೀತ ಭಾರವಾಗಿರುವುದರಿಂದ ದಪ್ಪ ಗೋಡೆಗಳನ್ನು ನಿರ್ಮಿಸಲೇಬೇಕಾಗುತ್ತದೆ. ಮಹಡಿಗಳನ್ನು ನಿರ್ಮಿಸುವ ವಿಚಾರವಿದ್ದರೆ, ಭದ್ರವಾದ ಅಡಿಪಾಯ ಹಾಕಲೇಬೇಕಾಗುತ್ತದೆ. ಒಂದು ಅಥವಾ ಎರಡಕ್ಕಿಂತ ಹೆಚ್ಚಿನ ಮಹಡಿಗಳ ಕಟ್ಟಡ ನಿಲ್ಲಿಸುವುದು ಅಸಾಧ್ಯವಾದ ಮಾತು. ಅಲ್ಲದೇ ಮಹಡಿಯ ಭಾರ ತಡೆದುಕೊಳ್ಳಲು ಅಲ್ಲಲ್ಲಿ ದಪ್ಪ ದಪ್ಪ ಕಂಬಗಳನ್ನು ನಿಲ್ಲಿಸಬೇಕಾಗುತ್ತದೆ. ನಿತ್ಯಹರಿತ್ ಅರಣ್ಯಗಳಲ್ಲಿ ಲಭ್ಯವಿರುವ ಇಮಾರತಿ ಕಟ್ಟಿಗೆಯನ್ನು ಧಾರಾಳವಾಗಿ ಬಳಸುವ ಪದ್ಧತಿಯೂ ಬೆಳೆದುಬಂದಿದೆ. ತೇಗ, ನಂದಿ, ಹಲಸು, ಮಾವುಗಳ ದಿಂಡುಗಳನ್ನು ಬಳಸುವುದು ಸಾಮಾನ್ಯ. ಮಾಡಿಗೆ ಜಂತಿ, ತೊಲೆ, ಪತ್ತಾಸುಗಳಿಗೆ ಬೆಲೆಬಾಳುವ ಕೊರಡನ್ನೇ ಬಳಸಲಾಗುತ್ತಿದೆ. ಮಳೆ ನೀರು ಶೀಘ್ರವಾಗಿ ಜಾರಿಹೋಗುವಂತೆ ಮಾಡನ್ನು ಇಳಿಜಾರಾಗಿ ನಿರ್ಮಿಸಲಾಗುತ್ತದೆಯಲ್ಲದೇ ಅವುಗಳಿಗೆ ನಾಡ ಹಂಚು ಇಲ್ಲವೇ ಮಂಗಳೂರು ಹೆಂಚುಗಳನ್ನು ಹೊದೆಯಿಸಲಾಗುತ್ತದೆ. ಗರ್ಭಗುಡಿಯ ಸೂರಿಗೆ ತಾಮ್ರದ ತಗಡುಗಳನ್ನೂ ಜೋಡಿಸುವವರು ಇಲ್ಲದಿಲ್ಲ. ಈ ವಿಶಿಷ್ಟವಾದ ಶಿಲ್ಪ, ಕರಾವಳಿಯಲ್ಲಿ ಮಾತ್ರ ಹುಟ್ಟಿ ಬೆಳೆದು ಬಂದಂತಹದು.

ಕರ್ನಾಟಕದ ಕರಾವಳಿಯಲ್ಲಿ (ಘಟ್ಟದ ಪ್ರದೇಶ ಒಳಗೊಂಡು)ನಾಲ್ಕು ಸಹಸ್ರಕ್ಕೂ ಮಿಕ್ಕಿದ ಗುಡಿ, ದೇವಾಲಯ, ಜಿನಾಲಯ, ಬಸದಿ, ಭೂತಗ್ರಹಗಳು, ಮಠಗಳು ಇವೆ. ಸಾರ್ವಜನಿಕ ಸಂಸ್ಥೆಗಳನ್ನು ಆಯ್ಕೆಯಾದ ಸದಸ್ಯರು ನಡೆಸಿದರೆ, ಒಂದೇ ಜಾತಿಯವರಿಗೆ ಮೀಸಲಾದವುಗಳ ವಹಿವಾಟನ್ನು ಅವರ ಮುಖಂಡರೇ ನೋಡಿಕೊಳ್ಳುತ್ತಾರೆ. ಒಂದು ಕುಟುಂಬಕ್ಕೆ ಸೇರಿದವುಗಳು ವೈಯಕ್ತಿಕ ಆಸ್ತಿಯ ಭಾಗವಾಗಿ ಉಳಿದುಕೊಂಡಿವೆ. ಕೆಲವು ಪೂಜಾ ಸ್ಥಾನಗಳಲ್ಲಿ ಅರ್ಚಕರು, ವ್ಯವಸ್ಥಾಪಕರು, ವಂಶಪಾರಂಪರಿಕವಾಗಿ ನೇಮಕಗೊಂಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಕಟ್ಟಡಗಳ ಮೇಲೆ ಗೋವಾದ ವರ್ಚಸ್ಸು ಎದ್ದು ಕಂಡರೆ, ದಕ್ಷಿಣ ಕನ್ನಡದವುಗಳ ಮೇಲೆ ಕೆಲಮಟ್ಟಿಗೆ ಕೇರಳದ ವಾಸ್ತುವಿನ ಅನುಕರಣೆ ಆಗಿದೆ. ಹೆಚ್ಚಿನವುಗಳು ಚಚ್ಚೌಕು ಇಲ್ಲವೇ ದೀರ್ಘ ಚಚ್ಚೌಕ ಆಕಾರದಲ್ಲಿ ನಿರ್ಮಿತವಾಗಿದ್ದರೂ, ದಕ್ಷಿಣ ಕನ್ನಡದ ದೇವಸ್ಥಾನಗಳು ಕೆಲವು, ಗಜಪೃಷ್ಠಾಕಾರ ಇಲ್ಲವೇ ಮಂಡಲ ಆಕಾರದಲ್ಲೂ ನಿರ್ಮಿತವಾಗಿದೆ.

ವಿಸ್ತಾರವಾದ ಪ್ರಕಾರದಲ್ಲಿ ನಡುವೆ ಪೂಜಾಸ್ಥಾನವು ತಲೆ ಎತ್ತಿ ನಿಲ್ಲುವುದು ಸಾಮಾನ್ಯ. ಮುಖ್ಯ ಕಟ್ಟಡದ ಹೊರಗೋಡೆಗಳನ್ನು ಕಾವಿಚಿತ್ರಗಳಿಂದ ಅಲಂಕರಿಸುವುದರಿಂದ, ಅವು ದೂರದಿಂದಲೇ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತವೆ. ಇವುಗಳನ್ನು ಆಧರಿಸಿಯೇ ಒಳಕ್ಕೆ ಚಿತ್ರಿ ಇರುವವನ್ನು, ಇಲ್ಲದವುಗಳಿಂದ ಸುಲಭದಲ್ಲಿ ಬೇರ್ಪಡಿಸಬಹುದು. ಹೆಬ್ಬಾಗಿಲು ದಾಟಿ ಒಳಗೆ ಹೋದರೆ ವಿಸ್ತಾರವಾದ ಪೌಳಿಗಳು ಗೋಚರಿಸುತ್ತವೆ. ಅಪರೂಪಕ್ಕೆ ಜಗಲಿಯ ಗೋಡೆಗಳನ್ನು ಚಿತ್ರಗಳು ಅಲಂಕರಿಸುವುದುಂಟು. ಪ್ರಧಾನ ಪ್ರದಕ್ಷಿಣಾವಲಯ, ವಿಸ್ತಾರವಾಗಿರುವುದರಿಂದ ಭಕ್ತಾದಿಗಳು ತಮ್ಮ ಮೆಚ್ಚಿಗೆಯ ದೇವ-ದೇವತೆಗಳಿಗೆ ಯಥೇಷ್ಟ ಪ್ರದಕ್ಷಿಣೆಗಳನ್ನು ಹಾಕಬಹುದು. ಗರ್ಭಗುಡಿ ಮತ್ತು ನವರಂಗಗಳನ್ನು ಕೂಡಿಯೇ ರಚಿಸುವುದು, ಈ ದೇವಾಲಯಗಳ ವೈಶಿಷ್ಟ್ಯ. ಈ ಇಮಾರತಿನ ಹೊರ ಗೋಡೆಗಳನ್ನು ಕಾವಿ ಚಿತ್ರಗಳಿಂದ ತುಂಬಿಸುವಂತೆ ಮಾಡಲಾಗುತ್ತದೆ. ಗರ್ಭಗೃಹದ ಮೇಲಿರುವ ಒಂದು ಅಥವಾ ಎರಡು ಮಹಡಿಯ ಹೊರ ಗೋಡೆಗಳ



ಕಂಸನ ಮಂತ್ರಿ ಅಕ್ರೂರ

ಮೇಲೂ ಚಿತ್ರಗಳು ವಿರಾಜಿಸುತ್ತವೆ. ಈ ಮಹಡಿಗಳನ್ನು ಒಂದರಿಂದ ಐದು ಕಲಶಗಳಿಂದ ಅಲಂಕರಿಸಲಾಗುತ್ತದೆ.

ಮರಗಲ್ಲಿನಲ್ಲಿ ಕುಸುರಿ ಕೆಲಸ, ಚಿತ್ರಪಟ್ಟಿಕೆಗಳನ್ನು ಕೊರೆಯುವುದು ಸುಲಭ ಸಾಧ್ಯವಾದ ಕೆಲಸವಲ್ಲದ್ದರಿಂದ ತೋರಿಕೆಯ ಕಂಬ, ಕಮಾನು, ಕಿಟಕಿ, ಬಾಗಿಲುಗಳನ್ನು ನಿರ್ಮಿಸಿ ದೇವಾಲಯಗಳಿಗೆ ಭವ್ಯತೆ ಬರುವಂತೆ ಮಾಡಲಾಗುತ್ತಿದೆ. ಪ್ರತಿಯೊಂದು ಚಿತ್ರಕ್ಕಾಗಿ ಉಬ್ಬು ಇಲ್ಲವೇ ತಗ್ಗುಗಳನ್ನು ನಿರ್ಮಿಸಲಾಗುತ್ತದೆ. ಇವುಗಳು ವೀಕ್ಷಕರ ಕಣ್ಣಿನ ಪಂಕ್ತಿಗಿಂತ ಎತ್ತರದಲ್ಲಿ ಇರುವುದು ತೀರ ಸಾಮಾನ್ಯ. ಚಿತ್ರ ಪಂಕ್ತಿಯ ಅಡಿಯಲ್ಲಿ ಅಲಂಕಾರ ಪಟ್ಟಿಗಳನ್ನು ರಚಿಸುವುದೂ ಉಂಟು. ಪ್ರತಿಯೊಂದು ದೇವ-ದೇವತೆಯ ಚಿತ್ರಗಳಿಗೆ ಹಿನ್ನೆಲೆಯಲ್ಲಿ ಪ್ರಭಾವಳಿಯನ್ನು ರೂಪಿಸುವುದು ಪರಿಪಾಠ. ಇವುಗಳು ಛಾಯಾಚಿತ್ರವೊಂದಕ್ಕೆ ಕಟ್ಟುಹಾಕಿದಂತೆ ಇದ್ದಿರಬಹುದು, ಇಲ್ಲವೇ ಅತಿಸೂಕ್ಷ್ಮ ರೇಖೆಗಳಿಂದ ಕೂಡಿದ್ದಿರಬಹುದು. ಅರೆವರ್ತುಲ, ವರ್ತುಲ, ತೋರಣ, ಕಮಲ, ಮುಕುಟ, ಸಿಂಹ-ಲಲಾಟ, ಕಳಶಗಳಿರುವ ಪ್ರಭಾವಳಿಗಳನ್ನು ನೋಡಬಹುದಾಗಿದೆ. ಜನಸಾಮಾನ್ಯರನ್ನು ಚಿತ್ರಿಸುವಾಗ ಪ್ರಭಾವಳಿ ಬದಲಾಗಿ ಕಂಬ-ಕಮಾನುಗಳನ್ನಾಗಲಿ, ದಪ್ಪ ಗೀರುಗಳನ್ನಾಗಲಿ ಎಳೆದುಬಿಡುತ್ತಾರೆ.

ಹಂಪಿ, ಹಿರಿಯೂರು, ಲೇಪಾಕ್ಷಿ, ಸೀಬಿ, ಸಿರಾ, ಶ್ರವಣಬೆಳಗೊಳ, ಶ್ರೀರಂಗಪಟ್ಟಣ ಮತ್ತು ಇನ್ನಿತರ ದೇವಾಲಯಗಳಲ್ಲಿ, ಕಾಣಬಹುದಾದ ಬಹುವರ್ಣೀಯ ಭಿತ್ತಿ-ಚಿತ್ರಗಳು ಕರ್ನಾಟಕದ ಕರಾವಳಿಯಲ್ಲಿ ಎಲ್ಲೂ ಕಾಣಸಿಗುವುದಿಲ್ಲ. ಅದರಂತೆ ಮೈಸೂರು ಆಳರಸರ ಕಾಲದಲ್ಲಿ ರೂಪಗೊಂಡ ಜೆಸ್ಸೊ ಕಲೆ. ಚಿತ್ರಗಳೂ ಇಲ್ಲ. ಜಡಿಮಳೆ, ಆರ್ದ್ರ ಹವೆಗಳಿಂದಾಗಿ ಇಂಥ ಚಿತ್ರಗಳು, ಅತ್ಯಲ್ಪ ಅವಧಿಯಲ್ಲಿ ತಮ್ಮತನವನ್ನು ಕಳೆದುಕೊಳ್ಳುವುದರಿಂದ, ಕರಾವಳಿಯ ಜನ, ತಮ್ಮ ಕಲಾಭಿರುಚಿಯನ್ನು ಕಾವಿ (ಕ್ಯಾವಿ) ಚಿತ್ರಗಳ ಮೂಲಕವೇ ಸೂರೆಗೊಂಡಿದ್ದಾರೆ. ಸ್ಥಾನೀಯವಾಗಿ "ಹುರಮುಂಜಿ" ಎಂದು ಕರೆಯಲ್ಪಡುವ ಕಾವಿ ಮಣ್ಣು ಹೊನ್ನಾವರದಿಂದ ಎರಡು ಕಿಲೋಮೀಟರ್ ದೂರದಲ್ಲಿ, ಅರಬೀಸಮುದ್ರದಲ್ಲಿದ್ದ ಬಸವರಾಜ ದುರ್ಗ ದ್ವೀಪದಲ್ಲಿ ವಿಪುಲವಾಗಿ ಸಿಗುತ್ತದೆಂದು ಇತಿಹಾಸದ ಪುಟಗಳು ಸಾರಿ ಹೇಳುತ್ತವೆ. ಇದನ್ನು ಮನೆಗಳ ಗೋಡೆ, ನೆಲಗಳಿಗೆ ಕೆಂಪು ಮೆರಗು ಕೊಡಲು ಬಳಸುವುದರಿಂದ ಎಲ್ಲ ಕಡೆಯಲ್ಲಿ ಕಡಿಮೆ ಬೆಲೆಯಲ್ಲಿ ಕೊಳ್ಳಬಹುದಾಗಿದೆ.

'ಫ್ರೆಸ್ಕೊ' ಭಿತ್ತಿಚಿತ್ರಗಳಂತೆ, ಗಿಲಾಯಿ ಹಸಿಯಿದ್ದಾಗಲೇ ಈ ಚಿತ್ರಗಳ ನಿರ್ಮಾಣದ ಕೆಲಸ ಮುಗಿಸಿಬಿಡಬೇಕಾಗುವುದರಿಂದ, ಸಕಲ ವಿವರಗಳನ್ನು ಮುಂಚಿತವಾಗಿಯೇ ಗುರುತು ಹಾಕಿಕೊಳ್ಳಲೇಬೇಕಾಗುತ್ತದೆ. ಚಿತ್ರ ನಿರ್ವಹಣೆಗೆ ತಜ್ಞ ಗಾವುಂಡಿಗಳ ತಂಡ ಬೇರೆಯೇ ಇರುತ್ತದೆ. ಚಿತ್ರ ರಚನೆಗೆ ಕಲಾಕಾರನಿಂದ ಬಾಹ್ಯ ರೇಖೆಗಳನ್ನು ಕಾಗದದ ಮೇಲೆ ಗುರುತು ಹಾಕಿಸಿಕೊಂಡು ಅವನ್ನು ಗೋಡೆ-ಮಾಡುಗಳ ಮೇಲೆ ಹೇಗೆ ರೂಪಿಸಬಹುದೆಂದು ನಿರ್ಧರಿಸಲಾಗುತ್ತಿತ್ತು. ಗೋಡೆಗಾಗಿ ಬಳಸಿದ ಮರಗಳನ್ನು ಜೋಡಿಸಿದಂತಹ ಗಚ್ಚನ್ನೇ ಗಿಲಾಯಿಗಾಗಿ ಬಳಸಲಾಗುತ್ತದೆ. ಬೆಣ್ಣೆಯಂತೆ ನಯವಾದ, ಹಿಮದಷ್ಟು ಬಿಳಿಯಾದ ಸುಣ್ಣದಲ್ಲಿ ಕಾವಿ ಹುಡಿಯನ್ನು ಸೇರಿಸಿ ಪಾಯಸದಷ್ಟು ದಪ್ಪ



ಶಿವ ಪಾರ್ವತಿ



ಶೇಷಶಾಯಿ

ಮಿಶ್ರಣ ಸಿದ್ಧಮಾಡಿಕೊಳ್ಳಲಾಗುತ್ತದೆ. ಇದನ್ನು ತಾಪಿಯಿಂದ ಚಿತ್ರ ನಿರ್ಮಾಣ ಸ್ಥಳದಲ್ಲಿ ಏಕಪ್ರಕಾರವಾಗಿ ಲೇಪಿಸಿಕೊಳ್ಳುತ್ತಾರೆ. ಒಂದು ಗಳಿಗೆಯ ನಂತರ ಅನವಶ್ಯಕ ಮಿಶ್ರಣವನ್ನು ತಾಪಿಯಿಂದಲೇ ಬೇರ್ಪಡಿಸುವುದರಿಂದ ಶುಭ್ರ ಬಿಳಿ ಗೋಡೆಯ ಮೇಲೆ ರಕ್ತವರ್ಣದ ಚಿತ್ರಗಳು ನಲಿಯಲಾರಂಭಿಸುತ್ತವೆ. ನಾಜೂಕಿನ ವಿವರಗಳಿದ್ದಲ್ಲಿ ಉಕ್ಕಿನಕಂಟ (ಟಂಕ)ವನ್ನು ಬಳಸುತ್ತಾರೆ. ಸ್ವಲ್ಪ ಹೆಚ್ಚಾಗಿ ಕಾವಿಲೇಪ ಕಿತ್ತು ಬಂದರೆ, ತಿರುಗಿ ಲೇಪಿಸುವುದು ಸುಲಭ. ಒಂದು ದಿನದ ನಂತರ ಪ್ರತಿ ನಾಲ್ಕು ಗಂಟೆಗೊಮ್ಮೆ ನೀರು ಸಿಂಪಡಿಸುತ್ತಿದ್ದರೆ ಬಿರುಕುಬಿಡದಂತೆ ಮಾಡಬಹುದು. ನೀರು ಹನಿಸುವುದನ್ನು ಒಂದು ವಾರವಾದರೂ ಮುಂದುವರಿಸಬೇಕು. ಹೀಗೆ ಸಿದ್ಧವಾದ ಚಿತ್ರಗಳು ಚಪ್ಪಟೆಯಾಗಿ ಏಕವರ್ಣೀಯವಾಗಿದ್ದರೂ, ಅವು ತಮ್ಮದೇ ಆದ ಸರಳ, ಸ್ನಿಗ್ಧ ಸೌಂದರ್ಯದಿಂದ ಶೋಭಿಸುತ್ತವೆ.

ಶಿಲ್ಪಿ, ಉಬ್ಬುಚಿತ್ರಕಾರರು, ಭಿತ್ತಿಚಿತ್ರಗಾರರು, ಬಳಸಿದಂಥ ಸನ್ನಿವೇಶಗಳನ್ನೇ ಕಾವಿ ಚಿತ್ರಕಾರನು ಬಳಸಿಕೊಂಡರೂ, ಅವನ್ನು ರೂಪಿಸುವ ಶೈಲಿ ತೀರ ಭಿನ್ನ. ಪ್ರತಿ ಚಿತ್ರದಲ್ಲಿ ಸೇರ್ಪಡೆ ಮಾಡಿದ ವಿವರಗಳು, ನಯ ನಾಜೂಕುಗಳು, ಚಿತ್ರಕಾರನ ಅಭಿರುಚಿಯ ದ್ಯೋತಕವಾಗಿರುತ್ತವೆ. ತಜ್ಞ ಕೈಗಳು ಅತ್ಯಂತ ನಿಪುಣತೆಯಿಂದ ಪ್ರತಿಯೊಂದು ರೇಖೆಯನ್ನೂ ತಾರತಮ್ಯದಿಂದ ಮೂಡಿಸಿದ್ದರಿಂದ, ಅವನ್ನು ವೀಕ್ಷಿಸಿದಾಗ, ಬಹುವರ್ಣೀಯ ಭಿತ್ತಿಚಿತ್ರಗಳು ಕೊಡುವ ರಸಾನುಭವ ನಮ್ಮದಾಗಿರುತ್ತದೆ. ಚಿತ್ರಕ್ಕಾಗಿ ಮೀಸಲಿಟ್ಟ ಸ್ಥಳವನ್ನು ಸಂಪೂರ್ಣವಾಗಿ ಸದುಪಯೋಗಿಸುವುದು ಕಲಾಕಾರನ ಕನಸು. ಅಂತೆಯೇ ಅಂಕಣವನ್ನು ವಿವಿಧ ಆಕೃತಿಗಳಿಂದ ತುಂಬಿ ತುಳುಕಿಸುತ್ತಾನೆ. ಹಲವು ಸಲ ಚಿತ್ರಗಳು ಪ್ರಭಾವಳಿಗಳನ್ನು ಆಕ್ರಮಿಸಿಬಿಡುತ್ತವೆ. ಅಂತೆಯೇ ಈ ಚಿತ್ರಗಳನ್ನು ಕ್ಷಣಾರ್ಧದಲ್ಲಿ ನೋಡಿದರೆ ಸಾಲದು. ಇದ್ದ ಎರಡು ಕಣ್ಣಗಳನ್ನು ಹತ್ತು ಮಾಡಿಕೊಂಡು, ಮನಸ್ಸುಗೊಟ್ಟು ಅಭ್ಯಸಿಸಿದಾಗಲೇ ಅವುಗಳ ಅಂತರಂಗದಲ್ಲಿರುವ ಕಲಾವೈಖರಿಯ ಅರಿವಾಗುವುದು. ಕುಸ್ತಿ, ಕಾಳಗ, ಯುದ್ಧಗಳ ಸನ್ನಿವೇಶಗಳನ್ನು ಚಿತ್ರಿಸುವುದಕ್ಕಾಗಿ ಎರಡು ಅಥವಾ ಮೂರು ಅಂಕಣಗಳನ್ನು ಬಳಸುವುದು ತೀರ ಸಾಮಾನ್ಯ.

ಚಿತ್ರಗಳಿಗೆ ರೂಪಸಿಗಳ ಕೃತಿಯ ಮೋಹಕತೆ ಕೊಡುವ ಯತ್ನವನ್ನು ಕಾವಿ ಕಲಾಕಾರ ಮಾಡಲೇ ಇಲ್ಲ. ಅಂತೆಯೇ ಬೆಳಕು–ನೆರಳುಗಳ ಸಂಯೋಜನೆಯಿಂದ ಶರೀರದ ಉಬ್ಬು–ತಗ್ಗುಗಳನ್ನು ಚಿತ್ರಿಸಿ ಕಣ್ಣಿಗೆ ಹಬ್ಬವಾಗಿಸುವ ಹವ್ಯಾಸ ಎಲ್ಲಿಯೂ ಕಾಣುವುದೇ ಇಲ್ಲ. ದೇಹದ ವಿವರಗಳು ಕಂಡುಬರುವಂತೆ ರೇಖೆಗಳನ್ನು ಎಳೆದ, ಚಿತ್ರರಚನೆಯೇ ಈ ಕಲಾಕಾರರ ವೈಶಿಷ್ಟ್ಯವಾಗಿತ್ತು. ಸರಾಗವಾಗಿ ಓಡುವ ರೇಖಾ ಲಾಲಿತ್ಯ, ಮತ್ತು ರೇಖೆಗಳ ಸಕ್ರಿಯ ಮಿಲನವೇ ಕಾವಿ ಚಿತ್ರಗಳ ವಿಶೇಷ ವೈಖರಿ. ಸಂದರ್ಭಾನುಸಾರವಾಗಿ ದೈನ್ಯ, ರೋಷ, ಭಕ್ತಿಭಾವಗಳನ್ನು ಮುಖ ಮಂಡಲಗಳಲ್ಲಿ ಅರಳಿಸಲಾಗಿದೆ. ತೀರ ಚಿಕ್ಕ ವ್ಯಕ್ತಿಗಳನ್ನೂ ಲಕ್ಷಣವಾಗಿ ಸತ್ವಶಾಲಿಯಾಗಿ ಬಿಂಬಿಸಲು ಕಲಾಕಾರರು ಶಕ್ತಿಮೀರಿ ದುಡಿದಿರಬೇಕು. ಅಂತೆಯೇ ಈ ಚಿತ್ರಗಳನ್ನು ಪರೀಕ್ಷಿಸುತ್ತಿದ್ದಾಗ ದೇವ–ದೇವತೆಯರಿಗಿಂತ ಕಲಾಕಾರನ ಬಗ್ಗೆ ಹೆಚ್ಚು ಗೌರವ ಮೂಡುತ್ತದೆ. ಇಂಥ ಅಪೂರ್ವ ಕಲಾಕಾರರ ಜೀವನ ವೃತ್ತಾಂತದ ಬಗ್ಗೆ ನಮಗೆ ಏನೂ ತಿಳಿಯದಿರುವುದು ತೀರ ಶೋಚನೀಯ.



ಆದಿನಾರಾಯಣ

2. ಚಿತ್ರ ಶೈಲಿ

ಶಿಲ್ಪಿಗಳಂತೆ, ಭಿತ್ತಿಚಿತ್ರಕಾರರಂತೆ, ಕಾವಿ ಚಿತ್ರಕಾರನೂ ಧಾರ್ಮಿಕ ಗ್ರಂಥಗಳನ್ನೆಲ್ಲ ಅರಿತುಕೊಳ್ಳಲೇಬೇಕಾಗಿತ್ತು. ರಾಮಾಯಣ, ಮಹಾಭಾರತ, ದೇವಿಭಾಗವತ, ವಿಷ್ಣು ಮತ್ತು ಶಿವಪುರಾಣಗಳಲ್ಲಿಯ ಪ್ರಸಂಗಗಳು ಅವನಿಗೆ ಕಂಠಪಾಠವಿರುತ್ತಿದ್ದವು. ಅವುಗಳಲ್ಲಿಯ ಸನ್ನಿವೇಶಗಳನ್ನು ಅವನು ಸಂದರ್ಭಾನುಸಾರವಾಗಿ ಆರಿಸಿಕೊಳ್ಳುತ್ತಿದ್ದ. ಪ್ರತಿಮಾಲಕ್ಷಣಗಳನ್ನು ತಿಳಿದುಕೊಳ್ಳುವುದು ಅವನಿಗೆ ಅತ್ಯವಶ್ಯವಾಗಿತ್ತು. ಧ್ಯಾನ ಶ್ಲೋಕಗಳನ್ನು ಮನನ ಮಾಡಲೇಬೇಕಾಗಿತ್ತು. ಇವುಗಳ ಹಿನ್ನೆಲೆಯಲ್ಲಿ ಅವನ ಕಣ್ಣೆದುರು ಮೂಡಿಸಬೇಕಾದ ಚಿತ್ರ ತಂತಾನೇ ರೂಪಗೊಳ್ಳಲು ಸಹಾಯವಾಗುತ್ತಿತ್ತು. ನಂತರ ಆ ಆಕೃತಿಯನ್ನು ಗೋಡೆಯ ಮೇಲೆ ಚಿತ್ರಿಸಲು ಆತ ಸರ್ವಪ್ರಯತ್ನ ಮಾಡುತ್ತಿದ್ದ. ಮನಸ್ಸಿನಲ್ಲಿ ಮೂಡಿದ ವಿವರಗಳು ಕೃತಿಯಲ್ಲಿ ಇಳಿದು ಬರುವುದು ಕಷ್ಟದ್ದು. ಏಕವರ್ಣೀಯ ಚಪ್ಪಟೆ ಚಿತ್ರಗಳಲ್ಲಿ ಆಕಾರ, ಅರ್ಥ, ಭಾವ ಮತ್ತು ಸೌಂದರ್ಯವನ್ನು ಒಟ್ಟಿಗೇ ಸೇರಿಸುವುದು ಸುಲಭಸಾಧ್ಯವಲ್ಲ. ಆದರೆ ಅಂದಿನ ಕಲಾಕಾರರು ಬಿಟ್ಟು ಹೋದ ಅನೇಕಾನೇಕ ಚಿತ್ರಗಳನ್ನು ನೋಡುತ್ತಿದ್ದಂತೆ ಇವನ್ನೆಲ್ಲ ಹೇಗೆ ಸಾಧಿಸಿದರು? ಎಂದು ವಿಸ್ಮಯಪಡುತ್ತ ನಿಲ್ಲುವಂತಾಗುತ್ತದೆ. ಹೊನ್ನಾವರದ ಶ್ರೀರಾಮ ಮತ್ತು ಸರಸ್ವತಿಯರ ಮುಖಮಂಡಲಗಳು ಈ ಮಾತಿಗೆ ಉತ್ತಮ ಉದಾಹರಣೆ.

ದೇವ-ದೇವತೆಗಳು ಮಾನವಾಕೃತಿ ತಳೆದರೂ ಮನುಷ್ಯರಲ್ಲವಷ್ಟೆ? ಅವರನ್ನು, ಅವರ ಅನುಚರರನ್ನು ಅತಿಮಾನವರಾಗಿ ಚಿತ್ರಿಸುವುದಕ್ಕೆ ಅಪ್ರಾಕೃತ, ಅಸ್ವಾಭಾವಿಕ ಸ್ವರೂಪಗಳು ಅವಶ್ಯ. ಪ್ರಾಣಿಯ ಅಂಗಾಂಗಗಳು, ಅನೇಕ ಕೈಗಳು, ಹಲವಾರು ತಲೆಗಳು, ಚಿತ್ರ-ವಿಚಿತ್ರ ಭಂಗಿಗಳು, ಅಸಂಗತ ವಾಹನಗಳು, ಅನೇಕಾನೇಕ ಆಯುಧಗಳು, ಕೆಲವೊಮ್ಮೆ ವಿಕೃತ ರೂಪಗಳು ಸಹಾಯಮಾಡುತ್ತವೆ. ಅವರು, ನಿಂತಿರುವ, ಅಥವಾ ನರ್ತಿಸುವ (ಆಸೀನ), ಮಲಗಿರುವ (ಶಯಾನ) ಇಲ್ಲವೇ ಪ್ರಯಾಣ ಮಾಡುವ (ಯಾನಾಕ) ಭಂಗಿಯಲ್ಲಿರುವುದು ಸಂಪ್ರದಾಯ. ಈ ದೇವ-ದೇವತೆಗಳಿಗೆ ಎರಡು, ನಾಲ್ಕು, ಆರು, ಎಂಟು, ಹತ್ತು ಕೈಗಳಿರುವುದು ಸಾಮಾನ್ಯ. ವಿಷ್ಣುವು ತನ್ನ ಕೈಗಳಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದರೆ, ಶಿವನು ತ್ರಿಶೂಲ, ಡಮರು, ಅಗ್ನಿಶಿಖೆಗಳನ್ನು ಹಿಡಿದಿರುತ್ತಾನೆ. ಅದರಂತೆ ಕೈಗಳಲ್ಲಿ ಇದ್ದ ಪಾಶ, ಅಂಕುಶಗಳಿಂದ ಗಣೇಶ, ಬಿಲ್ಲುಬಾಣಗಳಿಂದ ಶ್ರೀರಾಮ; ವೀಣೆ, ಅಕ್ಷಮಾಲೆ-ಪುಸ್ತಕಗಳಿಂದ ಸರಸ್ವತಿ: ಕಮಂಡಲ, ಸ್ರುಕ್, ಅಕ್ಷಮಾಲೆಗಳಿಂದ ಬ್ರಹ್ಮ; ಶೂಲ, ಟಂಕ, ವಜ್ರಗಳಿಂದ ಸುಬ್ರಹ್ಮಣ್ಯ, ಕೊಡಲಿಯಿಂದ ಪರಶುರಾಮ; ನೇಗಿಲಿನಿಂದ ಬಲರಾಮ; ನೀಲೋತ್ಪಲದಿಂದ ಪಾರ್ವತಿ ಮತ್ತು

ಕಮಲದಿಂದ ಲಕ್ಷ್ಮೀದೇವಿ ಎಂದು ತಕ್ಷಣ ಗುರುತಿಸಬಹುದು. ಇವರೆಲ್ಲ ಬಹುಹಸ್ತರಾದರೂ ದ್ವಿಪಾದಿಗಳು; ಶಿವಭಕ್ತ ಭೃಂಗಿ, ಮಾತ್ರ ತ್ರಿಪಾದಿ. ಸಂದರ್ಭಾನುಸಾರವಾಗಿ ದೇವತೆಗಳ ಮುಖದಲ್ಲಿ ಮಂದಹಾಸ, ಶೃಂಗಾರ, ರೌದ್ರ, ಉಗ್ರ, ತಾಮಸ ಭಾವಗಳನ್ನು ಮೂಡಿಸಲಾಗಿದೆ.

ಕುಮಟಾದ ಚಿತ್ರಗಳನ್ನು ಆಳವಾಗಿ ಅಭ್ಯಸಿಸಿದಾಗ ಕಲಾಕಾರನು ತನಗೆ ಲಭ್ಯವಿದ್ದ ಚೌಕಟ್ಟನ್ನು ಅತ್ಯಂತ ಕಲಾತ್ಮಕವಾಗಿಯೂ, ಪೂರ್ತಿ ಪ್ರಯೋಜನಕಾರಿಯಾಗಿಯೂ ಬಳಸುತ್ತಾನೆಂಬುದರ ಅರಿವಾಗುವುದು. ಧರ್ಮರಾಜನ ಅಂಕಣದಲ್ಲಿ, ವರ್ತುಲಾಕಾರದ ಕಟ್ಟನ್ನು ಅವನ ಶಿರೋಭೂಷಣವೂ ಒಳಗೊಳ್ಳುವಂತೆ ನಿರ್ಮಿಸಿ, ಎರಡೂ ಕೈಗಳನ್ನು ವರ್ತುಲ ಪೂರ್ತಿಯಾಗುವಂತೆ ಚಿತ್ರಿಸಲಾಗಿದೆ. ಮೇಲುಗಡೆ ಇದ್ದ ಕಲಶ, ಚಿತ್ರದ ಸುತ್ತಲೂ ಬಿಡಿಸಿದ ಜಾಮಿತಿ ನಕ್ಷೆಗಳು, ಅಂಕಣಕ್ಕೆ ಭವ್ಯತೆಯನ್ನು ತಂದುಕೊಟ್ಟಿವೆ. ಎಡಭುಜಕ್ಕೇರಿಸಿದ ಬಿಲ್ಲು, ಎರಡೂ ತೋಳುಗಳಲ್ಲಿ ಹರಡಿಕೊಂಡ ಅಂಗವಸ್ತ್ರ, ನೆರಿಗೆ ಹಾಕಿ ಉಟ್ಟ ಧೋತರಗಳು, ಧರ್ಮರಾಜನ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತವೆ. ಉಮೆಯೊಂದಿಗೆ ಹುಲಿಚರ್ಮದ ಮೇಲೆ ಆರೂಢನಾಗಿರುವ ಮಹಾದೇವನ ಚಿತ್ರವೂ ಅಪೂರ್ವವಾಗಿದೆ. ಲೇಪಾಕ್ಷಿಯಲ್ಲಿ ಶಿವಲೀಲಾ ಪ್ರಸಂಗಗಳ ಮೇಲೆ ಆಧಾರಿತ ಭಿತ್ತಿಚಿತ್ರಗಳು ಮತ್ತು ಉತ್ತರ ಭಾರತದ ಶೈವಾಗಮಗಳ ಆಧಾರಿತ ಚಿಕಣಿಚಿತ್ರಗಳಿಗೆ ಹೋಲಿಸಬಹುದಾದಂತಹ ಅಂಕಣವಿದು. ಗಂಗಾಜಟಾಧರೇಶ್ವರನಾಗಿ ರೂಪಿಸಿದ ಶಿವನ ಚಿತ್ರ, ಮನೋಹರವಾಗಿದೆ. ಪಂಚಾನನ ಈಶ್ವರನು ಕೇಶರಾಶಿಯನ್ನು ಹುಲುಸಾದ ಜಟೆಯಲ್ಲಿ ಬೆಳೆಸಿದ್ದಾನೆ. ಆ ಮೆತ್ತಗಿನ ಆಸನವನ್ನು ಆಶ್ರಯಿಸಿದ ಗಂಗೆಯನ್ನು ನೋಡುತ್ತಿದ್ದಂತೆ, ಶ್ರಮವಹಿಸಿ ತಾಯಿ ಹಕ್ಕಿಯೊಂದು, ಕಟ್ಟಿದ ಮೃದುವಾದ ಗೂಡಿನಲ್ಲಿ ವಿಶ್ರಮಿಸುವ ಮರಿಹಕ್ಕಿ ಕಣ್ಣಿಗೆ ಕಟ್ಟಿದಂತೆ ಆಗುತ್ತದೆ. ಕೈಲಾಸದ ಕ್ಷೌರಿಕರು ಕಾಯಂ ಮುಷ್ಕರ ಹೂಡಿದ್ದರಿಂದೋ ಏನೋ ಉಮಾಪತಿಯು ನಿಶ್ಚಿಂತತೆಯಿಂದ ಗಡ್ಡ ಬೆಳೆಸಿದ್ದಾನೆ! ಇದ್ದ ಹತ್ತೂ ಕೈಗಳನ್ನು ಲಾಭದಾಯಕವಾಗಿ ಬಳಸಿಕೊಂಡಿದ್ದಾನೆ. ಆರು ಕೈಗಳಲ್ಲಿ ಡಮರು, ಚಂದ್ರ, ತ್ರಿಶೂಲ, ಮೃಗಗಳನ್ನು ಹಿಡಿದರೆ, ಇನ್ನುಳಿದ ನಾಲ್ಕು ಬಾಹುಗಳನ್ನು ಉಮೆಗೆ ಮೀಸಲಿಟ್ಟಿದ್ದಾನೆ. ಜೋಡಿ ಕೈಗಳಿಂದ ಅವಳನ್ನು ತಬ್ಬಿಕೊಂಡರೆ, ಇನ್ನೆರಡು ಕೈಗಳು ಸತತವಾಗಿ ಅವಳ ಸ್ತನಮರ್ದನ ನಡೆಸಿವೆ. ಬಹುಸಂಖ್ಯಾತ ಕೊಂಕಣಿಗರು, ವೈಷ್ಣವರಾಗಿದ್ದರೂ ಅವರ ದೇವಾಲಯಗಳಲ್ಲಿ ಶಿವನಿಗೂ ಅಗ್ರಸ್ಥಾನ ಕೊಡಲಾಗಿದೆ.

ಶಿವನ ಓಲಗದಲ್ಲಿ ಭೃಂಗಿಯು ವಿನೋದಾವಳಿಯನ್ನು ಒದಗಿಸುವ ಸಂಗೀತ-ನೃತ್ಯಕಾರ. ಗುರು, ಮುಕ್ಕಣ್ಣನಾದ್ದರಿಂದಲೋ ಏನೋ ಶಿಷ್ಯ ತ್ರಿಪಾದಿ. ಆದರೆ ಈ ಹೆಚ್ಚಿನ ಕಾಲು ಎಲ್ಲಿಂದ ಬಂದಿತು? ಎಂಬುದರ ಬಗ್ಗೆ ಧಾರ್ಮಿಕ ಗ್ರಂಥಗಳು, ತೃಪ್ತಿಕರವಾದ ವಿವರಗಳನ್ನು ಪೂರೈಸುವುದಿಲ್ಲ. ಹಲವೆಡೆಯಲ್ಲಿ ಈಶ್ವರನು, ಏಕಪಾದಿಯಾಗಿಯೂ ಚಿತ್ರಿತನಾಗಿದ್ದಾನೆ. ತಾಂಡವ ನೃತ್ಯದಲ್ಲಿ ಸಿಡಿದುಬಿದ್ದ ಒಂದು ಕಾಲನ್ನು ಈ ಭಕ್ತನಿಗೆ ಕಾಣಿಕೆಯಾಗಿ ಕೊಟ್ಟಿರಬಹುದೆ! ಎಂಬ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಕರ್ನಾಟಕ ಸಾಂಪ್ರದಾಯಿಕ ಚಿತ್ರಗಳಲ್ಲಿ ಕೆಲವೆಡೆ ಭೃಂಗಿಗೆ ಕೃತಕವಾಗಿ



ಶಿವಭಕ್ತ ಭೃಂಗಿ

ಮೂರನೆಯ ಕಾಲು ಜೋಡಿಸಿದಂತೆ ಅನಿಸುತ್ತದೆ. ಇದೇ ಮಾದರಿಯಲ್ಲಿ ಕುಮಟೆಯ ಭೃಂಗಿಯನ್ನು ಚಿತ್ರಿಸಲಾಗಿದೆ. ಆದರೆ ಹೊನ್ನಾವರದ ಕಲಾಕಾರನು, ಅಪೂರ್ವ ಭೃಂಗಿಯ ಚಿತ್ರವನ್ನು ರಚಿಸಿ ಅಜರಾಮರನಾಗಿದ್ದಾನೆ. ಎತ್ತಿದ ಎರಡೂ ಕೈಗಳಲ್ಲಿ ಟಿಪರಿ ಬಾರಿಸುತ್ತ ಮೂರು ಕಾಲುಗಳನ್ನು ನೃತ್ಯದ ಮೂರು ಭಂಗಿಗಳಲ್ಲಿ ರಚಿಸಿದ್ದರಿಂದ ಭೃಂಗಿಯು "ಥಕಥೈ!" ಎಂದು ಕುಣಿಯುತ್ತಿರುವಂತೆ ಭಾಸವಾಗುತ್ತದೆ.

ಕೌರವ-ಪಾಂಡವರ ಯುದ್ಧವನ್ನು ಹಲವಾರು ಅಂಕಣಗಳಲ್ಲಿ ಚಿತ್ರಿಸಲಾಗಿದೆ. ದ್ವಿಚಕ್ರ, ಚತುಷ್ಚಚಕ್ರಗಳ ರಥಗಳು ವಾಯುವೇಗದಿಂದ ಓಡುತ್ತಿವೆ. ಅಶ್ವಗಳು ದಣಿದು ಬೆಂಡಾಗಿದ್ದರೂ ಸಾರಥಿಯ ಆಜ್ಞೆಯನ್ನು ಶಿರಸಾವಹಿಸಿ ನಾಗಾಲೋಟ ಹಾಕುತ್ತಿವೆ. ಅರ್ಜುನನ ರಥಕ್ಕೆ ಕೃಷ್ಣನೇ ಸಾರಥಿ ಎಂದು ಸೂಚಿಸಲು ಕೈಗಳಲ್ಲಿ ಶಂಖ-ಚಕ್ರಗಳಿವೆ. ವಾಯುಮಂಡಲವನ್ನು ಸೀಳಿಬರುವ ವೈರಿಯ ಬಾಣಗಳನ್ನು ಅರ್ಜುನನ ಬಾಣಗಳು ಧ್ವಂಸ ಮಾಡುತ್ತಿವೆ. ಕಲಾಕಾರನು ಈ ದೃಶ್ಯದಲ್ಲಿ ಎಲ್ಲಿಯೂ ಅಸಡ್ಡೆ ತೋರಿಲ್ಲ. ಅಪಕ್ವತೆ ಸೇರಿಸಿಲ್ಲ. ಸಂಯೋಜನೆಯ ದೃಷ್ಟಿಯಿಂದ ಆದಿನಾರಾಯಣನದು ಇನ್ನೊಂದು ಉತ್ತಮ ಚಿತ್ರ. ಶಂಖ-ಚಕ್ರಗಳನ್ನು ಧರಿಸಿದ ಚತುರ್ಭುಜ ವಿಷ್ಣುವು ಆದಿಶೇಷನ ಮೇಲೆ ಸುಖಾಸೀನನಾಗಿ, ಪತ್ನಿಯೊಡನೆ, ಯಾವುದೋ ಸಾಂಸಾರಿಕ ತಾಪತ್ರಯವನ್ನು ಗಂಭೀರವದನನಾಗಿ ಚರ್ಚಿಸುವಂತಿದೆ. ಅದೇ ಹೊನ್ನಾವರದ ಅನಂತಶಯನ ನಾರಾಯಣನು ಸರ್ಪದ ಸಪ್ತ-ಸುತ್ತುಗಳ ಶಯ್ಯೆಯಲ್ಲಿ ಪವಡಿಸಿ ಈರ್ವರು ನಾಗಕನ್ನಿಕೆಯರಿಂದ ಕಾಲು ಒತ್ತಿಸಿಕೊಳ್ಳುತ್ತ ಸುಖದಲ್ಲಿ ಮೈಮರೆತಿದ್ದಾನೆ! ಬ್ರಹ್ಮದೇವನು ರಸಭಂಗ ಮಾಡದಿರಲಿ! ಎಂದು ಅವನನ್ನು ನಾಭಿಯಲ್ಲಿ ಉದಯಿಸಿದ ಕಮಲದಲ್ಲಿ ಬಂಧಿಸಿಟ್ಟಂತೆ ಭಾಸವಾಗುತ್ತದೆ. ಮಾವಿನಕುರ್ವೆಯ ಶೇಷಶಾಯಿಯು ಪಾಲಿಗೆ ಬಂದ ಪತ್ನಿಯೇ ಪಂಚಾಮೃತವೆಂದು ಪರಿಗಣಿಸಿ, ಅವಳ ಪಾದಸೇವೆಗಾಗಿ ಹೂವುಗಳನ್ನು ಅರ್ಪಿಸುತ್ತಿದ್ದಾನೆ. ಇನ್ನುಳಿದ ಮೂರು ಕೈಗಳಲ್ಲಿ ಯಾವುದೇ ಆಯುಧ ಅಥವಾ ಲಾಂಛನ ಹಿಡಿಯುವ ಗೋಜಿಗೇ ಹೋಗಿಲ್ಲ! ಈ ಚಿತ್ರಗಳ ರಚನೆಯಿಂದ ಪ್ರತಿಯೊಬ್ಬ ಕಲಾಕಾರನು, ತನ್ನ ಕೃತಿಗೆ ವಿಶಿಷ್ಟವಾದ ಅರ್ಥ ಬರುವಂತೆ ಯತ್ನಿಸಿದ, ಎಂಬುದು ಸ್ಪಷ್ಟವಾಗುತ್ತದೆ. ಚಿತ್ರರಚನೆಗಳಲ್ಲಿ ಇಂಥ ವೈವಿಧ್ಯಗಳನ್ನು ದಶಾವತಾರಗಳು ಮತ್ತು ರಾಮಾಯಣ, ಮಹಾಭಾರತಗಳಲ್ಲಿ ಬರುವ ಸನ್ನಿವೇಶಗಳಲ್ಲಿ ಗುರುತಿಸಬಹುದು.

ಗಣೇಶನನ್ನು ಚಿತ್ರಿಸುವಾಗ ಕುಮಟಾ ಕಲಾಕಾರನು ಪಾರ್ಶ್ವನೋಟ ಬಳಸುವುದರಿಂದ ಮುಂಗಾಲು ಎತ್ತಿದ ಮೂಷಕನು ತನ್ನ ಒಡೆಯನನ್ನು ಮುಂದೆ ಸಾಗಿಸುವಂತೆ ಭಾಸವಾಗುತ್ತಿದೆ. ವಿನಾಯಕನು ತನ್ನ ಬಲಗಾಲನ್ನು ಇಳಿಬಿಟ್ಟಿದ್ದರಿಂದ, ಎಲ್ಲಿಯಾದರೂ ಎಡವಿ ಬಿದ್ದು ಯಥೇಷ್ಟವಾಗಿ ತಿಂದ ಕಾಯ್‌ಕಡಬು ಹೊರಗೆ ಬಾರದಂತೆ ಮುನ್ನೆಚ್ಚರಿಕೆ ವಹಿಸಿದಂತೆಯೂ ಅನಿಸದಿರದು. ಅದೇ ಹೊನ್ನಾವರದ ವಿಘ್ನೇಶ್ವರನ ಸಕಲ ಭಾರವನ್ನು ಇಲಿಯ ಮೇಲೆ ಹೇರಿ ಛಾಯಾಕಾರನಿಗೆ ಭಂಗಿ ನೀಡಿ ಆಸನಾರೂಢನಾದಂತಿದೆ! ವಿಠ್ಠಲನನ್ನು ಚಿತ್ರಿಸುವಾಗ ಮಾಜಾಳಿಯ ಚಿತ್ರಕಾರನು ಪಂಡರಪುರದ ವಿಠೋಬನನ್ನು ನೆನಪಿಗೆ ತರುವಂತೆ, ಎರಡೂ ಕೈಗಳನ್ನು ಸೊಂಟದ ಮೇಲಿಟ್ಟ ಭಂಗಿಯನ್ನು ಬಳಸಿದ್ದಾನೆ. ಆಳೆತ್ತರ ಉರಿಯುವ ಸಮೆಗಳನ್ನು ಎಡ ಬಲದಲ್ಲಿ ಸೇರಿಸಿದ್ದರಿಂದ, ಚೌಕಟ್ಟಿಗೆ ಭವ್ಯತೆ



ಗಣೇಶನ ಪಾರ್ಶ್ವನೋಟ

ಬಂದು ಕನ್ನಡಿಗರ ವಿಠ್ಠಲನನ್ನು ಮಹಾರಾಷ್ಟ್ರದವರು ತಮ್ಮ ಆರಾಧ್ಯ ದೇವತೆಯನ್ನಾಗಿ ಯಾಕೆ ಸ್ವೀಕರಿಸಿದರು, ಎಂಬ ಅರಿವು ಮೂಡುತ್ತದೆ. ಬೀಳಗಿಯ ವಿಠ್ಠಲನ ಕೈಗಳನ್ನು ತೊಡೆಯ ಎಡಬಲದಲ್ಲಿ ಇಳಿಬಿಟ್ಟು, ಲತೆಗಳಿಂದ ಸುತ್ತುವರಿಯುವಂತೆ ಕಾಣಿಸಿ ಆಕರ್ಷಕವಾಗಿ ಮಾಡಲಾಗಿದೆ. ಅವರ್ಸಾದಲ್ಲಿ ವಿಠ್ಠಲ–ರಕುಮಾಯಿ ಇಬ್ಬರೂ ಸೊಂಟದ ಮೇಲೆ ಕೈಯಿಟ್ಟು ನಿಂತುಬಿಟ್ಟಿದ್ದಾರೆ. ನಾರದನು ವೀಣೆ ನುಡಿಸುತ್ತ, ಚಿಟಕಿ ಬಾರಿಸುತ್ತ ಹಾಡುತ್ತ ಗಗನ ಮಂಡಲದಿಂದ ಧರೆಗೆ ಇಳಿದುಬರುತ್ತಿದ್ದಂತೆ ಬೀಳಗಿಯಲ್ಲಿ ಚಿತ್ರಿತನಾಗಿದ್ದರೆ, ಕುಮಟದ ಕಲಾಕಾರನು ಅವನ ಸಂಗೀತ ಪ್ರೇಮದತ್ತ ಜೋರು ಕೊಟ್ಟು ತಂತಿವಾದ್ಯ, ನುಡಿಸುವಲ್ಲಿನ ತನ್ಮಯತೆಯನ್ನು ಕಲಾತ್ಮಕವಾಗಿ ರಚಿಸಿದ್ದಾನೆ. ಇದರಂತೆ ನಕುಲ–ಸಹದೇವರು, ಭೀಮಸೇನ, ಕರ್ಣ, ದೂರ್ವಾಸಮುನಿ, ಇಂದ್ರ, ಧ್ರುವ ಮುಂತಾದ ಪೌರಾಣಿಕ ವ್ಯಕ್ತಿಗಳನ್ನು ಕಲಾಕಾರರು ತಂತಮ್ಮ ಕಲ್ಪನೆ ಅಭಿರುಚಿಗಳಿಗೆ ಅನುಗುಣವಾಗಿ ಚಿತ್ರಿಸಿದ್ದಾರೆ.

ದಶಾವತಾರಗಳಲ್ಲಿ, ವಾಮನಾವತಾರ ಚಿತ್ರಿಸುವಾಗ ವೈವಿಧ್ಯತೆ ಸ್ಫುಟವಾಗಿ ಗೋಚರಿಸುತ್ತದೆ. ಹೊನ್ನಾವರದಲ್ಲಿ ಬಲಿ ಚಕ್ರವರ್ತಿ ಆಸನಾರೂಢನಾಗಿ ಕುಳ್ಳ ವಾಮನನಿಗೆ ದಾನ ನೀಡಲು ಕೈಗಳನ್ನು ಮುಂದೆ ಚಾಚಿದ್ದಾನೆ. ಸಾಧುಗಳ ಕಿವಿ ಮುಚ್ಚುವ ಟೋಪಿ ಧರಿಸಿ, ಛತ್ರಿಯ ನೆರಳಲ್ಲಿ ಆಶ್ರಯ ಪಡೆದ ವಾಮನನು ಎಡಗೈಯಲ್ಲಿ ಚುಂಬಿನ ಚೊಂಬು ಹಿಡಿದಿದ್ದಾನೆ. ಅಂಕಣದಲ್ಲಿದ್ದ ಚರಾಚರ ವಸ್ತುಗಳಲ್ಲಿ ಒಳ್ಳೆಯ ಸಂಯೋಜನೆ ಇದೆ. ಹಳದಿಪುರದಲ್ಲಿ ಬಲಿ ಚಕ್ರವರ್ತಿ, ವಾಮನನು ಬೇಡಿದಷ್ಟು ಭೂಮಿ ಕೊಡುತ್ತೇನೆಂದು ವಚನ ನೀಡುವುದಕ್ಕಾಗಿ ಚೊಂಬಿನಿಂದ ತೀರ್ಥ ಹರಿಯಬಿಡುತ್ತಿದ್ದಾನೆ. ಇಲ್ಲಿಯ ಕಲಾಕಾರನಿಗೆ ರೇಖೆಗಳ ಮೇಲೆ ನಿಯಂತ್ರಣ ಇಲ್ಲದ್ದರಿಂದ ಚಿತ್ರ ತೀರಾ ಬಾಲಿಶವಾಗಿ ಕಾಣುತ್ತದೆ. ಶಿರಾಲಿಯಲ್ಲಿ ತನ್ನ ರಾಜವೈಭವನ್ನೆಲ್ಲ ಕಳೆದುಕೊಂಡ ಬಲಿಯು ವಾಮನನಿಗೆ ತನ್ನ ಶಿರದ ಮೇಲೆ ಪಾದವನ್ನು ಇಡುವಂತೆ ವಿನಂತಿಸಿಕೊಳ್ಳುತ್ತಿದ್ದಾನೆ. ಮಾಜಾಳಿಯಲ್ಲಿ ಬಲಿಯನ್ನು ನೆಲಕ್ಕುರುಳಿಸಿ ಅವನನ್ನು ಪಾತಾಳಕ್ಕೆ ಅಟ್ಟುವ ದೃಶ್ಯವಿದೆ. ಅದೇ ಕುಮಟದ ಚಿತ್ರದಲ್ಲಿ ಬಿದ್ದಲ್ಲಿಂದ ವಾಮನನೊಡನೆ ಹೋರಾಡುವ ಬಲಿಯನ್ನು ಖಡ್ಗ ಹಿಡಿದು ರಾಕ್ಷಸನಂತೆ ಚಿತ್ರಿಸಲಾಗಿದೆ. ಇವನ್ನೆಲ್ಲ ನೋಡುತ್ತಿದ್ದಂತೆ ಕಲಾಕಾರನ ಕಲ್ಪನಾಶಕ್ತಿ ಕಣ್ಮುಂದೆ ತೆರೆದು ನಿಲ್ಲುತ್ತದೆ.

ಕೊಡಲಿ ಹಿಡಿದ ಪರಶುರಾಮನು ಬಹುಸಂಖ್ಯಾತ ದೇವಾಲಯುಗಳಲ್ಲಿ ಚಿತ್ರಿತನಾಗಿದ್ದಾನೆ. ಜಮದಗ್ನಿಯು ಪುತ್ರನಾದ ಈತನು ಕಾಮಧೇನುವನ್ನು ಪಡೆಯುವುದಕ್ಕಾಗಿ ತನ್ನ ಪಿತನನ್ನು ಕೊಲೆ ಮಾಡಿದ ಸಹಸ್ರಾರ್ಜುನ ದೊರೆಯನ್ನು ಆಹುತಿ ತೆಗೆದುಕೊಳ್ಳಲು ಪಣ ತೊಡುತ್ತಾನೆ. ಅವನು ಪರುಶದೊಂದಿಗೆ ಅಲೆಯಲಾರಂಭಿಸಿ ಪರಶುರಾಮನೆಂಬ ಅನ್ವರ್ಥಕ ನಾಮ ಪಡೆದ. ಶಿರಾಲಿಯಲ್ಲಿ ಈತ, ಬಲಗೈಯಲ್ಲಿ ಪರಶು (ಕೊಡಲಿ) ಎಡಗೈಯಲ್ಲಿ ಧನುಷ್ಯ ಹಿಡಿದು, ಮರವೊಂದರ ಆಶ್ರಯದಲ್ಲಿ ನಿರ್ವಿಕಾರವಾಗಿ ನಿಂತುಬಿಟ್ಟಿದ್ದಾನೆ. ಅದೇ ಹೊನ್ನಾವರದಲ್ಲಿ ಋಷಿ ಪುತ್ರನು ಅರಸನ ಪೋಷಾಕಿನಲ್ಲಿ ಕೊಡಲಿ ಹಿಡಿದು ನಿಂತಿದ್ದಾನೆ! ಸಹಸ್ರಾರ್ಜುನನಿಗೆ ಬೇರೊಂದು ಅಂಕಣ ಮೀಸಲಾಗಿದೆ. ಅವನ ಇಪ್ಪತ್ತು ಕೈಗಳನ್ನು ವರ್ತುಲಾಕಾರದಲ್ಲಿ ಬರುವಂತೆ



ಲತೆಗಳಿಂದ ಸುತ್ತುವರಿದ ವಿಠ್ಠಲ

ಮಾಡಿ, ವಿವಿಧ ಆಯುಧಗಳನ್ನು ಏಕಕಾಲಕ್ಕೆ ಬಳಸುತ್ತಿದ್ದಂತೆ ಚಮತ್ಕಾರಿಕವಾಗಿ ಕಲಾಕಾರನು ತೋರಿಸಿದ್ದಾನೆ. ಅದೇ ಊರಿನ ಹನುಮಾನ್ ದೇವಾಲಯದಲ್ಲಿ ವೈರಿಗಳಿಬ್ಬರಿಗೂ ಅಕ್ಕಪಕ್ಕದ ಅಂಕಣಗಳನ್ನು ಮೀಸಲಿಟ್ಟರೂ ಅವರು ಯುದ್ಧದಲ್ಲಿ ತೊಡಗಿದಂತೆ ಚಿತ್ರಿಸಲಾಗಿದೆ. ರಾಮರಾವಣ ಕಾಲಕ್ಕೂ ಇದೇ ತಂತ್ರ ಬಳಸಲಾಗಿದೆ. ಹಳದೀಪುರದಲ್ಲಿ ಪರಶುರಾಮನೊಂದಿಗೆ ಕಾದಾಟಕ್ಕಿಳಿದ ಸಹಸ್ರಾರ್ಜುನನಿಗೆ ಎಂಟು ಕೈಗಳಿದ್ದರೂ, ಜೋಡಿಕೈಗಳಲ್ಲಿ, ಖಡ್ಗ, ಢಾಲು, ಹಿಡಿದು ಉಳಿದ ಆರು ಕೈಗಳು ಬರಿದಾಗಿವೆ. ಮಾಜಾಳಿಯ ಸಹಸ್ರಾರ್ಜುನನಿಗೆ ಹನ್ನೆರಡು ಕೈಗಳಿದ್ದರೂ, ಅವುಗಳಲ್ಲಿಯ ಹತ್ತು ತೋರಿಕೆಯ ಕೈಗಳಾಗಿದ್ದರಿಂದ ಪರಶುರಾಮನೊಂದಿಗೆ ಕಾದಾಟಕ್ಕೆ ಅಯೋಗ್ಯವಾದವುಗಳೆಂಬ ಭಾವನೆ ಮೂಡುತ್ತದೆ. ಕುಮಟೆಯಲ್ಲಿ ಪರಶುರಾಮನು ಮೆಟ್ಟುಕೊಡಲಿಯಂತಹ ಭಾರಿ ಕೊಡಲಿ ಹೊತ್ತು ಗಂಡು ಹೆಜ್ಜೆ ಮುಂದಿಡುತ್ತ ವೈರಿ ಸಂಹಾರಕ್ಕೆ ದೃಢಸಂಕಲ್ಪ ಮಾಡಿಕೊಂಡು ಹೊರಟಂತೆ ಇದೆ.

ಹಲವೆಡೆಯಲ್ಲಿ ಮಹಿಷಾಸುರ ಮರ್ದಿನಿಯನ್ನು ಚಿತ್ರಿಸಲಾಗಿದೆ. ಮಹಿಷಾಸುರನ ಉಪಟಳ ಮಿತಿಮೀರಿ ಬೆಳೆದಾಗ, ದುರ್ಗೆಯು ಅವನನ್ನು ಸಂಹರಿಸುವ ಸನ್ನಿವೇಶವನ್ನು ಶಿಲ್ಪಿಗಳಂತೆ ಕಾವಿ ಕಲಾಕಾರರೂ ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಹೊನ್ನಾವರದಲ್ಲಿ ಅಷ್ಟಭುಜಾದೇವಿ, ಕೋಣದ ಶಿರಚ್ಛೇದ ನಡೆಸಿ ರಾಕ್ಷಸನನ್ನು ತ್ರಿಶೂಲ, ಪರಶು, ಬರ್ಚಿ, ಖಡ್ಗಗಳಿಂದ ತಿವಿಯುತ್ತಿರುವಂತೆ ತೋರಿಸಲಾಗಿದೆ. ಸಿರ್ಸಿಯಲ್ಲಿ ದುರ್ಗೆಯ ವಾಹನವಾದ ವ್ಯಾಘ್ರವೂ ಮಹಿಷಾಸುರನ ಮೇಲೆ ಆಕ್ರಮಣ ನಡೆಸಿದೆ. ಅಘನಾಶಿನಿಯಲ್ಲಿ ಚತುರ್ಭುಜದುರ್ಗೆ, ದುಷ್ಟನ ಕೂದಲು ಹಿಡಿದು ನಾಲಿಗೆ ಎಳೆದು, ವಕ್ಷಸ್ಥಳ ತುಳಿಯುತ್ತ ಗದೆ ಮತ್ತು ಖಡ್ಗಗಳಿಂದ ಸದೆಬಡೆಯುತ್ತಿದ್ದಾಳೆ. ಸಾಂಕೇತಿಕವಾಗಿ ಕೋಣನ ತಲೆಯನ್ನು ಚೌಕಟ್ಟಿನ ಮೂಲೆಯಲ್ಲಿ ಸೇರಿಸಲಾಗಿದೆ. ಮಾವಿನಕುರ್ವೆಯ ಚಿತ್ರ ಶಕ್ತಿಯುತವಾಗಿದೆ. ಹದಿನೆಂಟು ಕೈಗಳುಳ್ಳ ದುರ್ಗೆಯು, ಖಡ್ಗ, ಚಕ್ರ, ಶಂಖ, ಪರಶು, ಮೊದಲಾದ ಆಯುಧ ಹಿಡಿದರೂ ಶಾಂತಚಿತ್ತಳಾಗಿದ್ದಾಳೆ. ನೆಲಕ್ಕುರುಳಿದ ಕೋಣನಿಂದ ಹೊರ ಬಂದ ರಾಕ್ಷಸನು ದೇವಿಯೊಡನೆ ಸೆಣಸಾಟದಲ್ಲಿ ತೊಡಗಿದ್ದಾನೆ.

ಮಾವಿನಕುರ್ವೆಯಲ್ಲಿರುವುದು ಅಮ್ಮನವರ ದೇವಾಲಯವಾದುದರಿಂದ ದೇವಿಯ ಚಿತ್ರಗಳಿಗೇ ಪ್ರಾಮುಖ್ಯತೆ ಕೊಡಲಾಗಿದೆ. ಅಷ್ಟಭುಜಾದೇವಿ ಪೀಠದ ಮೇಲೆ ಪದ್ಮಾಸನದಲ್ಲಿ ವಿರಾಜಿಸುತ್ತಿದ್ದಾಗ ಇಕ್ಕೆಲದಲ್ಲಿ ಈರ್ವರು ಪುರುಷರು ಭಯ ಭಕ್ತಿಯಿಂದ ಕೈಜೋಡಿಸಿ ನಿಂತಿದ್ದಾರೆ. ಧೂಮ್ರಲೋಚನ ಮರ್ದಿನಿ ಇಲ್ಲಿ ನೆಲಕ್ಕುರುಳಿಸಿದ ದುಷ್ಟನನ್ನು ಭರ್ಚಿಯಿಂದ ಶಿಕ್ಷಿಸುತ್ತಿದ್ದಾಳೆ. 'ಚಂಡ-ಮುಂಡ-ಮರ್ದಿನಿ' ಅಂಕಣದಲ್ಲಿ ದೇವಿಯು ಸಿಂಹನ ಸವಾರಿ ಮಾಡುತ್ತ, ಈರ್ವರು ರಾಕ್ಷಸರನ್ನೂ ಸಂಹರಿಸುತ್ತಿದ್ದಾಳೆ. ಇನ್ನೊಂದು ಚಿತ್ರದಲ್ಲಿ ಕೈಕಟ್ಟಿ ನಿಂತ ದೇವಿಯ ಹತ್ತಿರವೇ ಸಿಂಹವೊಂದು ತನ್ನ ಒಡತಿಯ ಈ ಸೌಮ್ಯ ರೂಪ ನೋಡಿ ವಿಸ್ಮಯ ಪಡುತ್ತಿದೆ. ಆಚೆ-ಈಚೆ ಶಿವ ಭಕ್ತರು ದೇವಿಯ ಅನುಗ್ರಹಕ್ಕಾಗಿ ಕೈಜೋಡಿಸಿ ವಿನಂತಿಸಿಕೊಳ್ಳುತ್ತಿದ್ದಾರೆ.


ಕರಾವಳಿಯ ಕಾವಿ ಕಲಾಕಾರರು ಧಾರ್ಮಿಕ ಹಿನ್ನೆಲೆಯಲ್ಲಿ ಸೌಂದರ್ಯವನ್ನು ನಿರ್ಮಿಸಲು ಶಕ್ತಿ ಮೀರಿ ದುಡಿದಿದ್ದಾರೆ, ಎಂಬುದಕ್ಕೆ ಈ ಚಿತ್ರಗಳೇ ಸಾಕ್ಷಿ.



ವಾಮನಾವತಾರ



ಪರಶುರಾಮ



ಜಾಮಿತಿ ವರ್ತುಲಗಳು

3. ಜಾಮಿತಿ ಚಿತ್ರಗಳು

ಏಳುವರ್ಷದ ಎಳೆಯ ವಯಸ್ಸಿನಲ್ಲಿ ಅಪಘಾತ ಒಂದರಲ್ಲಿ, ಬಲಗಾಲಿನ ಎಲುವಿಗೆ ಸೀಳು ಬಂದಿದ್ದರಿಂದ, ಪ್ಲಾಸ್ಟಿಕ್ ಹಾಕಿ ಒಂದು ತಿಂಗಳು ಮಲಗಿರುವಂತೆ ಡಾಕ್ಟರರು ಕಡ್ಡಾಯ ಹೇರಿದ್ದರು. ಆ ಸುದೀರ್ಘವೆಂದು ಕಂಡ ಅಜ್ಞಾತವಾಸದ ದಿನಗಳಲ್ಲಿ ಕೋಣೆಯ ಸುತ್ತಮುತ್ತಲೂ ಗೋಡೆಗಳ ಮೇಲೆ ವಿರಾಜಿಸುತ್ತಿದ್ದ ಕಾವಿ ಚಿತ್ರಗಳೇ ಸಂಗಾತಿಯಾಗಿದ್ದವು. ಪ್ರತಿದಿನವೂ ಅವನ್ನೇ ನೋಡಿದರೂ ನೋಡಿದಾಗೊಮ್ಮೆ ಅವುಗಳು ತಮ್ಮ ಹೊಸತನ ಹೊರಹಾಕುತ್ತಿದ್ದಂತೆ ಅನಿಸಲಾರಂಭಿಸಿದವು. ದಾರ ಒಂದಕ್ಕೆ ಪೋಣಿಸಿ ನೇತು ಹಾಕಿದ ಅಶ್ವತ್ಥ ಎಲೆಗಳ ತೋರಣದಂತೆ ನಕ್ಷೆ ಒಂದು ದಿನ ಕಂಡರೆ, ಮರುದಿನ ಕೆಂಪು ಎಲೆಗಳ ನಡುವಿನ ಭಾಗ, ಬಿಳೀ ಅಂಗಿ, ಗಾಂಧಿ ಟೋಪಿ ಧರಿಸಿದ ಕವಾಯತಿಗೆ ನಿಂತ ತರುಣರಂತೆ ಭಾಸವಾಗುತ್ತಿತ್ತು. ಕುತೂಹಲದಿಂದ "ಹೀಗೇಕೆ?" ಎಂದು ತಂದೆಯವರನ್ನು ವಿಚಾರಿಸಿದಾಗ, "ಕಲಾಕಾರರು ತಮ್ಮ ಕೈಚಳಕ, ಜಾಣ್ಮೆಯ ಪ್ರದರ್ಶನಕ್ಕಾಗಿ ಏನೆಲ್ಲ ಕಸರತ್ತುಗಳನ್ನು ಕುಂಚದಿಂದಲೇ ಸಾಧಿಸುತ್ತಾರಲ್ಲವೇ? ಹಾಗೇ ಇದು. ತೋರಣಕ್ಕೆ ಸಮಾಂತರವಾಗಿದ್ದ ನಕ್ಷೆ ಸೊನಗಾರರು, ಹೆಣೆದ ಸರಪಳಿಯಂತೆ ಕಾಣುತ್ತದೆಯಲ್ಲವೇ? ಏಕಚಿತ್ತದಿಂದ ನೋಡಿದಾಗ ಅವು ಸುತ್ತಿಕೊಂಡ ಸರ್ಪಗಳೆಂದು ಅನಿಸದಿರದು. ಅದರಂತೆ ಗೋಡೆಯ ನಟ್ಟನಡುವಿನ ವರ್ತುಲವನ್ನು ಜಾಮಿತಿ ಆಕೃತಿಗಳಿಂದ ಕಿಕ್ಕಿರಿಸಿ ತುಂಬಲಾಗಿದೆಯಲ್ಲವೇ? ಆದರೆ ಕಣ್ಣಿಟ್ಟು ನೋಡಿದಾಗ ಅದು ಹೂವೊಂದನ್ನು ಪ್ರತಿನಿಧಿಸುತ್ತದೆ, ಎಂದು ಭಾಸವಾಗುತ್ತದೆ. ನಟ್ಟನಡುವೆ ಇರುವ ಕಿರಿ ವರ್ತುಲಗಳು ಪರಾಗವಾದರೆ, ಅದರ ಸುತ್ತಲಿನ ಲಂಬವರ್ತುಲಗಳು ಪಕಳೆಗಳು. ಈ ವರ್ತುಲಕ್ಕೆ ಒಂದು ಬೊಡ್ಡೆ ಜೋಡಿಸಿದರೆ, ಅದು ಮರವೂ ಆಗಬಲ್ಲದು" ಎಂದು ಕಾವಿ ಕಲೆಯನ್ನು ಪಿತರು ಪರಿಚಯಿಸಿದರು. ಇಷ್ಟಾದ ಮೇಲೆ ಹೋದಲ್ಲೆಲ್ಲ ಕಂಡು ಬರುತ್ತಿದ್ದ ಕಾವಿ ನಕ್ಷೆಗಳಲ್ಲಿ ಹುದುಗಿರುತ್ತಿದ್ದ ಅರ್ಥವನ್ನು ಹೊರಗೆಡಹುವುದೇ ಹವ್ಯಾಸವಾಗಿಬಿಟ್ಟಿತು.

ಜಾಮಿತಿ ಚಿತ್ರಗಳ ರಚನೆಗೆ, ಬೇರೆಯೇ ವಿಧಾನವನ್ನು ಬಳಸಬೇಕಾಗುತ್ತದೆ. ಸುಮಾರು ಎರಡು ಅಡಿ ಉದ್ದ, ಒಂದಂಗುಲ ಅಗಲದ ತೆಳುವಿನ ಹಲಿಗೆ ಇಲ್ಲವೇ ದಪ್ಪ ರಟ್ಟಿನ ಮೇಲೆ ಕೈವಾರದಿಂದ ವರ್ತುಲ, ಅರೆವರ್ತುಲ, ಕಾಲುವರ್ತುಲ, ವೃತ್ತಾಂಶ ಬಳಸಿ, ಇಚ್ಛಿಸಿದ ನಕ್ಷೆಯನ್ನು ಗುರುತು ಹಾಕಿಕೊಳ್ಳಬೇಕಾಗುತ್ತದೆ. ಅದು ಒಪ್ಪಿಗೆಯಾದರೆ ಗುಡಿಗಾರ ಇಲ್ಲವೇ ಆಚಾರಿಯಿಂದ ಅದನ್ನು ಕೊರೆದು ಅಚ್ಚನ್ನಾಗಿ ಪರಿವರ್ತಿಸಿಕೊಳ್ಳಬೇಕು. ಇದನ್ನು ಗೋಡೆಗೆ ಲೇಪಿಸಿದ ಕಾವಿ–ಸುಣ್ಣದ ಮಿಶ್ರಣದ




ಜಾಮಿತಿ ವೃಕ್ಷಗಳು

ಮೇಲಿಟ್ಟು ಉಕ್ಕಿನ ಕಂಟಕದಿಂದ ಕೊರೆದು ಹೊರ ರೇಖೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಹೆಚ್ಚಿನ ಲೇಪವನ್ನು ತಾಪಿಯಿಂದ ಜೀಳಿಸಿದರೆ, ಸುಂದರ ಕುಸುರಿ ಕೆಲಸದ ನಕ್ಷೆ ಸಿದ್ಧವಾಗಿಬಿಡುತ್ತಿತ್ತು. ಈ ವಿಧಾನದಿಂದ ಗೋಡೆಗಳ ಅಲಂಕರಣ ತೀವ್ರಗತಿಯಿಂದ ಸಾಗುವುದಲ್ಲದೇ ಎಲ್ಲ ನಕ್ಷೆಗಳೂ ಏಕ ಪ್ರಕಾರವಾಗಿ ಕಾಣುವಂತಾಗುತ್ತದೆ. ಅಲ್ಲದೇ ಕಿಡಕಿ, ಬಾಗಿಲುಗಳಿಗೆ ಅಂಚು ಹಾಕಲು ಅವನ್ನೇ ಬಳಸಬಹುದಾಗಿದೆ. ಇಷ್ಟೇ ಅಲ್ಲದೇ ಈ ಕಲೆಯಲ್ಲಿ ಹೆಚ್ಚು ಪರಿಣತಿ ಇಲ್ಲದವರನ್ನು ಈ ಕೆಲಸಕ್ಕೆ ಬಳಸಬಹುದಾಗಿದೆ. ಒಂದೇ ಅಚ್ಚನ್ನು ವಿವಿಧ ಕಟ್ಟಡ. ಇಲ್ಲವೇ ಬೇರೆ ಬೇರೆ ಕಾಲಕ್ಕೆ ಬಳಸಬಹುದಾಗಿದೆ. ಈ ಚಿತ್ರ ರಚನೆಗಳಿಗೆ ತಗಲುವ ಖರ್ಚು ಅತ್ಯಲ್ಪವಾಗಿದ್ದರಿಂದ ಖಾಸಗೀ ಕಟ್ಟಡಗಳಲ್ಲಿ ಮನೆಗಳಲ್ಲಿ ಅಲಂಕಾರಕ್ಕಾಗಿ ಈ ತಂತ್ರವನ್ನೇ ಹೆಚ್ಚಾಗಿ ಬಳಸುತ್ತಿದ್ದರು. ದೇವಾಲಯಗಳಲ್ಲಿ ಭಿತ್ತಿಚಿತ್ರಗಳಿಗೆ ಚೌಕಟ್ಟು ನಿರ್ಮಿಸಲು ಜಾಮಿತಿ ನಕ್ಷೆಗಳನ್ನು ವಿಪುಲವಾಗಿ ಬಳಸುತ್ತಿದ್ದರು. ಕರ್ನಾಟಕದ ಉದ್ದಗಲಕ್ಕೂ ಲಭ್ಯವಿರುವ ತಾಳೆಗರಿಯ ಹಸ್ತಪ್ರತಿಗಳಲ್ಲೂ ಇಂಥವೇ ಚಿತ್ರಗಳಿಂದ ಅಲಂಕರಿಸಲಾಗಿದೆ. ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಜೈನ ಮಠದಲ್ಲಿರುವ ಹನ್ನೊಂದನೆಯ ಶತಮಾನದ ತಾಳೆ ಗರಿಗಳ ಧವಳಾ ಗ್ರಂಥಗಳಲ್ಲಿಯೂ ಜಾಮಿತಿ ಚಿತ್ರಗಳನ್ನು ನೋಡಬಹುದಾಗಿದೆ.

ಕೇವಲ ಕೈವಾರವನ್ನು ಬಳಸಿ ಈ ಕಲಾಕಾರರು ಅದೆಷ್ಟು ಬಗೆಯ ಜಾಮಿತಿ-ನಕ್ಷೆಗಳನ್ನು ರಚಿಸಿದ್ದಾರೆಂದು ವಿಸ್ಮಯಪಡುವಷ್ಟು ಚಿತ್ರಪಟ್ಟಿಕೆಗಳನ್ನು ನೋಡಬಹುದಾಗಿದೆ. ದೇವ-ದೇವತೆಗಳ ಚಿತ್ರೀಕರಣಕ್ಕೆ ಪ್ರತಿಮಾಲಕ್ಷಣ, ಧ್ಯಾನ ಶ್ಲೋಕಗಳು ಕಲಾಕಾರನ ನೆರವಿಗೆ ಧಾವಿಸಿ ಬರುತ್ತಿದ್ದವು. ಆದರೆ ಈ ಚಿತ್ರಗಳನ್ನೆಲ್ಲ ಯಾವ ಆಧಾರದ ಮೇಲೆ ರಚಿಸಲಾಗುತ್ತಿತ್ತು? ಎಂದು ತಿಳಿಯುತ್ತಿಲ್ಲ. ಬಹುಶಃ ಮೊಮ್ಮಗಳು ಜಾತ್ರೆಯಲ್ಲಿ ಕೊಂಡ 'ಕಲೈಡೊಸ್ಕೋಪ'ನ್ನು ಅಜ್ಜಿಯೂ ಕುತೂಹಲದಿಂದ ವೀಕ್ಷಿಸಿ ಇಲ್ಲವೇ ಮೂರು ಗಾಜಿನ ಪಟ್ಟಿಗಳನ್ನು ಸಮತ್ರಿಭುಜ ಆಕಾರ ಬರುವಂತೆ ಜೋಡಿಸಿ ಅದರಲ್ಲಿ ವಿವಿಧ ಬಣ್ಣಗಳ ಬಳೆಗಳ ಚೂರು ಸೇರಿಸಿ ತಾನೇ ಒಂದು ಕಂತ್ರಿ ಕಲೈಡೊಸ್ಕೋಪ್ ತಯಾರಿಸಿಕೊಳ್ಳುತ್ತಿರಬೇಕು. ಈ ಚಿತ್ರಗಳಲ್ಲಿ ಅಶ್ವತ್ಥ, ಆಲ, ಮುತ್ತುಗದ ಎಲೆಗಳನ್ನು ಸುಲಭವಾಗಿ ಗುರುತಿಸಬಹುದು. ಅದರಂತೆ ದಾಸವಾಳ, ಸೇವಂತಿಗೆ, ಸಂಪಿಗೆ, ಸದಾನಂದ (ನಿತ್ಯಪುಷ್ಪ), ಕಮಲದ ಹೂವುಗಳ ಜಾಮಿತಿಕ ರೂಪಗಳನ್ನು ವಿಗಂಡಿಸಲು ಸಾಧ್ಯ. ಆದರೆ ಇನ್ನೂ ಅನೇಕಾನೇಕ ನಕ್ಷೆಗಳು ಯಾವ ಹೂ, ಎಲೆ, ಪಕಳೆ, ಹಣ್ಣು-ಹಂಪಲುಗಳನ್ನು ಪ್ರತಿನಿಧಿಸುತ್ತವೆ? ಎಂದು ಖಚಿತವಾಗಿ ಹೇಳುವುದು ಕಷ್ಟ! ಕೆಲವೆಡೆ ನಾಗರಹಾವಿನ ಹೆಡೆಯನ್ನು ಅಲಂಕರಣಕ್ಕಾಗಿ ರೂಪಿಸಿದ್ದೂ ಇದೆ. ಶ್ರೀಗಂಧದಲ್ಲಿ ವರ್ತುಲಾಕಾರದ ಹೂ-ಬಳ್ಳಿಗಳನ್ನು ಹಬ್ಬಿಸುತ್ತ ಸುಂದರವಾದ ಕುಸುರಿ ಕೆಲಸವನ್ನು ನಿರ್ಮಿಸುವುದರಲ್ಲಿ ಗುಡಿಗಾರರು ಹೆಸರುವಾಸಿ. ಇಂಥ ನಕ್ಷೆಗಳನ್ನು ಹಲವಾರು ದೇವಾಲಯಗಳಲ್ಲಿ ಕಾಣಬಹುದು. ಹೊಯ್ಸಳ ಶಿಲ್ಪಗಳ ಅಡಿಯಲ್ಲಿ ಇಂಥ ಬಳ್ಳಿಗಳು ಇರುವಂತೆ, ಮಹತ್ವದ ಅಂಕಣಗಳಲ್ಲೂ ಈ ತಂತ್ರದಿಂದ ಆಕರ್ಷಕವಾಗಿಸಿದ್ದಾರೆ.

ಭವ್ಯ ವರ್ತುಲಗಳನ್ನು ವಿವಿಧ ಜಾಮಿತಿ ಆಕಾರಗಳಿಂದ ತುಂಬಿ ತುಳುಕಿಸುವುದು ಈ ಕಲಾಕಾರರ ಇನ್ನೊಂದು ವೈಶಿಷ್ಟ್ಯ. ಸದಾಶಿವಗಡದಲ್ಲಿ ಒಂದರಲ್ಲಿ ಕಮಲದ



ಜಾಮಿತಿ ಬಳ್ಳಿಗಳು

ಹೂವುಗಳನ್ನು ತುಂಬಿಸಿದರೆ, ಇನ್ನೊಂದರಲ್ಲಿ ಏಕ ಕೇಂದ್ರಕ ಚಚ್ಚೌಕಗಳನ್ನು ಬಳಸಲಾಗಿದೆ. ಹೆಗಡೆಯಲ್ಲಿ ಒಂದನ್ನೊಂದು ಛೇದಿಸುವ ವರ್ತುಲ ಮತ್ತು ಸಮಾನಾಂತರ ವರ್ತುಲಗಳ ಉತ್ತಮ ಸಂಯೋಜನೆ ಮಾಡಲಾಗಿದೆ. ಬಾಳೇಗದ್ದೆಯಲ್ಲಿ ಅದೇನೋ ಮಹಾನಿಧಿ ಕಾಯಲೋ! ಎಂಬಂತೆ ಈರ್ವರು ಖಡ್ಗಧಾರಿಗಳು ಕಾವಲಾಗಿ ನಿಂತಿದ್ದಾರೆ. ಅದೇ ಅಶನೋಟಿಯಲ್ಲಿ ಇದೇ ಜವಾಬ್ದಾರಿಯನ್ನು ಸರ್ಪಜೋಡಿಗೆ ವಹಿಸಿಕೊಟ್ಟಂತೆ ಭಾಸವಾಗುತ್ತದೆ. ಈ ದೇವಾಲಯದ ಹೆಬ್ಬಾಗಿಲ ಒಳಮುಚ್ಚಿಗೆಯನ್ನು ಕಮಾನಿನಂತೆ ರಚಿಸಿ, ಅವುಗಳಲ್ಲಿ ಅನೇಕಾನೇಕ ಜಾಮಿತಿ ಅಲಂಕೃತ ವರ್ತುಲಗಳನ್ನು ರಚಿಸಲಾಗಿದೆ. ಒಂದು ಪಂಚಪಾತ್ರೆಯನ್ನು ಹೋಲಿದರೆ ಇನ್ನೊಂದು ಗಿರಿಗಿಟ್ಲೆ, ಮತ್ತೊಂದು ಅರಳುತ್ತಿರುವ ಕಮಲ, ಹೀಗೆ ವಿವಿಧ ರೂಪಗಳನ್ನು ಮೂಡಿಸಲಾಗಿದೆ. ಹೊಸಾಡ ರಾಮಕೃಷ್ಣ ಶ್ರೀನಿವಾಸ ನಾಯ್ಕರ ಒಳ ಮನೆಯನ್ನು ಅರಳಿದ ದಾಸವಾಳದ ಹೂ ಮತ್ತು ಸುದರ್ಶನ ಚಕ್ರಗಳನ್ನು ನೆನಪಿಗೆ ತರುವಂಥ ವರ್ತುಲಗಳಿಂದ ಸಿಂಗರಿಸಲಾಗಿದೆ.

ಈ ಜಾಮಿತಿ ನಕ್ಷೆಯ ವರ್ತುಲಕ್ಕೇ ಬೊಡ್ಡೆಯೊಂದನ್ನು ಜೋಡಿಸಿದರೆ, ಅದೊಂದು ವೃಕ್ಷ ಎಂಬ ಭಾವನೆ ಬರುವಂತಾಗುತ್ತದೆ. ಇಂಥ ಆರು ಚಿತ್ರಗಳಿಂದ ಕೆಕ್ಕಾರದ ದೇವಾಲಯದ ಹೊರ ಗೋಡೆಯನ್ನು ಅಲಂಕರಿಸಲಾಗಿದೆ. ಬಳಲೆಯ ಗರ್ಭಗೃಹದ ಮಹಡಿಗೆ ಎರಡು ವೃಕ್ಷಗಳನ್ನು ಜೋಡಿಸಲಾಗಿದೆ. ಕೊಲ್ಲೂರಿನ ಹೊರ ಗೋಡೆಯ ಮೇಲೆ ರೆಂಬೆಗಳಿದ್ದ ವೃಕ್ಷವಿದೆ. ನಾಚೋಲಿಯಲ್ಲಿ ಬೆಳಕಿನ ಕಿಂಡಿಗೆ ಕೋಡುಗಳು ಮೂಡಿದಂತೆ, ಜೋಡಿ ಮರಗಳನ್ನು ರೂಪಿಸಲಾಗಿದೆ. ಇನ್ನೊಂದು ಗೋಡೆಯ ಮೇಲೆ ಪ್ರಾಚೀನಕಾಲದ ನಾಪಿತನ ಕೈಗನ್ನಡಿ ಹೋಲುವಂತೆ ಭಾಸವಾಗುವ ವೃಕ್ಷವಿದೆ! ಜಾಮಿತಿ ವೃಕ್ಷಗಳಲ್ಲಿ ವೈವಿಧ್ಯ ನೋಡಬೇಕಿದ್ದರೆ, ಮಾವಿನಕುರ್ವೆಗೆ ಹೋಗಬೇಕು. ಬಳಲುತ್ತಿರುವ ಬಳ್ಳಿಯೊಂದು ಅಷ್ಟೇ ನಾಜೂಕಾದ ವರ್ಣಗಳನ್ನು ತಳೆದರೂ ಹೊರಲಾರದ ವರ್ತುಲವೊಂದನ್ನು ಹೊತ್ತಿದೆ. ಇನ್ನೊಂದರಲ್ಲಿ ಎಲೆಗಳಿಲ್ಲದಿದ್ದರೂ ಐದು ಪಕಳೆಯ ಪುಷ್ಪಗಳು ಅರಳಿ ನಿಂತಿವೆ. ಮಗುದೊಂದರಲ್ಲಿ ಪರ್ಣಗಳ ಜೊತೆಗೆ ಫಲಗಳನ್ನು ಹೊತ್ತದ್ದರಿಂದ ಕಾಂಡ, ಶಕ್ತಿಯುತವಾಗಿದೆ. ಇವುಗಳನ್ನೆಲ್ಲ ಹೋಲುವಂಥ ವೃಕ್ಷಗಳನ್ನು ಬಳಲೆಯಲ್ಲಿಯೂ ಕಾಣಬಹುದು. ಶೆಟಗೇರಿಯಲ್ಲಿ ಜೋಡಿ ಹಕ್ಕಿಗಳು ಮರದ ಮೇಲೆ ಆಶ್ರಯ ಪಡೆದಿವೆ.

ಜಾಮಿತಿ ಚಿತ್ರಪಟ್ಟಿಕೆ ಮತ್ತು ವರ್ತುಲ ವೃಕ್ಷಗಳನ್ನು, ದೇವಾಲಯ ಮತ್ತಿತರ ಕಟ್ಟಡಗಳನ್ನು ಅಲಂಕರಿಸಲು ಧಾರಾಳವಾಗಿ ಬಳಸುತ್ತಿದ್ದರು. ಅವುಗಳ ಸಂಯೋಜನೆ ಹೇಗೆ ಇರುತ್ತಿತ್ತು? ಎಂದು ಅರಿಯಬೇಕಾದರೆ, ಸಿರ್ಸಿ ಮಾರಿಕಾಂಬಾ ದೇವಾಲಯದ ಹಿಂದಿನ ಛಾಯಾಚಿತ್ರಗಳನ್ನು ಅಭ್ಯಸಿಸಬೇಕು, ಮಂಗಳೂರು ಹಂಚಿನ ಎರಡು ಮಾಡುಗಳಿರುವ ಮೂರಂತಸ್ತಿನ ಭವ್ಯ ಕಟ್ಟಡ, ಒಳ-ಹೊರಗೆ ಕಾವಿ ಚಿತ್ರಗಳಿಂದ ತುಂಬಿತುಳುಕುತ್ತಿತ್ತು. ಹೆಬ್ಬಾಗಿಲಿನ ಎಡಬಲದಲ್ಲಿ ಇನ್ನೂ ಎಂಟು ಕಿರುವಾಗಿಲುಗಳಿವೆ. ಅಲ್ಲದೇ ಇಪ್ಪತ್ತಾರು ತೋರಿಕೆಯ ಕಿಡಕಿ-ಕಂಬಗಳನ್ನು ರಚಿಸಲಾಗಿದೆ. ವರ್ತುಲ, ಲಂಬ ವರ್ತುಲ, ಚೌಕೋನ, ಮೊಗ್ಗೆ, ಪಕಳೆಗಳನ್ನು ಬಳಸಿ ಅಂಚುಗಳನ್ನು ಅಲಂಕರಿಸಲಾಗಿದೆ. ನಡುನಡುವೆ ವರ್ತುಲಗಳನ್ನು, ವರ್ತುಲ ವೃಕ್ಷಗಳನ್ನು, ಜೋಡಿಸಿದ್ದರಿಂದ, ಇಡೀ ದೇವಾಲಯವೇ ಸಿಂಗರಿಸಲ್ಪಟ್ಟ ದಿವಾನಖಾನೆಯನ್ನು ನೆನಪಿಗೆ







ವರ್ತುಲಗಳಲ್ಲಿ ಕುಸುರಿನ ಕೆಲಸ

ತರುತ್ತದೆ. ಗೋಕರ್ಣದಲ್ಲಿ ತೋರಿಕೆಯ ಕಂಬಗಳನ್ನು ಹುಲಿಯ ಪಟ್ಟಿಗಳಿಂದ ಅಲಂಕರಿಸಲಾಗಿದೆ. ಕಾಣಕೋಣದಲ್ಲಿ ಮಾಡನ್ನು ಹೊತ್ತು ನಿಂತ ಬೃಹತ್ ಕಂಬಗಳು ಸರಪಳಿಗಳ ಅಲಂಕರಣ ತಾಳಿವೆ.

ಕಟ್ಟಡ-ಮೋಲಿಗಳ ವರ್ಣ ಸಂಯೋಜನೆಯ ತರಬೇತಿ ಕೇವಲ ಇಂದಿನವರ ಸೊತ್ತೆಂದು ಯಾರು ತಿಳಿಯಬೇಕಾಗಿಲ್ಲ. ಕಾವಿ ಚಿತ್ರಗಳನ್ನು ಹೊತ್ತ ಎಲ್ಲ ಕಟ್ಟಡಗಳಲ್ಲಿಯೂ ಇಂಥ ಏರ್ಪಾಡು ಇದ್ದೇ ಇರುತ್ತಿತ್ತು. ಗೋಡೆಗಳ ಅಂಚುಗಳನ್ನು ಚಿತ್ರ ಪಟ್ಟಿಕೆಗಳಿಂದ ಅಲಂಕರಿಸಿದರೆ.. ಬಾಗಿಲು-ಕಿಟಕಿಗಳ ಸುತ್ತಲೂ ಅವನ್ನು ಮೂಡಿಸಿರುತ್ತಿದ್ದರು. ನಡುಗೋಡೆಯಲ್ಲಿ ಜಾಮಿತಿ-ಚಿತ್ರಗಳನ್ನು-ವರ್ತುಲ ರೂಪದಲ್ಲಿ ತೆಗೆದರೆ ಗೋಡೆಗಳ ಮೂಲೆಗೆ ಕಾಲು-ವರ್ತುಲಗಳನ್ನು ಸೇರಿಸಿರುತ್ತಿದ್ದರು. ಇದರಿಂದ ಎಲ್ಲೆಡೆಗೆ ಶಾಶ್ವತ ರಂಗೋಲಿಯಿಟ್ಟ ಅನುಭವವಾಗುತ್ತಿತ್ತು. ಇಂದಿಗೂ ಅವರ್ಸಾದ ನಾಗೇಶ ಶೆಟ್ಟಿ ಅವರ ಮನೆಯಲ್ಲಿ ಅಂತಹದೇ ಅನುಭವವಾಗುತ್ತದೆ. ಜಾಮಿತಿ ಆಕೃತಿಗಳ ಜೊತೆಗೆ ಹೂಬಳ್ಳಿಗಳನ್ನು ಸೇರಿಸಿ ಗೋಡೆಗಳ ಅಂದ-ಚೆಂದ ಹೆಚ್ಚಿಸಿದ್ದಾರೆ. ಮೇಲಿನ ಸ್ತರದಲ್ಲಿ ಸರಪಣಿ, ನಂತರ ಅಶ್ವತ್ಥ ಎಲೆಗಳ ಸಾಲು, ಅದರಡಿಯಲ್ಲಿ ಪುಷ್ಪಲತೆಗಳು ಶೋಭಿಸುತ್ತವೆ. ಪರ್ತಗಾಳ ಮಠದಲ್ಲಿ ಹಿಂದಿನ ಸ್ವಾಮಿಗಳ ಸಮಾಧಿ ಸ್ಥಳಕ್ಕೆ ಹೋದಾಗ ಆಗುವ ಅನುಭವವೇ ಬೇರೆ. ಅಲ್ಲಿ ಸ್ಮಶಾನದ ರುದ್ರ ನೀರವತೆಯ ಬದಲಾಗಿ ಪ್ರಶಾಂತ ಪರಿಸರ ಸ್ವಾಗತಿಸುತ್ತದೆ. ಅಲ್ಲಿಯ ಗೋಡೆಗಳ ಜೊತೆಗೆ ಅನೇಕಾನೇಕ ವೃಂದಾವನಗಳನ್ನು ಜಾಮಿತಿ ಚಿತ್ರ ಪಟ್ಟಿಕೆಗಳಿಂದ ಅಲಂಕರಿಸಲಾಗಿದೆ.




ಗಿಡ, ಬಳ್ಳಿಗಳು



ಗಿಡ, ಬಳ್ಳಿಗಳು

ಗರ್ಭಗುಡಿಯಲ್ಲಿ ಗಾಳಿ-ಬೆಳಕುಗಳ ಅಭಾವ ಇರುವುದರಿಂದ ಕಿರಿದಾದ ಬಾಗಿಲು, ಕಿಡಕಿ, ಜಾಲಾಂದ್ರಗಳನ್ನು ಜೋಡಿಸುವದು ವಾಡಿಕೆ. ಆದರೆ ಇವು ಇನ್ನಿತರ ಕಟ್ಟಡಗಳಲ್ಲಿ ಇದ್ದವುಗಳಿಗಿಂತ ತೀರ ಭಿನ್ನ. ಮಾವಿನಕುರ್ವೆಯ ಜಾಲಾಂದ್ರಕ್ಕೆ ಮೇಲುನೋಟಕ್ಕೆ ಕಿಟಕಿಯ ಆಕಾರಕೊಟ್ಟು ಜಾಮಿತಿ-ಹೂಬಳ್ಳಿಗಳಿಂದ ಸಿಂಗರಿಸಲಾಗಿದೆ. ಗೋಕರ್ಣದ ಕಿಡಕಿಗಳನ್ನು ಹೃದಯಾಕಾರದ ನಕ್ಷೆಗಳಿಂದ ಅಲಂಕರಿಸಲಾಗಿದೆ. ಚಿತಾಕುಲಿಯ ಕಿಡಕಿಗಳಿಗೆ ವರ್ತುಲಾಕಾರದ ಹೂ-ಬಳ್ಳಿಗಳಿಂದ ಅಂಚು ರಚಿಸಲಾಗಿದೆ. ಬಳಲೆ ಗ್ರಾಮದಲ್ಲಿ ಜಾಮಿತಿ, ಚಿತ್ರಗಳನ್ನಷ್ಟೇ ಬಳಸಿ ಕಿಡಕಿ, ಎಂದು ಮೋಸಹೋಗುವಂಥ ಚಿತ್ರವಿದೆ. ಅಘನಾಶಿನಿಯಲ್ಲಿ ಷಟಕೋನ-ಚೌಕೋನ ಕಿಟಕಿಯ ಸುತ್ತ ವರ್ತುಲಗಳ ಚಿತ್ರ ಪಟ್ಟಿಕೆ ಓಡುತ್ತದೆ. ಸದಾಶಿವಗಡದಲ್ಲಿ ದ್ವಿಸ್ತರಗಳಲ್ಲಿ ಚಿತ್ರಪಟ್ಟಿಕೆಗಳನ್ನು ಜೋಡಿಸಲಾಗಿದೆ. ನಾಚೋಲಿಯಲ್ಲಿ ಸರಪಣಿಗಳನ್ನಷ್ಟೇ ಬಳಸಲಾಗಿದೆ. ಶೆಟಗೇರಿಯಲ್ಲಿ ಕಮಾನು ಇರುವ ಬಾಗಿಲನ್ನು ಅಗಲವಾದ ಚಿತ್ರಪಟ್ಟಿಯಿಂದ ಆಕರ್ಷಕವಾಗಿ ಮಾಡಲಾಗಿದೆ. ಚಿತಾಕುಲಿಯಲ್ಲಿ ಇಂತಹದೇ ಬಾಗಿಲು ಇದ್ದರೂ ಅದರ ಮೇಲೆ ಅರ್ಧ ಮಾತ್ರ ಚಿತ್ರಪಟ್ಟಿಯನ್ನು ಹೊಂದಿದೆ. ಬರ್ಗಿಯ ಬಾಗಿಲಿಗೆ ಬಾಲಿಶವಾದ ಚಿತ್ರಪಟ್ಟಿಕೆ ಇದೆ. ನಾಚೋಲಿ ದೇವಾಲಯಕ್ಕೆ ಗುಡಿಗಾರರ ಕುಸುರಿನ ಕೆಲಸ ಜೋಡಿಸಿ ಆಕರ್ಷಕ ಮಾಡಿದ್ದಾರೆ. ಇಂಥ ಅದೆಷ್ಟು ಚಿತ್ರಪಟ್ಟಿಕೆಗಳು ಕಾಲಗರ್ಭದಲ್ಲಿ ಮರೆಯಾಗಿ ಹೋದವೆಂಬುದು ದೇವರಿಗೂ ತಿಳಿದಿದೆಯೋ ಇಲ್ಲವೋ!







ರುಮಾಲಿನವರು

4. ಸಮಕಾಲೀನ ವ್ಯಕ್ತಿಗಳು

ಕಾವಿ ಚಿತ್ರಗಳ ಸಂಖ್ಯೆಯಲ್ಲಿ ದೇವ-ದೇವತೆಗಳಿಗೆ ಸಿಂಹಪಾಲು ಮೀಸಲು ಇದ್ದರೂ ಕಲಾಕಾರರು ಸಮಕಾಲೀನ ವ್ಯಕ್ತಿಗಳನ್ನು ಸಂಪೂರ್ಣವಾಗಿ ಕಡೆಗಣಿಸಲಿಲ್ಲ. ಅವರನ್ನು ನೋಡುತ್ತಿದ್ದಂತೆ, ಇವರು ಊರ ಪ್ರತಿಷ್ಠಿತರು, ಅವರು ದಾನಿಗಳು, ಧರ್ಮಿಷ್ಠರು, ದೇವಾಲಯಗಳ ಮೊಕ್ತೇಸರರು, ವಂಶದ ಹಿರಿಯರು, ಸೇನಾಧಿಪತಿಗಳು, ವೀರರು, ಸೈನಿಕರು, ಎಂದೆಲ್ಲ ಗುರುತಿಸಬಹುದಾಗಿದೆ. ಅವರ ವೇಷಭೂಷಣಗಳ ಮೇಲೆ ಪಾಶ್ಚಾತ್ಯರ ಪ್ರಭಾವ ಎದ್ದು ಕಾಣುತ್ತದೆ. ಚಿತ್ರಗಳಲ್ಲಿ ವ್ಯಕ್ತಿಗಳ ಹೆಸರುಗಳನ್ನು ನಮೂದಿಸದೇ ಇದ್ದದ್ದು ಶೋಚನೀಯ. ಹಾಗೇನಾದರೂ ಮಾಡಿದ್ದರೆ ಕುಟುಂಬದ ಮೂಲ ಪುರುಷ ಮತ್ತು ವಂಶಾವಳಿಯನ್ನು ಸುಲಭವಾಗಿ ಶೋಧಿಸಬಹುದಾಗಿತ್ತು.

ವಿವಿಧ ವೃತ್ತಿಗಳಲ್ಲಿ ತೊಡಗಿದ ವ್ಯಕ್ತಿಗಳು ನೈಜವಾಗಿ ಚಿತ್ರಿತರಾಗಿದ್ದಾರೆ. ಹೊನ್ನಾವರದಲ್ಲಿ ಕೇವಲ ಉದರ ನಿಮಿತ್ತವಾಗಿ ದೇವರ ಪೂಜೆಯನ್ನು ಅವಲಂಬಿಸಿದ ಪೂಜಾರಿ, ಕೋತಿ ಟೋಪಿ ಧರಿಸಿ, ಯಜ್ಞೋಪವೀತ ಪ್ರದರ್ಶಿಸುತ್ತಾ, ಒದ್ದೆ ಪಂಚೆಯುಟ್ಟು ಬರಿ ಮೈಯಲ್ಲಿ, ಎಡಗೈಯಲ್ಲಿ ಇದ್ದ ಗಂಟೆ ಬಾರಿಸುತ್ತಾ, ಬಲಗೈಯಿಂದ ಆರತಿಯೆತ್ತುವದರಲ್ಲಿ ಮೈ ಮರೆತಿದ್ದಾನೆ. ಹೊಸಾಡದ ಅಡಿಗೆಭಟ್ಟರು, ತಲೆ ಬೋಳಿಸಿಕೊಂಡು, ಅಂಗವಸ್ತ್ರವನ್ನು ಸೊಂಟಕ್ಕೆ ಬಿಗಿದುಕೊಂಡು, ಎಡಗೈಯಲ್ಲಿ ಹಿಡಿದ ದ್ರೋಣ, ಬಲಗೈಯಲ್ಲಿಯ ಸೌಟಿನಿಂದ ಬಡಿಸುವ ಸಿದ್ಧತೆ ನಡೆಸಿದ್ದಾರೆ. ಹೆಗಡೆಯ ಕೀರ್ತನಕಾರನು, ಭಾವುಕರಿಗೆ ಧರ್ಮೋಪದೇಶದ ಜೊತೆಗೆ ರಂಜನೆ ನೀಡುತ್ತಿದ್ದಾನೆ. ಅವನ ಎತ್ತರದ ಪೇಟ, ನಿಲುವಂಗಿ, ಕಚ್ಚೆ ಹಾಕಿ ಉಟ್ಟ ಧೋತರ, ಬಲಗೈಯಲ್ಲಿ ತಂತಿವಾದ್ಯ, ಎಡಗೈಯಲ್ಲಿ ಟಪರಿ (ಚಿಟಕಿ), ಸ್ಫುಟವಾಗಿವೆ. ಗತ ದಿನಗಳಲ್ಲಿ ಕರಾವಳಿಯಲ್ಲಿ, ಬೇಸಿಗೆಯ ದಿನಗಳಲ್ಲಿ, ವಿವಿಧ ದೇವತೆಗಳ ಪುರಾಣ, ಭಗವನ್ನಾಮ ಸಂಕೀರ್ತನೆ, ಜೊತೆಗೆ ಪ್ರೌಢರಿಗೆ ಶಿಕ್ಷಣ ನೀಡುತ್ತಿದ್ದ ಕೊಂಕಣಿ ಕೀರ್ತನಕಾರರು (ಹರಿಕಥೆಯವರು) ನೆನಪಿಗೆ ಬರುತ್ತಾರೆ. ಶಿರಾಲಿಯಲ್ಲಿ ಯಾವುದೋ ಸಮಾರಂಭಕ್ಕೆ ಅತಿಥಿಗಳನ್ನು ಕೈಜೋಡಿಸಿಕೊಂಡು ಬರಮಾಡಿಕೊಳ್ಳುವ ಯಜಮಾನನು ತೀರ ನೈಜವಾಗಿ ಚಿತ್ರಿತನಾಗಿದ್ದಾನೆ. ಬೆಲೆ ಬಾಳುವ ಬಟ್ಟೆಗಳನ್ನು ಧರಿಸಿ, ಬಲಗೈಯಲ್ಲಿ ಶಾಲು, ಖಡ್ಗದೊಂದಿಗೆ ನಿಂತ ಹಿರಿಯನು ಊರ ಶಾನುಭೋಗನಿದ್ದಿರಬಹುದು. ಕುರ್ಚಿಯಲ್ಲಿ ಕುಳಿತು ಒಂದು ಕೈಯಲ್ಲಿ ಖಡ್ಗ, ಇನ್ನೊಂದರಲ್ಲಿ ಢಾಲು ಹಿಡಿದವನು ಊರ ಪಾಳೇಗಾರನಿರಬಹುದು, ಅಥವಾ ಸೇನಾಪತಿಯಿರಬಹುದು. ಕೆಲವು ದೇವತೆಗಳ ಅಂಕಣದಲ್ಲಿ ಟಿಪ್ಪುಸುಲ್ತಾನ ಪೂರ್ಣಯ್ಯರನ್ನು ಹೋಲುವ ವ್ಯಕ್ತಿಗಳ ಕಿರುಚಿತ್ರಗಳಿವೆ. ಆದರೆ ಇವರು ಐತಿಹಾಸಿಕ ವ್ಯಕ್ತಿಗಳಲ್ಲ.



ಹ್ಯಾಟು ಧರಿಸಿದವರು

ಪುರುಷರ ಶಿರೋವಸ್ತ್ರಗಳ ವೈವಿಧ್ಯ ಹೇಳತೀರದು. ಮೈಸೂರು ಪೇಟದಂಥ ಶಿಸ್ತಿನ ಜರಿಯಂಚಿನ ರುಮಾಲಿಗೆ ರಸಿಕನೋರ್ವನು ಹೂವೊಂದನ್ನು ಸಿಕ್ಕಿಸಿಕೊಂಡಿದ್ದಾನೆ. ಅದನ್ನು ಕಷ್ಟಪಟ್ಟು ಪ್ರತಿದಿನ ಸುತ್ತಿಕೊಳ್ಳಬೇಕಾಗಿತ್ತೇ? ಇಲ್ಲವೇ ಕ್ಷಣಾರ್ಧದಲ್ಲಿ ಧರಿಸಲು ಬರುವಂತೆ ಸುತ್ತಿಟ್ಟು ಸದಾಕಾಲ ಸಿದ್ಧವಾಗಿಯೇ ಇಡುತ್ತಿದ್ದರೋ ಎಂದು ಹೇಳುವುದು ಕಷ್ಟ! ಇದೀಗ ಬಿಚ್ಚಿಕೊಳ್ಳುತ್ತದೆ! ಎಂದು ಬೆಚ್ಚಿ ಬೀಳಿಸುವಂಥ ರಾಜಸ್ಥಾನಿ ಪಗಡಿಯೂ ಇದೆ. ಹಗುರವಾದ ಚಿತ್ರದ ಬಟ್ಟೆಯಿಂದ ಕಲಾತ್ಮಕವಾಗಿ ರಚಿತವಾಗಿದೆ. ಒಂದು ರುಮಾಲಿನ ಅಂಚನ್ನು ಗಂಡು ನವಿಲನ್ನು ನಾಚಿಸುವಂತೆ ತುರಾಯಿಯಂತೆ ಎತ್ತರಿಸಿ ಬಿಗಿದರೆ, ಇನ್ನೊಂದನ್ನು ಬಲಭುಜದಿಂದ ಎದೆಯ ಮೇಲೆ ಇಳಿಬಿಡಲಾಗಿದೆ. ಸಂತ ತುಕಾರಾಮನ ಪಗಡಿ, ನಾನಾಫಡಣವೀಸನ 'ಪೇಶ' ಶಿರೋಭೂಷಣವನ್ನೂ ಗುರುತಿಸಬಹುದು. ಕೆಲವು ರುಮಾಲುಗಳಂತೂ, ತೀರ ಚಿಕ್ಕವಾಗಿ ಹಗುರವಾಗಿರುವುದರಿಂದ ಬೀಸುಗಾಳಿಗೆ ಹಾರಿ ಹೋಗದಂತೆ ಹೇಗೆ ಸಂರಕ್ಷಿಸಿಕೊಳ್ಳುತ್ತಿದ್ದರು? ಎಂದು ವಿಸ್ಮಯ ಪಡುವಂತೆ ಇವೆ. ಜನಸಾಮಾನ್ಯರು ಸದಾಕಾಲ ತಮ್ಮೊಂದಿಗೆ ಒಯ್ಯುವ ಅಂಗವಸ್ತ್ರವನ್ನೇ ತಲೆಗೆ ಸುತ್ತಿಕೊಂಡಿದ್ದಾರೆ. ಈ ಪರಿಪಾಠ ಇಂದಿಗೂ ಕರಾವಳಿಯಲ್ಲಿ ನಡೆದು ಬಂದಿದೆ, ಎಂದು ಜ್ಞಾಪಿಸಿಕೊಳ್ಳಬಹುದು.

ಅದಾಗಲೇ ಸಿದ್ಧವಾದ ಟೋಪಿ, ಪಾಶ್ಚಾತ್ಯ ಪದ್ಧತಿಯ ಹ್ಯಾಟುಗಳು ಬಳಕೆಯಲ್ಲಿ ಬಂದಿದ್ದವೆಂದು ಈ ಚಿತ್ರಗಳು ಸಾಕ್ಷಿ ಹೇಳುತ್ತವೆ. ಮೊನ್ನೆ ಮೊನ್ನೆಯವರೆಗೂ ಬಳಕೆಯಲ್ಲಿದ್ದ ಮಖಮಲ್ಲಿನ ಜರಿ ಕೆಲಸದ ಟೋಪಿಗಳನ್ನು ಸುಲಭವಾಗಿ ಗುರುತಿಸಬಹುದು. ಕೆಂಪು, ನೀಲಿ, ಜಾಂಬಳಿ ಬಣ್ಣದ ಲಂಬಗೋಲಾಕಾರದ ಟೋಪಿಗಳಿಗೆ ಕಣ್ಸೆಳೆಯುವ ಅಂದ ಚಂದದ ಕಸೂತಿಯಿರುತ್ತಿತ್ತು. ಮದುವೆ, ಮುಂಜಿ, ಜಾತ್ರೆಗೆ ಹೊರಟಾಗಲೆಲ್ಲ ಜರಿಟೋಪಿ ಧರಿಸಿದ ಮಕ್ಕಳು ಜಂಬದ ಕೋಳಿಗಳಂತೆ ಪಾಲಕರೊಂದಿಗೆ ಹೊರಡುತ್ತಿದ್ದ ದೃಶ್ಯ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಪ್ರಖರವಾದ ಸೂರ್ಯನ ಬಿಸಿಲು, ಕಣ್ಣು ಕುಕ್ಕದಂತೆ ಕಾಪಾಡುತ್ತಿದ್ದ 'ಚಪ್ಪೆ' ಹ್ಯಾಟುಗಳನ್ನು ಗುರುತಿಸಬಹುದು. ಬಹುಶಃ ಇದು ಫ್ರೆಂಚ್‌ರ ಕೊಡುಗೆಯಿರಲಿಕ್ಕೆ ಸಾಕು. ಅಮೇರಿಕನ್ ದನಗಾಹಿಗಳು (ಕೌಬಾಯ್) ಬಳಸುವಂಥ ವಿಸ್ತಾರವಾದ ಹ್ಯಾಟುಗಳೂ ಕಂಡುಬರುವುದರಿಂದ, ಅವೂ ನಮ್ಮಲ್ಲಿ ಬಳಕೆಯಲ್ಲಿದ್ದವೇ? ಎಂದು ಗೊಂದಲವುಂಟಾಗುವುದು ತೀರ ಸ್ವಾಭಾವಿಕ. ಅಪರೂಪಕ್ಕೆ ಶಂಖದಾಕಾರದ ಎತ್ತರದ ಶಿರೋಭೂಷಣ ಕಾಣಬಹುದಾಗಿದೆ. ಹೆಂಗಳೆಯರಂತೆ ಗಂಡಸರೂ ಉದ್ದ ಕೂದಲು ಬಳಸುವ ಪರಿಪಾಠ ಇದ್ದಂತೆ, ಕೆಲವರು ಬಾಬ್ ಕಟ್ ತರಹ ಕಿರಿಯ ಕೂದಲು ಇಟ್ಟುಕೊಂಡಿದ್ದಾರೆ. ಪಾಶ್ಚಾತ್ಯರಂತೆ ಅಲಂಕೃತ ಕ್ರಾಪ್ ಇಟ್ಟುಕೊಂಡವರು, ಚಿತ್ರಿತವಾದಂತೆ, ಕೆಲವರಾದರೂ ಬಕ್ಕತಲೆ, ಇಂದಿನಂತೆ ಅಂದಿಗೂ ಸಾಕಷ್ಟು ಪ್ರಮಾಣದಲ್ಲಿ ಇದ್ದಿರಬೇಕೆಂದು ಬರಿತಲೆಯವರು ಸಾಕ್ಷಿ ಹೇಳುತ್ತಾರೆ.

ಜಾತಿಯ ಸಂಕೇತವಾಗಿ ಹಣೆಯಲ್ಲಿ ಲಾಂಛನವನ್ನು ಇಟ್ಟುಕೊಳ್ಳುವುದು ಪುರಾತನ ಕಾಲದಿಂದ ಏಕಪ್ರಕಾರವಾಗಿ ನಡೆದುಬಂದ ಪರಿಪಾಠ. ಹೀಗಾಗಿ ಚಿತ್ರಿತ ವೈಷ್ಣವರು ಗೋಪಿಚಂದನದ ನಾಮುಗಳನ್ನು ಎಳೆದುಕೊಂಡರೆ ಶೈವರು ವಿಭೂತಿಯನ್ನು ಬಳಿದುಕೊಂಡಿದ್ದಾರೆ. ಅಪರೂಪಕ್ಕೆ ಅರ್ಧಚಂದ್ರನೂ ಹಣೆಯಲ್ಲಿ ವಿರಾಜಿಸುತ್ತಿದ್ದಾನೆ.



ಪಾಶ್ಚಿಮಾತ್ಯ ಉಡುಪಿನ ಪ್ರಭಾವ

ಮೇಲ್ಬುಟೆಯನ್ನು ಬೋಳಾಗಿರಿಸುವವರನ್ನು ಹೆಂಗಳೆಯರು ಅಷ್ಟೊಂದು ಗೌರವದಿಂದ ಕಾಣದ್ದರಿಂದಲೋ ಏನೋ ಯಾರೊಬ್ಬರೂ ಮೀಸೆಯಿಲ್ಲದ ಮುಖ ಮೆರೆಸುವ ಎದೆಗಾರಿಕೆ ತೋರಿಯೇ ಇಲ್ಲ! ಕುಡಿಮೀಸೆಯ ಯುವಕರಿದ್ದಂತೆ, ತಲವಾರ ಮೀಸೆಯ ಯೋಧರೂ ಚಿತ್ರಿತರಾಗಿದ್ದಾರೆ. ಸರದಾರಜಿಗಳಂತೆ ಮೂಗಡಿಯ ಕೇಶರಾಶಿಯನ್ನು ಸಂಪೋಷಿಸಿ, ಬೆಳೆಸಿ, ಅಂಚುಗಳಿಗೆ ಜಿಗಟು ಪದಾರ್ಥವನ್ನು ತಿಕ್ಕಿ ತೀಡಿ ಚೂಪಾಗಿಸುವ ಪದ್ಧತಿ ನಮ್ಮಲ್ಲೂ ಇತ್ತೆಂದು ಹಲವು ಚಿತ್ರಗಳಿಂದ ಅರಿಯಬಹುದಾಗಿದೆ. ಭೋಜನದಲ್ಲಿ




ಊರ ಪ್ರತಿಷ್ಠಿತರು

ತೊಡಗಿದ ಜೊಂಡಿಗನನ್ನು ನೆನಪಿಗೆ ತರುವ, ಹಿಟ್ಲರನ ಮೀಸೆ, ಭಗತ್‌ಸಿಂಗನ ಸೂಜಿಮೀಸೆ, ರಾಜಾತೋಡರಮಲ್ಲನ ಅಳಿಲಬಾಲ ಮೀಸೆಗಳನ್ನು ಗುರುತಿಸಬಹುದಾಗಿದೆ. ಕೆಲವರಂತೂ ನಿಂಬೆಹಣ್ಣಿನ ಗಾತ್ರದ ಅಂಚುಗಳನ್ನು ಪೊದೆ ಪೊದೆಯಾಗಿ ಬೆಳೆಸಿದ್ದಾರೆ.

ಇಂದಿನ ಸ್ತ್ರೀಯರನ್ನು ನಾಚಿಸುವಷ್ಟು ಅಂದಿನ ಪುರುಷರು ಆಭರಣಗಳನ್ನು ತೊಡುತ್ತಿದ್ದರು. ಜನ ಸಾಮಾನ್ಯರು ಒಂದು ಅಥವಾ ಎರಡು ಚಿನ್ನದ, ಇತರ ಧಾತುವಿನ ವಂಟಿಗಳನ್ನು ಕಿವಿಗಳಿಂದ ನೇತು ಹಾಕಿಕೊಂಡರೆ ರಸಿಕರು, ಧನಿಕರು, ಒಂದರಿಂದ ಮೂರರವರೆಗೆ ಮುತ್ತು ಜೋಡಿಸಿದ ಲೋಲಕು ಧರಿಸುತ್ತಿದ್ದರು. ಶಿರೋವಸ್ತ್ರಕ್ಕೂ ರತ್ನಖಚಿತ ಪಟ್ಟಿಯನ್ನು ನೇತು ಹಾಕುವವರಿದ್ದರು. ಕಂಠಕ್ಕೆ ಸರ, ಸರಪಣಿ, ಹಾರ, ಕಂಠಿಕೆಗಳನ್ನು ಧರಿಸುತ್ತಿದ್ದರು. ಅಂಗಿ ಧರಿಸದಿದ್ದವರೂ, ಮುತ್ತಿನ ಹಾರಗಳೊಂದಿಗೆ ಹೂವಿನ ಹಾರಗಳನ್ನು ಹಾಕಿಕೊಳ್ಳುತ್ತಿದ್ದರು. ತೋಳು, ಮೊಣಕೈಗಳಿಗೂ ತೊಡುಗೆಗಳು ಇದ್ದಂತೆ ಸೊಂಟಪಟ್ಟಿ, ಕಾಲ್ಬೆರಳುಗಳಿಗೂ ಕೊರತೆಯಿರಲಿಲ್ಲ. ಸೆಂಗಳೆಯರು ಡಾಬು ಧರಿಸುತ್ತಿದ್ದರು.

ಹಳಬರು ಬಗಲಬಂಡಿ, ಕಸೆ ಅಂಗಿಗಳನ್ನು ತೊಡುತ್ತಿದ್ದರೂ ಯುವಕರು ಪಾಶ್ಚಾತ್ಯ ವೇಷ ಭೂಷಣಗಳಿಗೆ ಮರುಳಾದದ್ದನ್ನು ಗುರುತಿಸಬಹುದು. ಈ ವೈವಿಧ್ಯ ನೋಡುತ್ತಿದ್ದಂತೆ, ಮೈಸೂರು ದಸರಾ ಮೆರವಣಿಗೆಯಲ್ಲಿ ಪಾಲುಗೊಳ್ಳುತ್ತಿದ್ದ ಮಹಾರಾಜರ ಪರಿವಾರದವರ ಹಳೆಯ ಚಿತ್ರಗಳ ದೃಶ್ಯಗಳು ನೆನಪಾಗುತ್ತವೆ. ಮೊಣಕಾಲವರೆಗೆ ಬರುವ ಉದ್ದನ್ನ ಕೋಟಿಗೆ ಒಳಗಡೆ, ಚಿತ್ತಾರವುಳ್ಳ ಸಹಾಯಕ ಬಟ್ಟೆ ಕೊಟ್ಟು ಹೊಲೆಯಲಾಗಿದೆ. ಒಳಗೆ ತೊಟ್ಟ ಅಂಗಿ ಅಥವಾ ಶರ್ಟಿಗೆ ಗೀರು ಇಲ್ಲವೇ ವರ್ತುಲಗಳ ನಕ್ಷೆಯಿದೆ. ಕೆಲವರು ತೆಳು ಬಟ್ಟೆಯ ನಿಲುವಂಗಿ ಧರಿಸಿದ್ದಾರೆ. ಶಾಲು ಮೈತುಂಬ ಹೊದ್ದುಕೊಳ್ಳುವುದು, ಭುಜದಿಂದ ಇಳಿಬಿಡುವುದು, ಕೈಯಿಂದ ನೇತು ಬಿಡುವುದು. ಇಲ್ಲವೇ ಸೊಂಟಕ್ಕೆ ಬಿಗಿದುಕೊಳ್ಳುವುದು ತೀರ ಸಾಮಾನ್ಯ. ಧನಿಕರು ಬಳಸುತ್ತಿದ್ದ ಶಾಲುಗಳ ಮೇಲೆ ಹೂ ಬಳ್ಳಿಗಳ ಸುಂದರವಾದ ಕಸೂತಿ ಇದೆ. ಪಾಶ್ಚಾತ್ಯರ ಕೋಟಿನಡಿ ಪೌರ್ವಾತ್ಯರ ಧೋತರವನ್ನುಟ್ಟು ದ್ವಿಸಂಸ್ಕೃತಿಯ ಸಂಗಮ ಮಾಡಲಾಗಿದೆ. ಕೆಲವರು ಚಡ್ಡಿ ಅಥವಾ ಮುಕ್ಕಾಲು ಚೊಣ್ಣ ಧರಿಸಿದರೆ ಹಲವರು ಪ್ಯಾಂಟಲೂನನ್ನು ತಮ್ಮವನ್ನಾಗಿ ಮಾಡಿಕೊಂಡಿದ್ದಾರೆ. ಹೆಚ್ಚಿನವರು ಬರಿಗಾಲಿನಲ್ಲಿ ಇದ್ದರೂ ಕೆಲವರು ರಾಜಸ್ಥಾನಿಗಳಂತೆ ಮೊನಚಾದ ತುದಿಯ ಬೂಟುಗಳನ್ನು ಧರಿಸಿದ್ದಾರೆ. ಅಪರೂಪಕ್ಕೆ ಸೈನಿಕರು ಧರಿಸುವ ಭಾರೀ ಬೂಟುಗಳನ್ನು ಗುರುತಿಸಬಹುದಾಗಿದೆ.





ಅಷ್ಟಭುಜಾದೇವಿ



5. ಗ್ರಾಮೀಣ ಶೈಲಿ

ಹೊಸಾಡ, ಶರಾವತಿ ನದಿಯ ಬಲದಂಡೆಯಲ್ಲಿರುವ ಪುಟ್ಟಹಳ್ಳಿ. ಹಿಂದೆ ನಾವೆಯಿಂದ ಮಾತ್ರ ಅಲ್ಲಿ ತಲುಪಬಹುದಾಗಿತ್ತು. ಅಂತೆಯೇ ಮಳೆಗಾಲದಲ್ಲಿ, ಅದರಲ್ಲೂ ಅಬ್ಬರದ ಗಾಳಿ ಬೀಸುವಾಗ, ನದಿಗೆ ಮಹಾಪೂರ ಬಂದಾಗ, ಹೊರ ಜಗತ್ತಿನೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಸಾಧ್ಯ ಆಗುತ್ತಿರಲಿಲ್ಲ. ಈ ವಿರಾಮ, ಅವಕಾಶಗಳ ಲಾಭ ಪಡೆದು, ಅಲ್ಲಿಯ ನಾಯಕ ಕುಟುಂಬದವರು, ಕಲೆ, ನಾಟಕಗಳಲ್ಲಿಯ ಆಸಕ್ತಿಗಳನ್ನು ವಿಸ್ತರಿಸಿಕೊಂಡಿದ್ದಾರೆ. 1952ರಲ್ಲಿ ಖ್ಯಾತ ಕೊಂಕಣಿ ನಾಟಕಕಾರ ಹೊಸಾಡ ಬಾಬುಟಿ ನಾಯಕರ ವಿವಾಹಕ್ಕೆ ಲಕ್ಷ್ಮಿವೆಂಕಟೇಶ ದೇಗುಲಕ್ಕೆ ಹೋದಾಗ, ಅಲ್ಲಿರುವ ಭಿತ್ತಿಚಿತ್ರಗಳನ್ನು ಮೆಚ್ಚುವಂತಾಗಿತ್ತು. ವಿವಾಹ ಮಂಟಪವನ್ನು ನಾಯಕ ಕುಟುಂಬದವರೇ ಮೂರು ತಿಂಗಳು ಶ್ರಮಪಟ್ಟು ಅತ್ಯಂತ ಕಲಾತ್ಮಕವಾಗಿ ಜೋಡಿಸಿದ್ದರು. ಆಗಿನ್ನೂ ಛಾಯಾಗ್ರಹಣ ಅಷ್ಟೊಂದು ಪ್ರಚಾರದಲ್ಲಿ ಬಾರದ್ದರಿಂದ ಆ ಅಲಂಕರಣದ ಪ್ರತಿಯನ್ನು ಮುಂದಿನ ಪೀಳಿಗೆಗಾಗಿ ಉಳಿಸಿಕೊಳ್ಳಲಾಗಲಿಲ್ಲ, ಎಂದು ಇಂದಿಗೂ ಮರುಗುವಂತಾಗಿದೆ.

ಸುಮಾರು ನೂರ ಐವತ್ತು ವರ್ಷಗಳ ಹಿಂದೆಯೇ ನರಸಿಂಹ ನಾಯಕರಿಗೆ ಕಾವಿ ಚಿತ್ರಗಳಲ್ಲಿ ಆಸಕ್ತಿ ಮೂಡಿದ್ದರಿಂದ ಗೋವಾದ ಪರಿಣತರಿಂದ ಈ ಕಲೆ ಕಲಿತು ಕರಗತ ಮಾಡಿಕೊಂಡರು. ಆದರೆ ಅವರು ತಮ್ಮ ಗುರುಗಳನ್ನು ಅನುಕರಿಸುವ ಬದಲಾಗಿ ತಮ್ಮದೇ ಆದ ಗ್ರಾಮೀಣ ಶೈಲಿ ಬೆಳೆಸಿಕೊಂಡರು. ಅಂತೆಯೇ ಅವರು ರಚಿಸಿದ ಚಿತ್ರಗಳಲ್ಲಿ ಆ ಕುಟುಂಬದ ವಿಶಿಷ್ಟ ವೈಖರಿ ಇದೆ, ಸೊಗಡಿದೆ. ಮಣ್ಣಿನ ವಾಸನೆ ತುಂಬಿ ತುಳುಕುತ್ತದೆ. ಅವರು ಕಟ್ಟಾ ಕನ್ನಡ ಅಭಿಮಾನಿಗಳಾಗಿದ್ದರಿಂದ, ದೇವ ದೇವತೆಗಳ ಹೆಸರುಗಳನ್ನು ದೇವನಾಗರಿಯಲ್ಲಿ ನಮೂದಿಸುವ 'ನಾಗರಿಕ' ಪರಂಪರೆಯನ್ನು ಕೈಬಿಟ್ಟು ಕನ್ನಡವನ್ನು ಎತ್ತಿಹಿಡಿದಿದ್ದಾರೆ. ಊರ ಕೊಂಕಣಿಗರ ಅಧಿಪತ್ಯಕ್ಕೆ ಒಳಗಾದ ಮುಖ್ಯಪ್ರಾಣ, ಲಕ್ಷ್ಮೀವೆಂಕಟೇಶ ದೇವಾಲಯಗಳನ್ನು, ರಾಮಾಯಣ ಮಹಾಭಾರತ ಆಧಾರಿತ ಚಿತ್ರಗಳಿಂದ ತುಂಬಿ ತುಳುಕಿಸಿದರು. ರಾಮ ಕೃಷ್ಣ ಶ್ರೀನಿವಾಸ ನಾಯಕ ಮನೆಯಲ್ಲಿಯೂ ನರಸಿಂಹ ನಾಯಕರು ರಚಿಸಿದ ಚಿತ್ರಗಳಿವೆ.

ನೇರ, ಸರಳ, ಸುಲಭ ಶೈಲಿಯೇ ಈ ಚಿತ್ರಗಳ ವೈಶಿಷ್ಟ್ಯ. ಅಂಕಣದಲ್ಲಿ ಲಭ್ಯವಿದ್ದ ಸ್ಥಳವನ್ನೆಲ್ಲ ಅಪ್ರಸ್ತುತ ಆಕೃತಿಗಳಿಂದಲೂ ತುಂಬಿ ತುಳುಕಿಸುವುದು ಜನಪದ ಕಲಾಕಾರನ ಹೆಬ್ಬಯಕೆ. ಆದರೆ ಅವನ ರೇಖಾವಿನ್ಯಾಸವಾಗಲಿ, ಚಿತ್ರ ಸಂಯೋಜನೆಯಾಗಲಿ ಅಪಕ್ವವೆಂದು ಕರೆಯುವಂತಿಲ್ಲ. ದೇವ-ದೇವತೆಗಳು, ಸಮಕಾಲೀನ ವ್ಯಕ್ತಿಗಳ ವೇಷ



ಮತ್ಸ್ಯಾವತಾರ

ಭೂಷಣಗಳಲ್ಲಿ ಯಕ್ಷಗಾನ ಅಲಂಕಾರದ ವರ್ಚಸ್ಸು ವಿಪರೀತ. ಅನೇಕ ಚಿತ್ರಗಳಲ್ಲಿ ಬಯಲಾಟದವರು ಬಳಸುವ ಕೇದಿಗೆ ಮುಂಡಾಸ, ಕರ್ಣಕುಂಡಲ, ಮುಖವರ್ಣಿಕೆ, ಭುಜಕೀರ್ತಿ, ವೀರಗಾಸೆಗಳನ್ನು ಗುರುತಿಸಬಹುದು. ನರಸಿಂಹ ಅವತಾರವನ್ನು ಪ್ರತಿನಿಧಿಸುವ ಚಿತ್ರ ನೋಡುತ್ತಿದ್ದಂತೆ ಮದ್ದಳೆಯ ರುದ್ರನಾದ, ಜಾಗಟೆಯ ಝೇಂಕಾರ, ಚಂಡೆಯ ಆರ್ಭಟದೊಂದಿಗೆ ಭಾಗವತರ ತಾಳಹಾಕುತ್ತ ಹಾಡುವ ಏರುಧ್ವನಿಯ ಹಾಡುಗಾರಿಕೆ ಕೇಳಿಬರಲಾರಂಭಿಸುತ್ತದೆ. ಸ್ತ್ರೀಯರ ವೇಷ-ಭೂಷಣ ಒನಪು-ಒಯ್ಯಾರಗಳು ಯಕ್ಷಗಾನದ ಸ್ತ್ರೀಪಾತ್ರಗಳನ್ನು ನೆನಪಿಗೆ ತರುತ್ತವೆ. ಪುರುಷರೇ ಈ ಬಯಲಾಟಗಳಲ್ಲೆಲ್ಲ ಸ್ತ್ರೀ ಪಾತ್ರ ಧರಿಸುತ್ತಿದ್ದುದರಿಂದ ಜೋರಾದ ಒನಪು-ವೈಯ್ಯಾರದ ಆಡಂಬರಗಳು ಅನಿವಾರ್ಯವಾಗಿ ಬಿಡುತ್ತಿದ್ದವು. ನವಿಲುಗರಿಗಳ ಮುಂಡಾಸು, ಕರ್ಣಮಂಡಲ, ಮೊಣಕಾಲವರೆಗೆ ಬರುವ ಲಂಗದಂತಹ ಉಡುಪು ಧರಿಸಿದ ಶೂರ್ಪನಖಿಯ ಚಿತ್ರ ನೋಡುತ್ತಿದ್ದಂತೆ ಬಡಗು ತಿಟ್ಟಿನ ಆಟದವರ ಕೃತಕ ಸ್ತನದೊಂದಿಗೆ ಇಂಥ ವಿಚಿತ್ರ ವೇಷ ಧರಿಸಿದ ಆ ಪಾತ್ರವೇ ಕಣ್ಣಿಗೆ ಕಟ್ಟಿದಂತೆ ಆಗುತ್ತದೆ.

ದಶಾವತಾರಗಳನ್ನು ಮೂಡಿಸುವಾಗ ಯಾವ ಆಡಂಬರಕ್ಕೂ ಹೋಗದೇ ನೇರ ವಸ್ತು ಚಿತ್ರಣ ಮಾಡಲಾಗಿದೆ. ಮತ್ಸ್ಯಾವತಾರವನ್ನು ರೂಪಿಸಲು ಮೇಲಿನ ಅರೆಭಾಗವನ್ನು ವಿಷ್ಣುವಿನಂತೆ ಚಿತ್ರಿಸಿ ಉಳಿದರ್ಧ ಭಾಗವನ್ನು ಮೀನಿನ ಮೈಗೆ ಮೀಸಲಿಡಲಾಗಿದೆ. ಸುತ್ತಮುತ್ತ ನೀರನ್ನಾಗಲಿ, ಇನ್ನಿತರ ಜಲಚರಗಳನ್ನಾಗಲಿ ಚಿತ್ರಿಸಲು ತಲೆಕೆಡಿಸಿಕೊಂಡೇ ಇಲ್ಲ. ಕುರ್ಮಾವತಾರದಲ್ಲಿಯೂ ಇದನ್ನು ಗಮನಿಸಬಹುದು. ಚತುರ್ಭುಜ ವಿಷ್ಣುವಿಗೆ ಕಟಿಸ್ಥಾನದ ಕೆಳಗೆ ಆಮೆಯ ಭಾಗವನ್ನು ಜೋಡಿಸಲಾಗಿದೆ. ಮೋಜಿನ ಮಾತೆಂದರೆ, ಅದರ ಚತುಷ್ಪಾದಗಳನ್ನು ಮಾನವನ ಕೈಕಾಲುಗಳಂತೆ ರೂಪಿಸಲಾಗಿದೆ. ಆಗಿನ್ನೂ ಮೋಟಾರು ಕಾರುಗಳ ಆಗಮನವಾಗಿರದ್ದರಿಂದ ಗರುಡನನ್ನೆ ವಾಹನವಾಗಿ ವಿಷ್ಣುವು ಬಳಸಬೇಕಾಗಿತ್ತು. ಈ ಗರುಡ, ವೀರಗಚ್ಚೆಯ ಧೋತ್ರ ಉಡುವ ಬದಲಾಗಿ ತೊಡೆಗೆ ಅಂಟಿಕೊಳ್ಳುವ ಚಡ್ಡಿ ಧರಿಸಿದ್ದಾನೆ. ಬಲಗೈಯಲ್ಲಿ ವಿಷಕಾರಿ ಸರ್ಪವನ್ನು ಹಿಸುಕಿ ಹಿಡಿದಿದ್ದಾನೆ. ಎಡಭುಜದ ಮೇಲೆ ಹಕ್ಕಿಯೊಂದಕ್ಕೆ ಆಶ್ರಯ ಕೊಟ್ಟಿದ್ದಾನೆ. ಇನ್ನೊಂದು ಅಂಕಣದಲ್ಲಿ ಪ್ರಭುವನ್ನು ಎಡಭುಜದ ಮೇಲೆ ಹೊತ್ತು ಗರುಡನು ಭೂಮಿಯಲ್ಲಿ ಇಳಿಯುತ್ತಿದ್ದಾನೆ. ವಿಷ್ಣುವಿಗೆ ವರಾಹದ ಮುಖವನ್ನು ಹೊಂದಿಸಿದರೆ, ವರಾಹಾವತಾರ ಮುಗಿದಂತೆ. ಪರಮಾತ್ಮನು ಇಷ್ಟೊಂದು ಸುಲಭದಲ್ಲಿ ಅವತಾರಗಳನ್ನು ತಾಳುವಂತಿದ್ದರೆ, ಅದೆಷ್ಟು ದುಷ್ಟ ಜನರನ್ನೆಲ್ಲ ಸಂಹರಿಸಬಹುದಾಗಿತ್ತು ಎಂದು ಅನಿಸದೇ ಇರದು!

ಕಾವಿ ಜಾನಪದ ಶೈಲಿ, ಸಾಂಕೇತಿಕವಾಗಿಯೇ ಹೊರತು ನೈಜತೆಯ ಚಿತ್ರಣಕ್ಕಾಗಿ ಬಳಿಸಿದಂತೆ ಭಾಸವಾಗುವುದಿಲ್ಲ. ಮುರಳೀಧರನ ಅಂಕಣದಲ್ಲಿ ಶ್ರೀಕೃಷ್ಣನು ಕೊಳಲು ನುಡಿಸುವಾಗ ಆಲಿಸಲು ಗೋವುಗಳೆಲ್ಲ ಧಾವಿಸಿ ಬರುವಂತೆ ಭಾವವನ್ನು ಮೂಡಿಸುವುದು ಮುಖ್ಯ. ಆದರೆ ಇಲ್ಲಿ ಕಲಾವಿಮರ್ಶಕನಾಗಿ ಪ್ರತಿಯೊಂದು ರೇಖೆಯನ್ನು ವಿಭಜಿಸಿ ನೋಡಲು ಯತ್ನಿಸಿದಾಗ, ಇದೆಂತಹ ಅಪಕ್ವ ಕೃತಿ, ಎಂದು ಅನಿಸದೇ ಇರದು. ಸಾಮಾನ್ಯವಾಗಿ ಗೋಪಾಲಕೃಷ್ಣನನ್ನು ಗೋಮಾತೆಗೆ ಆತುಕೊಂಡು ನಿಂತಂತೆ ಚಿತ್ರಿಸುವುದು ರೂಢಿ. ಇಲ್ಲಿಯ ಅಂಕಣದಲ್ಲಿ ಗೋವನ್ನು ಮೆಟ್ಟಿ ನಿಂತಂತೆ ಭಾಸವಾಗುತ್ತದೆ. ಕಾಲಿಯಾ



ಹನುಮಾನ್

ಮರ್ದನನ ಚಿತ್ರದಲ್ಲಿ ಸಾಹಸಿ ಕೃಷ್ಣನು ಛಾಯಾಗ್ರಹಣಕ್ಕೆ ಭಂಗಿ ಕೊಟ್ಟು ನಿಂತಂತೆ, ಅವನ ಶೌರ್ಯಕ್ಕೆ ಮೆಚ್ಚಿ ನಾಗಿಣಿಯೋರ್ವಳು ಭಯಭಕ್ತಿಯಿಂದ ನಮಸ್ಕರಿಸುವಂತೆ ಚಿತ್ರಿಸಲಾಗಿದೆ. ಸ್ಥಳಾವಕಾಶ ಇರುವಲ್ಲೆಲ್ಲ ಕಾಲಿಯನ ಮಕ್ಕಳು, ಮರಿಮಕ್ಕಳು ಹರಿದಾಡುತ್ತಿರುವಂತೆ ತೋರಿಸಲಾಗಿದೆ. ಬಾಲಕೃಷ್ಣನ ಎಳೆತನ ಮನಮುಟ್ಟುವಂತೆ ಚಿತ್ರಿಸುವುದಕ್ಕಾಗಿ ಅತ್ಯಂತ ಕಡಿಮೆ ಬಟ್ಟೆ-ಬರೆಗಳನ್ನು ತೊಡಿಸಿದರೂ ಪ್ರೌಢನೆನಿಸುವುದನ್ನು ಮರೆಮಾಚಲಾಗಲಿಲ್ಲ ಚಿತ್ರಕಾರನಿಂದ! ಕಿರಾತಾರ್ಜುನೀಯ ಕಾಳಗದ ಚಿತ್ರ ನೋಡುತ್ತಿದ್ದಂತೆ ಈ ಸನ್ನಿವೇಶ ಪ್ರತಿನಿಧಿಸುವ ಯಕ್ಷಗಾನ ಪ್ರಸಂಗ ಕಣ್ಣಿಗೆ ಕಟ್ಟಿದಂತಾಗುತ್ತದೆ. ಅರ್ಜುನನು ವೈರಿಯನ್ನು ಭೇದಿಸಲಾಗದ ಬಾಣ-ಬಿಲ್ಲುಗಳಿಂದ ಸುಸಜ್ಜಿತವಾಗಿ ನಿಂತರೆ, ಕಿರಾತನು ಯಾರ ರುಂಡವನ್ನೂ ಛೇದಿಸಲಾಗದ ಖಡ್ಗವನ್ನು ಎತ್ತರಿಸಿ ನಿಂತಿದ್ದಾನೆ. ಯಕ್ಷಗಾನ ವೇಷದವರು, ಬಟ್ಟೆ ಸುತ್ತಿ ಮಾಡಿದ ಹಗುರಾದ ಬಿಲ್ಲು ಮತ್ತು ಬೆಗಡಿಸುತ್ತಿದ ಹಲಗೆಯ ಖಡ್ಗವನ್ನು ಬಳಸುತ್ತಾರೆಂದು ಸ್ಮರಿಸಿಕೊಳ್ಳಬಹುದು. ತಾಳ-ಮದ್ದಳೆಗಳು ಭೋರ್ಗರೆಯುವಾಗ, ಈ ಪಾತ್ರಧಾರಿಗಳು ಧ್ವನಿಯನ್ನು ಎತ್ತರಿಸಿ ನಿಂತಲ್ಲಿಯೇ ತಮ್ಮ ಆಯುಧಗಳನ್ನು ಪ್ರಯೋಗಿಸುತ್ತಿರುವಂತೆ ನಟಿಸುವ ವಿಧಾನ ಈ ಚಿತ್ರದಲ್ಲಿಯೂ ಗುರುತಿಸಬಹುದಾಗಿದೆ. ಕೌರವ-ಪಾಂಡವರ ಯುದ್ಧದ ದೃಶ್ಯದಲ್ಲಿ ರಥವನ್ನು ಸಾಂಕೇತಿಕವಾಗಿ ಆಟಿಕೆಯಂತೆ ಚಿತ್ರಿಸಿ, ನಾಗಾಲೋಟ ಹಾಕಿ ಓಡುವ ಕುದುರೆ, ಕತ್ತೆಯಂತೆ ಭಾಸವಾಗುತ್ತದೆ.

ರಾಮಾಯಣದ ದೃಶ್ಯಗಳನ್ನು ರೂಪಿಸುವಾಗ ಇದೇ ಶೈಲಿಯನ್ನು ಬಳಸಲಾಗಿದೆ. ಹನುಮಾನನ ಭುಜವನ್ನೇ ವಾಹನವಾಗಿ ಬಳಸಿದ ಶ್ರೀರಾಮಚಂದ್ರನು ಯಕ್ಷಗಾನ ಮೇಳದವರ ಕಟ್ಟುವೇಷದವರು ಧರಿಸುವ ಕಿರೀಟವನ್ನು ಧರಿಸಿದ್ದಾನೆ. ಜಾನಕೀವಲ್ಲಭನ ಭಕ್ತರಲ್ಲಿ ಒಬ್ಬನಾದ ವಿಜಯನು ಕಾಲಾಳುವಿನಂತೆ ಬಿಲ್ಲಿಗೆ ಬಾಣವೇರಿಸಿ ವೈರಿಯನ್ನು ಎದುರಿಸಲು ಸಿದ್ಧನಾಗಿಯೇ ಇದ್ದಾನೆ. ಹನುಮಂತನು ಲಂಕೆಗೆ ಹಾರಿ ಹೋಗಿ ಸೀತೆಯ ದರ್ಶನ ಪಡೆಯುವುದಕ್ಕಾಗಿ ರಾಕ್ಷಸರನ್ನು ಎದುರು ಹಾಕಿಕೊಳ್ಳುವವರನ್ನು ಅಂಕಣವೊಂದರಲ್ಲಿ ರೂಪಿಸಿದರೆ ಇನ್ನೊಂದರಲ್ಲಿ ರಾವಣನು ಸುಸಜ್ಜಿತನಾಗಿ ರಾಮನೊಡನೆ ಯುದ್ಧಕ್ಕೆ ಹೊರಟಿದ್ದಾನೆ. ಪರಶುರಾಮನು ಕೊಡಲಿಯೊಂದಿಗೆ ಸಹಸ್ರಾರ್ಜುನನನ್ನು ಕಾದಾಟಕ್ಕೆ ಆಮಂತ್ರಿಸುವುದನ್ನು ಒಂದು ಅಂಕಣದಲ್ಲಿ ಕಾಣಿಸಿದರೆ, ಇನ್ನೊಂದರಲ್ಲಿ ವಾಮನನು ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟುವ ಯತ್ನದಲ್ಲಿ ಇದ್ದುದನ್ನು ಚಿತ್ರಿಸಲಾಗಿದೆ. ಭಸ್ಮಾಸುರ-ಮೋಹಿನಿ ಅಂಕಣ, ಅತ್ಯಂತ ಆಕರ್ಷಕವಾಗಿದೆ. ಹಿನ್ನೆಲೆಯಲ್ಲಿ ವೃಕ್ಷ (ವಟವೃಕ್ಷ?) ಒಂದನ್ನು ಚಿತ್ರಿಸಲಾಗಿದೆ. ಅದರಲ್ಲಿ ಅವಿತುಕೊಂಡ ಹಕ್ಕಿಯೊಂದು ಚುಂಚಿನಲ್ಲಿ ಎಲೆಯೊಂದನ್ನು ಕಚ್ಚಿಕೊಂಡು, ಪ್ರೇಯಸಿಯಲ್ಲಿ ಪ್ರೇಮಭಿಕ್ಷೆಯನ್ನು ಬೇಡುತ್ತಿದೆ. ಬಾನಿನಲ್ಲಿದ್ದ ಚಂದ್ರಮ ಎಲ್ಲೆಡೆಯಲ್ಲಿ ಬೆಳದಿಂಗಳು ಚೆಲ್ಲಿದ್ದಾನೆ. ಸಂಪೂರ್ಣವಾಗಿ ಯಕ್ಷಗಾನ ಪೋಷಾಕಿನಲ್ಲಿದ್ದ ಭಸ್ಮಾಸುರನು ಲ್ಯಾಟಿನ್ ಅಮೇರಿಕನ್‌ರ ಹ್ಯಾಟನ್ನು ಧರಿಸಿದ್ದಾನೆ. ಮೋಹನಿಯು ಕರಾವಳಿಯ ಕಲಾವಂತ ಮಹಿಳೆಯಂತೆ ಅಲಂಕರಿಸಿಕೊಂಡು ಕುಣಿತದಲ್ಲಿ ಮೈಮರೆತಿದ್ದಾಳೆ. ಮೊದಲ ನೋಟಕ್ಕೆ ಮೋಹಿನಿ-ಭಸ್ಮಾಸುರ ಯಕ್ಷಗಾನದ ರಸಿಕ ಸನ್ನಿವೇಶವನ್ನೇ ಚಿತ್ರಿಸಲಾಗಿದೆಯೇ! ಎಂದು ಭ್ರಮಿಸುವಷ್ಟು ಚಿತ್ರ ನೈಜವಾಗಿದೆ.



ಬಂದೂಕು ವೀರ





ಜೋಡಿ ಗಿಳಿಗಳು, ನವಿಲು

ಈ ದೇವಾಲಯದಲ್ಲಿ ಚಿತ್ರಿತವಾದ ಕೆಲವೇ ಸಮಕಾಲೀನ ವ್ಯಕ್ತಿಗಳು ಯಕ್ಷಗಾನದ ಕೋಡಂಗಿ, ಸರ್ಕಸ್ ಕಂಪನಿಯ ಹಾಸ್ಯಗಾರರನ್ನು ನೆನಪಿಗೆ ತರುತ್ತಾರೆ. ಭರ್ಜರಿ ಕುಸುರು-ಕಲಾಪತ್ತಿನ ನಿಲುವಂಗಿ ತೊಟ್ಟ ಸಿಪಾಯಿ ಭವ್ಯ ರುಮಾಲಿನಿಂದ ಶಿರವನ್ನು ಅಲಂಕರಿಸಿಕೊಂಡು, ಗೀರುಳ್ಳ ಚಣ್ಣ ಧರಿಸಿ ಚೂಪಾದ ಬೂಟು ಮೆಟ್ಟಿದ್ದಾನೆ. ಬಲಗೈಯಲ್ಲಿ ಖಡ್ಗ ಹಿಡಿದರೆ, ಎಡಗೈಯಲ್ಲಿ 'ಬೆಯೊನೆಟ್' ಸಿಕ್ಕಿಸಿದ ಬ್ರಿಟಿಷರ ಕಾಲದ ಬಂದೂಕು ಇಳಿಬಿಟ್ಟಿದ್ದಾನೆ. ಇನ್ನೊಬ್ಬನು ಭಾರತೀಯರಂತೆ ಮೀಸೆ ಬೆಳೆಸಿ ಕಿವಿಗೆ ಉಂಗುರ ಧರಿಸಿದರೂ ಲಂಡನ್ ಪೋಲೀಸರ ಶಿರೋಲಂಕಾರ ಇಟ್ಟುಕೊಂಡಿದ್ದಾನೆ. ಬ್ರಿಟಿಷ್ ಆಳ್ವಿಕೆಯ ಸೋಂಕು ತಗಲದ ಭಾರತೀಯ ಸೈನಿಕನು, ಭಾರೀ ದೊಣ್ಣೆಯೊಂದಿಗೆ ವೈರಿಯನ್ನು ಎದುರುನೋಡುತ್ತಿದ್ದಂತಿದೆ. ಇಂಥ ಜಾನಪದ ಶೈಲಿಯು ಕಾವಿಚಿತ್ರಗಳಲ್ಲಿ ಕಂಡು ಬರುವುದು ತೀರ ಅಪರೂಪ. ಬರ್ಗಿಯ 'ಘೋಳಿ ಬೀರ' ಗುಡಿಯಲ್ಲಿ ಸಾಲಂಕೃತ ವೀರನು ತನ್ನನ್ನು ಹೊರಲಾಗದ ಕುದುರೆಮರಿಯ ಮೇಲೆ ಆರೂಢನಾಗಿರುವುದನ್ನು ಚಿತ್ರಿಸಲಾಗಿದೆ. "ಸಣ್ಣ ಹೊಸಬ" ಗುಡಿಯಲ್ಲಿಯೂ ಇಂತಹದೇ ಚಿತ್ರವಿದೆ. ಆದರೆ ಇಲ್ಲಿಯ ಕುದುರೆ ತಿಂದುಂಡು ದಷ್ಟ-ಪುಷ್ಟವಾಗಿದ್ದರಿಂದ ವೀರನಿಗೆ ವೀರ ಸ್ವರ್ಗ ಸೇರಲು ಒಂದಿಷ್ಟೂ ತೊಂದರೆಯಾದಂತಿಲ್ಲ!



6. ಪಶು-ಪಕ್ಷಿಗಳು

ಶಿಲ್ಪಿ, ಚಿತ್ರಕಾರರಂತೆ, ಕಾವಿ-ಕಲಾಕಾರರಿಗೂ ಪಶು-ಪಕ್ಷಿಗಳ ಅಂಗರಚನೆ, ಚಲನವಲನೆ, ನಡಾವಳಿಕೆಗಳ ಬಗ್ಗೆ ಒಳ್ಳೇ ತರಬೇತಿ ಕೊಡುತ್ತಿದ್ದಿರಬೇಕು. ಅಂತೆಯೇ ಅವಕಾಶ ಸಿಕ್ಕಲ್ಲೆಲ್ಲ ಅವುಗಳನ್ನು ಧಾರಾಳವಾಗಿ ಚಿತ್ರಿಸಲಾಗಿದೆ. ಅವಶ್ಯಕತೆ ಇಲ್ಲದಿದ್ದರೂ ಕಲಾಕಾರನು ಕೆಲವೆಡೆಗಳಲ್ಲಿ ಪ್ರಾಣಿಗಳ ಕುರಿತಾದ ತನ್ನ ತಿಳಿವನ್ನು ಪ್ರದರ್ಶಿಸಲೆಂದೇ ಕೆಲವು ಅಂಕಣಗಳನ್ನು ಅವುಗಳಿಂದ ತುಂಬಿತುಳುಕಿಸಿದ್ದಾನೆ, ಎಂಬ ಭಾವನೆ ಬರದಿರದು. ಮಧ್ಯಪ್ರಾಚ್ಯದಿಂದ ಸಹಸ್ರಾರು ವರ್ಷಗಳ ಆಚೆಯೇ ಭಾರತಕ್ಕೆ ಆಗಮಿಸಿ, ಇಲ್ಲಿಯ ದೇವಾಲಯಗಳ ಮುಖ್ಯ ಪ್ರತಿಮೆಯಾಗಿ ಪರಿಣಮಿಸಿದ ಸಿಂಹಲಲಾಟದಿಂದ ಹೆಚ್ಚಿನ ಅಂಕಣಗಳ ಶಿಖರ ಸ್ಥಾನಗಳನ್ನು ಅಲಂಕರಿಸಲಾಗಿದೆ. ಚೀನೀ ಶೈಲಿಯಲ್ಲಿ ರಚಿತವಾದ ಮಿಥಕ ಹಕ್ಕಿಯ ಚಿತ್ರವೂ ಅಲ್ಲೊಂದು, ಇಲ್ಲೊಂದು ಕಣ್ಣಿಗೆ ಬೀಳುತ್ತವೆ. ಬೆನ್ನೆಲವು ಇಲ್ಲದ ಪ್ರಾಣಿಗಳನ್ನು ಕಲಾಕಾರನು ಅಲಕ್ಷಿಸದೇ ಇದ್ದಿರುವುದೂ ಗಮನಾರ್ಹ. ಹೊನ್ನಾವರದ ನಂದಿಯ ಅಂಕಣದಲ್ಲಿ ಚೇಳನ್ನು ಚಿತ್ರಿಸಲಾಗಿದೆ. ಅದನ್ನು ಕಲಾತ್ಮಕವಾಗಿ ನೋಡಬಹುದೇ ಹೊರತು ವೈಜ್ಞಾನಿಕ, ಚಿಕಿತ್ಸಕ ಬುದ್ಧಿಯಿಂದಲ್ಲ. ಏಕೆಂದರೆ ಚೇಳುಗಳೆಲ್ಲ ಅಷ್ಟಪಾದಿಗಳು. ಆದರೆ ಚಿತ್ರದಲ್ಲಿ ಅದನ್ನು ಜಿರಳೆಯಂತೆ ಷಟ್‌ಪಾದಿಗೆ ಪರಿವರ್ತಿಸಲಾಗಿದೆ. ಮುರಳೀಧರನ ಅಂಕಣದಲ್ಲಿ ಹಾರುತ್ತಿರುವ ಜೇನ್ನೊಣವನ್ನು ಕಾಣಬಹುದಾಗಿದೆ.

ಧಾರ್ಮಿಕ ಸನ್ನಿವೇಶಗಳನ್ನು ಚಿತ್ರಿಸುವಾಗಲೂ ಕಲಾಕಾರನು, ಪ್ರಾಣಿಗಳ ಬಗ್ಗೆ ತನಗಿರುವ ಪ್ರೀತಿ, ಮಮತೆ, ಅರಿವುಗಳನ್ನು ತೋಡಿಕೊಂಡಿದ್ದಾನೆ. ಮತ್ಸ್ಯ ಮತ್ತು ಕೂರ್ಮಾವತಾರಗಳ ಅಂಕಣಗಳಲ್ಲಿ ಜಲಪ್ರಾಣಿಗಳನ್ನು ಯಥಾವತ್ತಾಗಿ ಸೇರಿಸಲಾಗಿದೆ. ಸೊಂಡಿ ಇರುವ ಮೀನುಗಳನ್ನು ಶಲಕಗಳಿರುವವುಗಳಿಂದ ಬೇರ್ಪಡಿಸಲಾಗಿದೆ. ನೀರಾಮೆಗಳನ್ನು ಮರೆತಿಲ್ಲ. ಹೊನ್ನಾವರದ ಗಜೇಂದ್ರ ಮೋಕ್ಷ ಅಂಕಣದಲ್ಲಿಯೂ ಜಲಚರಗಳನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಗೋವರ್ಧನ ಗಿರಿಧಾರಿ ಚಿತ್ರಗಳಲ್ಲಿ ಭೂಪ್ರಾಣಿಗಳಿಗೆ ಆದ್ಯತೆ ಕೊಡಲಾಗಿದೆ. ತನ್ನ ಗೋವು, ಗೋಪಿ, ಗೋಪಾಲಕರನ್ನು, ಜಡಿಮಳೆಯಿಂದ ಸಂರಕ್ಷಿಸುವುದಕ್ಕಾಗಿ ಶ್ರೀಕೃಷ್ಣನು, ಕಿರುಬೆರಳಿನಿಂದ ಗಿರಿಯನ್ನೇ ಎತ್ತಿ ಹಿಡಿದಾಗ, ಆ ಪರ್ವತಾವಳಿಯಲ್ಲಿ ಯಾವ ಪ್ರಾಣಿಗಳು ಬೀಡು ಬಿಟ್ಟಿದ್ದವು, ಎಂದು ಕಾಣಿಸಲಾಗಿದೆ. ಗರಿ ಬಿಚ್ಚಿ ಕುಣಿಯುವ ನವಿಲು, ಹಣ್ಣಿಗಾಗಿ ಆಸೆ ಪಡುವ ಗಿಳಿ, ಪ್ರೇಮಿಯನ್ನು ಕೂಗಿ ಕರೆಯುವ ಪಾರಿವಾಳ, ಕಾಳುಗಳನ್ನು ಕದಿಯಲು ಹೊಂಚು ಹಾಕುತ್ತಿರುವ ಕಾಗೆ, ಆಹಾರದೊಂದಿಗೆ ಬಿಲದಲ್ಲಿ ಸೇರಲು ತವಕದಲ್ಲಿರುವ ಇಲಿ, ಮರದಿಂದ ಮರಕ್ಕೆ ಜಿಗಿಯುವ ಇಣಚಿ, ಕಳ್ಳ ಹೆಜ್ಜೆಯಿಂದ ನಡೆಯುತ್ತಿರುವ ನರಿ,



ಕಿನ್ನರ, ಚಿಗರೆ

ಸಿಗದ ಆಹಾರಕ್ಕೆ ಆಸೆಪಟ್ಟು ದ್ವಿಪಾದಿಯಾಗಿ ನಿಂತ ಮೊಲಗಳೆಲ್ಲವನ್ನು ಗುರುತಿಸಬಹುದು. ಕುಮಟೆಯ ಚಿತ್ರದಲ್ಲಿ ಹುಲಿರಾಯನು ಚಿಗರೆ ಮರಿಯ ಮೇಲೆ ಭೋಜನ ನಡೆಸಿದರೆ, ಹೆಬ್ಬಾವೊಂದು ತಾಯಿ ಚಿಗರೆಯ ಬೇಟೆಯಾಡುವುದು ಹೇಗೆ? ಎಂದು ಹೊಂಚು ಹಾಕುತ್ತಿದೆ. ಮದವೇರಿದ ಸಲಗ ಹೆಣ್ಣಾನೆಗೆ ಕರೆ ನೀಡುತ್ತದೆ.

ದೇವ-ದೇವತೆಗಳ ಸಹಜೀವಿಯಾಗಿಯೂ ಪಶು-ಪಕ್ಷಿಗಳಿಗೆ ಆದ್ಯತೆ ನೀಡಲಾಗಿದೆ. ಕುಮಟೆಯ ಆದಿನಾರಾಯಣನ ಅಂಕಣದಲ್ಲಿ ವಿಷ್ಣುಪರಮಾತ್ಮನು ಐದು ಹೆಡೆಗಳ ಸರ್ಪಾಸನದಲ್ಲಿ ಆರೂಢನಾಗಿ ಲಕ್ಷ್ಮಿಯ ದೂರುಗಳನ್ನು ಆಲಿಸುತ್ತಿರುವಾಗ, ಪ್ರತಿಯೊಂದು ಹೆಡೆಯೂ ಅಚ್ಚರಿಯಿಂದ ಕಣ್ಣರಳಿಸಿ ಕೇಳಿಸಿಕೊಳ್ಳುತ್ತಿರುವಂತೆ ಚಿತ್ರಿಸಲಾಗಿದೆ. ಹೊನ್ನಾವರದ ಅನಂತಶಯನ ಅಂಕಣದಲ್ಲಿ ಶೇಷಶಾಯಿಯಾಗಿ ವಿರಮಿಸುತ್ತಿರುವ ವಿಷ್ಣುವಿನ ಪಾದಕಮಲಗಳನ್ನು ಈರ್ವರು ಹರೆಯದ ನಾಗಕನ್ನಿಕೆಯರು ಮೃದುವಾಗಿ ಅದುಮುತ್ತಿರುವಾಗ ಶೇಷನ ಸಪ್ತ ಹೆಡೆಗಳು ಕುತೂಹಲದಿಂದ ವೀಕ್ಷಿಸುತ್ತಿರುವಂತೆ ಭಾಸವಾಗುತ್ತದೆ. ಮಾವಿನಕುರ್ವೆಯ ಫಣಿಶಾಯಿ ವಿಷ್ಣು, ಪತ್ನಿಗೆ ಹೂಗೊಂಚಲು ಕೊಡುತ್ತಿರುವುದನ್ನು ಕಂಡ ಐದು ಹೆಡೆಯ ಸರ್ಪ, ತಾನು ಮುಂದಿನ ಜನ್ಮದಲ್ಲಿಯಾದರೂ ದೇವರಾಗಿ ಹುಟ್ಟಿಬರಬೇಕೆಂದು ನಿರ್ಧರಿಸಿದಂತಿದೆ.

ಅಪರೂಪಕ್ಕೆ ನಾಗಬಂಧುಗಳು ಕಾಣಸಿಗುತ್ತವೆ. ಹಳದಿಪುರದಲ್ಲಿ ಜಾಮಿತಿಯ ವರ್ತುಲದಲ್ಲಿ ನಾಲ್ಕು ಗಂಟುಗಳಿರುವ ಸರ್ಪದ ಐದು ಹೆಡೆಗಳನ್ನು ನಟ್ಟನಡುವೆ ಚಿತ್ರಿಸಲಾಗಿದೆ. ಹೆಗಡೆಯಲ್ಲಿ ಎರಡೇ ಗಂಟುಗಳಿರುವ ಬಾಲಿಶ ನಾಗಬಂಧದ ಚಿತ್ರವಿದೆ. ಶ್ರೀಕೃಷ್ಣನು ಕೊಂದ ಕಾಳಿಂಗನನ್ನು ವಿವಿಧ ರೀತಿಯಲ್ಲಿ ಕಾಣಬಹುದಾಗಿದೆ. ಹೊಸಾಡದಲ್ಲಿ ಪಂಚಶೀರ್ಷ ಕಾಳಿಯನ ತಲೆಯ ಮೇಲೆ ಬಲಗಾಲಿಟ್ಟು ಎಡಗೈಯಲ್ಲಿ ಅದರ ಬಾಲವಿಡಿದು, ಬಲಗೈಯನ್ನು ಮೇಲಕ್ಕೆತ್ತಿ ಕೃಷ್ಣನು ತನ್ನ ಯಶಸ್ಸು ಸಾರುವಂತೆ ಚಿತ್ರಿಸಲಾಗಿದೆ. ಸನಿಹದಲ್ಲಿಯೇ ನಾಗಕನ್ನಿಕೆ, ಭಯ-ಭಕ್ತಿಗಳಿಂದ ಕೈಜೋಡಿಸಿ ನಿಂತಿದ್ದಾಳೆ. ಬೀಳಗಿಯಲ್ಲಿ ಕಾಳಿಯ-ಮರ್ದನ ನಡೆದಾಗ, ಗುರುತಿಸಲಾಗದ ಹಕ್ಕಿಯೊಂದು ಸರ್ಪದ ಸನಿಹದಲ್ಲಿ ಕುಳಿತು ಶೋಕ ವ್ಯಕ್ತಪಡಿಸುತ್ತಿರುವಂತಿದೆ. ಹೊನ್ನಾವರದ ಅಂಕಣದಲ್ಲಿ ಕಾಳಿಯನೊಡನೆ ಸೆಣಸಾಟ ಇದೀಗ ಪ್ರಾರಂಭವಾದಂತಿದೆ. ನಾಚೋಲಿಯಲ್ಲಿ ಜೋಡಿ ನಾಗರ, ಸನಿಹದಲ್ಲಿದ್ದ ಜಾಮಿತಿ ವೃಕ್ಷಕ್ಕೆ ಸರ್ಪಕಾವಲು ಇಟ್ಟಂತೆ ಬಿಂಬಿಸಲಾಗಿದೆ.

ಕುಮಟೆಯ ಗಣೇಶನ ಅಂಕಣದಲ್ಲಿ ಚಿತ್ರಿತನಾದ ಮೂಷಕನು ತನ್ನ ಯಜಮಾನನಿಗೆ ಅರ್ಪಿಸಿದ ಕಾಯ್‌ಕಡಬು, ಮೋದಕ ಪಂಚಕಜ್ಜಾಯಗಳ ನೈವೇದ್ಯದಲ್ಲಿ ಹಿರಿಯ ಪಾಲನ್ನು ತನ್ನ ಉದರದಲ್ಲಿ ಸೇರಿಸಿದ್ದರಿಂದಲೋ ಏನೋ, ಲೀಲಾಜಾಲವಾಗಿ ವಿಘ್ನೇಶ್ವರನನ್ನು ಹೊತ್ತಂತೆ ಇದೆ! ಹೊನ್ನಾವರದ ಸಿದ್ಧಿವಿನಾಯಕನ ಚಿತ್ರದಲ್ಲಿ ತೀರ ಬಡಕಲಾದ ಇಲಿ, ಡೊಣಪ ಗಣೇಶನನ್ನು ಹೊರಲಾರದೇ, ಅಯ್ಯೋ ಸತ್ತೆ! ಎಂದು ಮೊರೆ ಇಡುವಂತಿದೆ. ಕುಮಟೆಯ ವೀಣೆ ನುಡಿಸುತ್ತಿರುವ ಸರಸ್ವತಿಯು, ಸವಾರಿ ಮಾಡುತ್ತಿರುವ ಹಂಸವು ಕಲಾತ್ಮಕವಾಗಿಯೂ ದಷ್ಟ, ಪುಷ್ಟವಾಗಿಯೂ ಚಿತ್ರಿತವಾಗಿದೆ. ಈ ಹಕ್ಕಿಯನ್ನು ನೋಡುತ್ತಿದ್ದಂತೆ ಅಮೇರಿಕನ್ನರು ಕ್ರಿಸ್‌ಮಸ್ ಹಬ್ಬಕ್ಕಾಗಿಯೇ ಕೊಬ್ಬಿಸುವ ಆಹಾರದ ಮೇಲೆಯೇ ಪೋಷಿಸುವ ಟರ್ಕಿ ಕೋಳಿ ಕಣ್ಣಿಗೆ ಕಟ್ಟಿದಂತಾಗುತ್ತದೆ.



ಚೇಳು, ಗಿಳಿ, ಕಾಲ್ಪನಿಕ ಹಕ್ಕಿ

ಶಿರಾಲಿಯ ಸರಸ್ವತಿ, ನವಿಲು ಮೇಲೆ ಕಾಲು ನೀಡಿ, ವೀಣೆ ನುಡಿಸುವುದರಲ್ಲಿ ಮೈಮರೆತಿದ್ದಾಳೆ.

ಕಾವಿ ಕಲಾಕಾರರಿಗೆಲ್ಲ ಗಿಳಿ, ಅತ್ಯಂತ ಪ್ರೀತಿಯ ಹಕ್ಕಿ ಎಂದು ಕಾಣುತ್ತದೆ. ಅಂತೆಯೇ ಅವಕಾಶ ಸಿಕ್ಕಲ್ಲೆಲ್ಲ ಗಿಳಿಗಳಿಗೆ ಅಗ್ರಸ್ಥಾನ ಕೊಡಲಾಗಿದೆ. ಹೊನ್ನಾವರದಲ್ಲಿ ಶ್ರೀಕೃಷ್ಣನು ನುಡಿಸುತ್ತಿರುವ ಮುರಳೀಗಾನ ಆಲಿಸುತ್ತ ಜೋಡಿ ಗಿಳಿಗಳು ಹಣ್ಣು-ಹಂಪಲುಗಳ ಅನ್ವೇಷಣೆಯನ್ನು ಮರೆತಿವೆ! ಶೆಟಗೇರಿಯಲ್ಲಿ ಜಾಮಿತಿ ವೃಕ್ಷವನ್ನು ಆಧರಿಸಿ, ಶುಕದಂಪತಿ ನಸುನಾಚುತ್ತ ಕುಳಿತಿವೆ. ಮಾಜಾಳಿಯ ವಾಮನಾವತಾರದ ಅಂಕಣದಲ್ಲಿ ಮರದ ನೆರಳಿನಲ್ಲಿ ಜೋತಿ ಗಿಳಿ ವಿಶ್ರಮಿಸುತ್ತಿವೆ. ಹೊಸಾಡದ ಹೆಚ್ಚಿನ ಚೌಕಟ್ಟುಗಳಲ್ಲಿ ಗಿಳಿವಿಂಡು ಸೇರಿಸಲಾಗಿದೆ. ಆದರೆ ಭಸ್ಮಾಸುರ-ಮೋಹಿನಿ ಅಂಕಣದಲ್ಲಿ ಹಿನ್ನೆಲೆಯ ವೃಕ್ಷದಲ್ಲಿದ್ದ ಗಿಳಿ, ಚುಂಚಿನಲ್ಲಿ ಎಲೆಯೊಂದನ್ನು ಕಟ್ಟಿ ಪ್ರಿಯೆಯನ್ನು ಆಮಂತ್ರಿಸುವ ಚಿತ್ರ ಅಪೂರ್ವವಾಗಿದೆ. ಅಶನೋಟಿಯಲ್ಲಿ ಗಿಳಿಯ ಜೋಡಿ, ಮುತ್ತಿನಹಾರ ಕಚ್ಚಿಕೊಂಡು ಹಾರುವ ಚಿತ್ರವಿದೆ. ಶಾಂತಿದೂತ ಪಾರಿವಾಳ, ಕ್ವಚಿತ್ತಾಗಿ ಕಾಣಸಿಗುತ್ತದೆ. ಬೀಳಗಿಯಲ್ಲಿ ನಾರದನು ಸ್ವರ್ಗಲೋಕದಿಂದ ಭೂಲೋಕಕ್ಕೆ ಇಳಿದು ಬರುತ್ತಿದ್ದಂತೆ ಪಾರಿವಾಳ, ಬಾಯಲ್ಲಿದ್ದ ಹೂಗೊಂಚಲಿನಿಂದ ಸ್ವಾಗತ ಕೋರುತ್ತದೆ. ಅಶನೋಟಿಯಲ್ಲಿ ಹಕ್ಕಿಗಳಿಗೆ ಪ್ರಧಾನ್ಯ ಕೊಡಲಾಗಿದೆ. ನವಿಲೊಂದು ತಲೆಯ ಮೇಲಿನ ತುರಾಯಿಯನ್ನು ಮತ್ತಷ್ಟು ಎತ್ತರಿಸಿ, ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಮುಂದುವರಿಯುತ್ತದೆ. ಹದ್ದೊಂದು ಆಹಾರದ ಅನ್ವೇಷಣೆಗಾಗಿ, ಗಗನಮಂಡಲದಿಂದ ಭೂಮಿಗೆ ಇಳಿದು ಬರುತ್ತಿರುವಂತೆ ಚಿತ್ರಿಸಲಾಗಿದೆ. ಹೊನ್ನಾವರದ ಲಂಕಾಪತಿ ರಾವಣನ ಚೌಕಟ್ಟಿನಲ್ಲಿ, ಗಂಡ-ಭೇರುಂಡವನ್ನು ಹೋಲುವ ದ್ವಿಪಕ್ಷಿಯನ್ನು ಚಿತ್ರಿಸಲಾಗಿದೆ. ನಾಚೋಲಿಯಲ್ಲಿ ನವಿಲು, ಜಾಮಿತಿ ಮರವನ್ನು ಏರಿ ವಿರಮಿಸುತ್ತಿದೆ.

ಚಿತಾಕುಲಾದಲ್ಲಿ ಚಿಗರೆಯೊಂದು ಛಾಯಾಗ್ರಹಣಕ್ಕಾಗಿ ಭಂಗಿ ಕೊಟ್ಟು ನಿಂತಂತೆ ಇದೆ. ಹೊನ್ನಾವರದ ಪರಶುರಾಮನ ಅಂಕಣದಲ್ಲಿ ಚಿತ್ರಿತ ಜೋಡಿ ಕೋತಿಗಳು ನಾಲ್ಕು ಆಗಿ ಕಾಣುವಂತೆ ಮಾಡಲಾಗಿದೆ. ಅದರಂತೆ ಪರಶುರಾಮನ ಚೌಕಟ್ಟಿನಲ್ಲಿ ಒಂದೇ ಚಿತ್ರದಲ್ಲಿ ವೃಷಭ-ಗಜವನ್ನು ಸೇರಿಸಲಾಗಿದೆ. ಬಿಚೋಲಿಯಲ್ಲಿ ಹೆಬ್ಬಾಗಿಲಿನ ಆಚೆ-ಈಚೆ ದ್ವಾರಪಾಲಕರಂತೆ ಎರಡು ಹುಲಿಯ ಚಿತ್ರವಿದೆ. ಅಂಕೋಲೆಯ ನಾಗೇಶ ಶೆಣೈ ಅವರ ಮನೆಯ ಹೊರಬಾಗಿಲಿನಲ್ಲಿಯೇ ವೀರನೊಬ್ಬ ಹುಲಿಯೊಂದಿಗೆ ಬರಿಗೈಯಿಂದ ದ್ವಂದ್ವದಲ್ಲಿ ತೊಡಗಿದ ಚಿತ್ರ ಬಂದಿದೆ. ಚಿತ್ರಿತ ವ್ಯಕ್ತಿ ಮನೆತನದ ಪೂರ್ವಜನಿದ್ದರೆ ಆಶ್ಚರ್ಯವಿಲ್ಲ. ಹಿರೇಗುತ್ತಿಯಲ್ಲಿ ಅನಾಕರ್ಷಕ ಸಿಂಹಚಿತ್ರ, ಹೊರಬಾಗಿಲಿನ ಎಡ-ಬಲದಲ್ಲಿ ಕಾಣಬಹುದಾಗಿದೆ. ಅದೇ ನಾಚೋಲಿಯಲ್ಲಿ ದ್ವಾರಪಾಲಕರಾಗಿದ್ದ ಸಿಂಹ ಜೋಡಿ, ಇದೀಗ ಅಲಂಕಾರ ಮುಗಿಸಿ ಡ್ಯೂಟಿಗೆ ಹಾಜರಾದಂತೆ ಇದೆ!

ಅವಕಾಶ ಸಿಕ್ಕಲ್ಲೆಲ್ಲ ಗಂಧರ್ವ, ಕಿನ್ನರ, ಕಿಂಪುರುಷ ಮತ್ತು ಯಕ್ಷರ ಚಿತ್ರಗಳನ್ನು ರಚಿಸಲಾಗಿದೆ. ಇವು ಹೊನ್ನಾವರದಲ್ಲಿ ವಿಪುಲವಾಗಿವೆ. ಗೋಮುಖ-ಮಾನವ, ಮೃದಂಗ



ನುಡಿಸುತ್ತಿದ್ದಾನೆ. ಜೋಡಿ–ಕೋಡುಗಳ ನಡುವೆ ಕಿರೀಟವಿದೆ. ಪಕ್ಕಿಯ ದೇಹವಿರುವ ಕನ್ನೆ, ತಂತುವಾದ್ಯ ಮೀಟುತ್ತಿದ್ದಾಳೆ. ನಾಗಕನ್ಯೆಯರೀರ್ವರು ಉರಿಯುತ್ತಿರುವ ಹಣತೆ ಹಿಡಿದು ಯಾರನ್ನೋ ಸ್ವಾಗತಿಸುವಂತಿದೆ. ಗಣೇಶನ ಎಡ ಬಲದಲ್ಲಿ ಹಕ್ಕಿಯ ದೇಹದ ಪುರುಷರು ಕೈಯಲ್ಲಿದ್ದ ಪಾತ್ರೆಯಿಂದ, ಅಭಿಷೇಕ ನಡೆಸಿದಂತಿದೆ. ವಾಮನಾವತಾರದ ಚೌಕಟ್ಟಿನಲ್ಲಿ ಮೃಗ ಪುರುಷನು ಬಲಗೈಯಿಂದ ಆರತಿ ಬೆಳಗುತ್ತ, ಎಡಗೈಯಿಂದ ಗಂಟೆಬಾರಿಸುತ್ತಿರುವಂತೆ ಚಿತ್ರಿಸಲಾಗಿದೆ. ಕುಮಟೆಯ ಇಂದ್ರನ ಚೌಕಟ್ಟಿನಲ್ಲಿ ಕಾಮಧೇನುವನ್ನು ಪುಸಲಾಯಿಸಿ ಬೇಡಿಕೊಳ್ಳುವಂತಿದೆ.

ವಿಷ್ಣುವಿನ ವಿವಿಧ ಅವತಾರಗಳನ್ನು ಚಿತ್ರಿಸುವಾಗ, ಕಲಾಕಾರರು ತಮ್ಮ ಕಲ್ಪನೆಯನ್ನು ಧಾರಾಳವಾಗಿ ಬಳಸಿದ್ದಾರೆ. ಮತ್ಸ್ಯಾವತಾರ ಚಿತ್ರಿಸುವಾಗ, ಮಾಜಾಳಿಯಲ್ಲಿ ಮೀನೇ ಮಾನವನಾಗುವಂತೆ ಎಚ್ಚರವಹಿಸಲಾಗಿದೆ. ಅದೇ ಹೊನ್ನಾವರದಲ್ಲಿ ಮಾನವಾಕೃತಿಯು ಮೀನಿನ ಬಾಯಿಂದ ಹೊರಬರುವಂತಿದೆ. ಇದರಂತೆ ಕೂರ್ಮ, ವರಾಹ ಅವತಾರಗಳನ್ನು ಚಿತ್ರಿಸುವಲ್ಲಿಯೂ ಭಿನ್ನತೆ ಕಂಡುಬರುತ್ತದೆ. ಕುಮಟೆಯಲ್ಲಿ ಮಾನವದೇಹಕ್ಕೇ ವರಾಹದ ಮುಖವನ್ನು ಅಂದವಾಗಿ ಜೋಡಿಸಲಾಗಿದೆ. ಹೊನ್ನಾವರದಲ್ಲಿ ನಾರಸಿಂಹನು ಉಗ್ರವಾಗಿ ಕಂಡರೆ, ಬೀಳಗಿಯಲ್ಲಿ ಸೌಮ್ಯವಾಗಿದ್ದಾನೆ. ಕುಮಟೆಯಲ್ಲಿ ಕೃಷ್ಣನ ಸಂಗಾತಿಯಾಗಿರುವ ಗೋಮಾತೆ. ಕಲಾಪೂರ್ಣವಾಗಿ ಮೂಡಿ ಬಂದಿದ್ದಾಳೆ. ಹೊನ್ನಾವರದಲ್ಲಿ ಗೋಪಾಲರು, ಮೇಯಿಸುತ್ತಿದ್ದ ಹತ್ತಾರು ಗೋವುಗಳು ಧಾವಿಸಿ ಬಂದಂತಿದೆ. ಮಾಜಾಳಿಯ ಕಲ್ಕಿ ಅವತಾರವು, ಅಶ್ವಕ್ಕೆ ಸಮಾಜಾಯಿಷಿ ನೀಡುವಂತೆ ಇದ್ದರೆ, ಹೊನ್ನಾವರದಲ್ಲಿ ಕಳಸ–ಕೊಡೆಗಳನ್ನು ಹೊತ್ತ ಅಶ್ವವನ್ನು ಕಲ್ಕಿ, ಬಂಧಿಸುತ್ತಿರುವಂತಿದೆ. ಅದೇ ಬೀಳಗಿಯಲ್ಲಿ ಜಟಕಾದವ ದಣಿದ ಕುದುರೆಗೆ ಇನ್ನಷ್ಟು ದುಡಿಯಲು ಹುರಿದುಂಬಿಸುವಂತಿದೆ. ರಣರಂಗದಲ್ಲಿ ರಥವನ್ನು ಎಳೆಯುವ ಕುದುರೆಗಳಲ್ಲಿ ಸಾಕಷ್ಟು ವೈವಿಧ್ಯ ಕಂಡು ಬರುತ್ತದೆ.





ಸರಸ್ವತಿ

7. ಹೆಂಗಳೆಯರು

ಎರಡು ಶತಕಗಳ ಹಿಂದೆಯೇ ಭಾರತೀಯ ಪುರುಷರು ತಮ್ಮ ವೇಷ-ಭೂಷಣಗಳಲ್ಲಿ ಪಾಶ್ಚಿಮಾತ್ಯರನ್ನು ಅನುಕರಿಸಿದರೂ ನಾರಿಯರು ತಮ್ಮ ಸಂಸ್ಕಾರ, ಸಂಸ್ಕೃತಿಗಳನ್ನು ಬಿಟ್ಟುಕೊಡಲು ಒಪ್ಪದೇ ಸೀರೆ-ಕುಪ್ಪಸ, ಪರಂಪರಾಗತ ಒಡವೆಗಳಲ್ಲಿಯೇ ತೃಪ್ತಿಪಡೆದರು. ಹೀಗಾಗಿ ಕಾವಿ ಚಿತ್ರಗಳಲ್ಲಿ ರೂಪಿತವಾದ ಮಹಿಳೆಯರೂ ದೇವಲೋಕದ ಅಲಂಕಾರಗಳಿಗೆ ಮಾರುಹೋಗದೇ ಅಪ್ಪಟ ಭಾರತೀಯರಾಗಿರುವುದಷ್ಟೇ ಸಾಕು! ಎಂದು ಸಮಕಾಲೀನ ಪೋಷಾಕಿನಲ್ಲೇ ಕಂಗೊಳಿಸಿದ್ದಾರೆ. ಲಕ್ಷ್ಮಿ, ಸರಸ್ವತಿ, ದ್ರೌಪದಿ, ಮಾಧವಿ, ಯಕ್ಷಿಣಿ, ನಾಗಿಣಿ, ಮುಂತಾದ ಪೌರಾಣಿಕ ಮಹಿಳೆಯರೂ ನಮ್ಮವರೇ! ಅನಿಸಿಬಿಡುತ್ತದೆ. ಜೊತೆಗೆ ಮಹಿಷಾಸುರ ಮರ್ದಿನಿ, ಧೂಮ್ರಲೋಚನ ಮರ್ದಿನಿ, ಅಷ್ಟಭುಜಾ ದೇವಿಯರಲ್ಲಿ ಕ್ರೌರ್ಯಕ್ಕಿಂತ ಹೆಚ್ಚು ಮಾತೃತ್ವವೇ ವ್ಯಕ್ತವಾಗುತ್ತದೆಂದರೆ ಅತಿಶಯೋಕ್ತಿಯಾಗಲಾರದು!

ಪಂಚಪಾಂಡವರಲ್ಲಿ ತನ್ನ ಪ್ರೀತಿಗೆ ಪಾತ್ರನಾದ ಅರ್ಜುನನನ್ನು ಸ್ವಾಗತಿಸಲು ನಿಂತ ದ್ರೌಪದಿಯ ಚಿತ್ರ ಕುಮಟೆಯಲ್ಲಿದೆ. ಎವೆ ಇಕ್ಕದೇ ನಿಂತ ತರುಣಿಯನ್ನು ನೋಡಿದಾಗ ಇವಳನ್ನೆಲ್ಲೋ ಕಂಡಹಾಗೆ ಇದೆಯಲ್ಲ! ಎಂದು ಭಾಸವಾಗದೇ ಇರದು. ತಲೆತುಂಬ ಇದ್ದ ಕೇಶರಾಶಿಯನ್ನು ಮಾಟವಾಗಿ ಬಾಚಿ ಹೆಳಲು ಹಾಕಿ ಬೆನ್ನ ಹಿಂದೆ ಇಳಿ ಬಿಡಲಾಗಿದೆ. ಕೇದಿಗೆ ಮತ್ತು ಇನ್ನಿತರ ಹೂಗಳನ್ನು ತಲೆಯಲ್ಲಿ ಮುಡಿದುಕೊಂಡಿದ್ದಾಳೆ. ಮೂಗಿಗೆ ಭಾರೀ ನತ್ತೊಂದನ್ನು ಸಿಕ್ಕಿಸಿದ್ದಾಳೆ. ಮಾಟವಾದ ಅಂಗಾಂಗಳು ಎದ್ದುಕಾಣುವಂತೆ, ಒಂಬತ್ತು ಗಜದ ಸೀರೆಯನ್ನು, ಮೈಗೆ ಅಂಟಿಕೊಳ್ಳುವಂತೆ ಹೊರಕಚ್ಚೆ ಹಾಕಿ ಉಟ್ಟಿದ್ದಾಳೆ. ಸೀರೆಯ ಮೇಲೆ ವರ್ತುಳಗಳ ನಕ್ಷೆ ಇದ್ದರೆ, ಕುಪ್ಪಸದ ಮೇಲೆ ಚುಕ್ಕಿಗಳಿವೆ. ಕಿವಿ, ಕಂಠ, ಕೈ-ಕಾಲುಗಳಲ್ಲಿ ಅನೇಕಾನೇಕ ಆಭರಣಗಳನ್ನು ತೊಟ್ಟಿದ್ದಾಳೆ. ಸೊಂಟಪಟ್ಟಿ, ಕಾಂಚೀಧಾಮಗಳನ್ನು ಇಟ್ಟುಕೊಳ್ಳಲು ಮರೆತಿಲ್ಲ. ರಸಿಕತೆಯ ದ್ಯೋತಕವೋ ಎಂಬಂತೆ, ಬಲಗೈಯಲ್ಲಿ ಹೂಗೊಂಚಲೊಂದನ್ನು ಹಿಡಿದು ಬರಲಿರುವ ಪ್ರೇಮಿಯನ್ನು ಎದುರು ನೋಡುತ್ತಿದ್ದಾಳೆ. ಕಲಾಕಾರನು ಅದೆಷ್ಟು ಸ್ವಾಭಾವಿಕವಾಗಿ ಮಹಾಭಾರತದ ಅಪ್ರತಿಮ ಗರತಿಯಲ್ಲಿ ಸಮಕಾಲೀನ ಬೆಡಗನ್ನು ತುಂಬಿದ್ದಾನೆ!

ಮಾವಿನಕುರ್ವೆಯ ಶೇಷಶಾಯಿ ವಿಷ್ಣುವಿನ ಚಿತ್ರದಲ್ಲಿಯ ಲಕ್ಷ್ಮಿ, ಪತಿಸೇವೆಯಲ್ಲಿ ನಿರತಳಾದ ಕರಾವಳಿಯ ಕೊಂಕಣಿ ಮಹಿಳೆಯ ರೂಪದಲ್ಲಿ ಕಣ್ಣಿಗೆ ಕಟ್ಟಿದಂತಾಗುತ್ತಾಳೆ. ಸಡಿಲಾಗಿ ಕಟ್ಟಿಕೊಂಡ ಮುಡಿ, ಕನಕಾಂಬರ ದಂಡೆ, ಉಂಗುರಾಕಾರದ ಮೂಗುತಿ,



ಲಕ್ಷ್ಮಿ

ಮುತ್ತಿನ ಬೆಂಡೋಲೆಗಳು, ಮೈತುಂಬ ಹೊದ್ದುಕೊಂಡ ಸೀರೆ ಸೆರಗು, ಉದ್ದ ತೋಳಿನ ರವಕೆ, ಕೊರಳಿಗೆ ಪವನದ ಸರಗಳು. ಇಂದಿಗೂ ಇಂಥ ಮಹಿಳೆಯರು ಕನ್ನಡ ಜಿಲ್ಲೆಗಳಲ್ಲಿ ಕಾಣಸಿಗುತ್ತಾರೆ. ಹೊನ್ನಾವರದ ಭಸ್ಮಾಸುರ-ಮೋಹಿನಿ ಚಿತ್ರದಲ್ಲಿ, ವಿಷ್ಣುಪರಮಾತ್ಮನನ್ನು ನರ್ತಕಿಯಂತೆ ಮೋಹಕ ಭಂಗಿಯಲ್ಲಿ ರೂಪಿಸಲಾಗಿದೆ. ಇಷ್ಟಾದರೂ ಯಕ್ಷಗಾನದಂತೆ ಪುರುಷನೇ ಸ್ತ್ರೀ ಪಾತ್ರ ಧರಿಸಿ ರಾಕ್ಷಸನಿಗೆ ಮೋಸಮಾಡುತ್ತಿದ್ದಾನೆ, ಎಂದು ಮೂಡಿಸುವಲ್ಲಿ ಕಾವಿ ಕಲಾಕಾರ ಯಶಸ್ವಿಯಾಗಿದ್ದಾನೆ.

'ಧ್ರುವ ಚರಿತ್ರೆ'ಯ ಅಂಕಣದಲ್ಲಿ ರಾಣಿ ಸುರುಚಿಯು ಸಾಲಂಕೃತಳಾಗಿ ಚಿತ್ರಿತಳಾಗಿದ್ದಾಳೆ. ಮುಡಿಯನ್ನು ಎತ್ತಿಕಟ್ಟಿ ಸುತ್ತ ಹೂದಂಡೆಯನ್ನು ಮುಡಿದಿದ್ದಾಳೆ. ಕಿವಿಗೆ ತೂಗಾಡುವ ಝುಮಕಾ, ಮೂಗಿಗೆ ರತ್ನದ ಮೂಗುತಿ. ತುಂಬೆದೆ, ಸಿಂಹಕಟಿಗಳಿಂದ ಅವಳ ಸ್ತ್ರೀತ್ವವನ್ನು ಆಕರ್ಷಕವಾಗಿ ಮಾಡಲಾಗಿದೆ. ಮುರಳೀಧರನ ಅಂಕಣದಲ್ಲಿ ಗೋಪಿಕಾ ಸ್ತ್ರೀ, ನಿರಾಡಂಬರ ಉಡುಗೆಯಲ್ಲಿ ಶ್ರೀಕೃಷ್ಣನ ಕೊಳಲು ವಾದನ ಮೆಚ್ಚುತ್ತ, ಅವನ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದ ಶಕ್ತಿ ಸಾಮರ್ಥ್ಯಗಳಿಗೆ ಮನಸೋತಂತೆ ನಿಂತಿದ್ದಾಳೆ. ಕೈಯಲ್ಲಿ ಪುಸ್ತಕ, ಜಪಮಾಲೆ, ಶಂಖ, ಗಿಳಿಗಳೊಂದಿಗೆ ಚಿತ್ರಿತವಾಗಿರುವ ಸರಸ್ವತಿ, ಕಾವಿ ಕಲಾಕಾರನ ಕಲ್ಪನೆಯಲ್ಲಿ ಬೇರೆಯೇ ರೂಪ ತಳೆದಿದ್ದಾಳೆ. ಎಡಗೈಯಲ್ಲಿ ವೀಣೆ ಹಿಡಿದು, ಬಲಮುಂಗೈಯಿಂದ ಮೀಟುತ್ತಿದ್ದಾಳೆ. ಎಡಗೈಯಿಂದ ಅಪಸ್ವರ ಹೊಮ್ಮದಂತೆ ಶ್ರುತಿ ಮಾಡುತ್ತಿದ್ದಾಳೆ. ಬಲಹಿಂಗೈಯಲ್ಲಿ ಕಿರಿದಾದ ತಂತಿವಾದ್ಯವೊಂದನ್ನು ಹಿಡಿದಿದ್ದಾಳೆ. ಶಿರಾಲಿಯ ಸರಸ್ವತಿ, ವೀಣೆಯನ್ನು ನುಡಿಸುತ್ತ ಸುಖಾಸನದಲ್ಲಿ ವಿರಮಿಸುತ್ತ ಬಲಕಾಲನ್ನು ನವಿಲಿನ ಮೈಮೇಲೆ ಚಾಚಿದ್ದಾಳೆ. ಅದೇ ಕುಮಟೆಯವಳು ಹಂಸದ ಮೇಲೆ ಆರೂಢಳಾಗಿದ್ದಾಳೆ. ನವಿಲು, ಹಂಸ ಎರಡೂ ಇಲ್ಲದ ಹೊನ್ನಾವರದ ಸರಸ್ವತಿ, ವೀಣೆ ನುಡಿಸುತ್ತಾ ಗದ್ದಿಗೆಯಲ್ಲಿ ವಿರಾಜಮಾನಳಾಗಿದ್ದಾಳೆ. ಅನಂತಶಯನನ ಅಂಕಣದಲ್ಲಿ ಜೋಡಿ ನಾಗಿಣಿಯರು, ಕೈಯಲ್ಲಿ ಉರಿಯುತ್ತಿರುವ ಪ್ರಣತಿಗಳೊಂದಿಗೆ ವಿಷ್ಣುವಿಗೆ ಸ್ವಾಗತ ಮಾಡುತ್ತಿರುವುದನ್ನು ಕಂಡಾಗ, ದೀಪಾವಳಿಯ ರಾತ್ರೆ ಹಣತೆಗಳನ್ನು ಹಚ್ಚಲು ಹೊರಟ ಹೆಂಗಳೆಯರು ನೆನಪಿಗೆ ಬಾರದೆ ಇರರು. ಇನ್ನೊಂದು ಚಿತ್ರದಲ್ಲಿ ಹಕ್ಕಿಯ ದೇಹ ಪಡೆದ ಕಿನ್ನರಿ, ತಂತಿವಾದ್ಯವೊಂದನ್ನು ನುಡಿಸುತ್ತಿರುವುದು ಅಪೂರ್ವವಾಗಿದೆ.


ಶಿರಾಲಿಯಲ್ಲಿ ಜನಸಾಮಾನ್ಯರ ಪ್ರತೀಕವಾದ ಸ್ತ್ರೀಯನ್ನು ಚಿತ್ರಿಸಿದ್ದಾರೆ. ಕರಿಯ ಕೇಶರಾಶಿಯ ತುರುಬಿಗೆ ಕರಾವಳಿಯ ವಿಶೇಷ ಹೂವುಗಳಾದ ಜಾಯಿ, ಜೂಯಿ (ಕಳೆಚೆಂಡು, ಸೂಜಿಮಲ್ಲಿಗೆ)ಯ ದಂಡೆಯನ್ನು ಸುತ್ತಿದ್ದಾಳೆ. ಕಿವಿಗೆ ಭಾರವೆನಿಸುವಷ್ಟು ಬೆಂಡೋಲೆ, ಬುಗಡಿಗಳನ್ನು ಹೇರಿಸಿಕೊಂಡಿದ್ದಾಳೆ. ಮೂಗನ್ನು ಮುಚ್ಚುವಂಥ ಭವ್ಯವಾದ ನತ್ತು, ಹಣೆಗೆ ದುಂಡಗಿನ ಕುಂಕುಮದ ಬಟ್ಟು, ಕೊರಳನ್ನು ಮಂಗಳಸೂತ್ರ, ಮೋಹನಮಾಳಾ, ಪವನದ ಸರಗಳಿಂದ ಮುಚ್ಚುವಂತೆ ಮಾಡಿದ್ದಾಳೆ. ತೋಳಿಗೆ ಕುಸುರಿ ಕೆಲಸವಿದ್ದ ಬಾಜೂಬಂದ್, ಕೈತುಂಬ ಗೋಟು, ಪಾಟ್ಲಿ, ಬಳೆಗಳು. ನಕ್ಷೆಗಳಿರುವ ಕಣದ ಕುಪ್ಪಸ, ಒಂಭತ್ತು ಗಜದ ಸೀರೆಯನ್ನು ಹೊರಕಚ್ಚೆ ಹಾಕಿ ಉಟ್ಟಿದ್ದಾಳೆ. ಎಡಕಾಲ ಮೇಲೆ ಬಲಗಾಲಿಟ್ಟು, ಮುಷ್ಟಿಕಟ್ಟಿದ ಬಲಗೈಯನ್ನು ಮುಖಕ್ಕೆ ಆಧಾರವಿಟ್ಟು ಪಲ್ಲಂಗಕ್ಕೆ ಆತುಕೊಂಡು ನಿಂತಿದ್ದರಿಂದ ಪ್ರಿಯಕರನ ಆಗಮನಕ್ಕಾಗಿ ಕಾಯುತ್ತಿದ್ದಾಳೆ, ಎಂದು



ನಾಗಕನ್ನಿಕೆ

ಭಾಸವಾಗುತ್ತವೆ. ಇಂಥವೇ ಚಿತ್ರಗಳು ಹೆಗಡೆಯ ದೇವಾಲಯಗಳಲ್ಲಿ ಅನೇಕ ಇವೆ. ಒಂದು ಅಂಕಣದಲ್ಲಿ ಶಯ್ಯಾಗೃಹದ ವಿವರಗಳನ್ನು ಮೂಡಿಸಲಾಗಿದೆ. ಅದಕ್ಕಿರುವ ಭವ್ಯ ಬಾಗಿಲು, ದೊಡ್ಡ ಬೀಗಗಳಿಂದಾಗಿ ನೈಜತೆ ತರಲು ಯತ್ನಿಸಲಾಗಿದೆ. ಮೆತ್ತಗಿನ ಹಾಸಿಗೆ, ಕುಸುರಿ ಕೆಲಸ ಮಾಡಿದ ಹಲವಾರು ದಿಂಬುಗಳು, ನಕ್ಷೆಗಳುಳ್ಳ ಮೇಲ್ಹಾಸು, ಜಮಖಾನೆಗಳು, ಉರಿಯುತ್ತಿರುವ ದೀಪಗಳು, ಸುಖಜೀವನದ ದ್ಯೋತಕವಾಗಿ ರೂಪಗೊಂಡಿವೆ. ಒಂದು ಅಂಚಿನಲ್ಲಿ ಹೆದರಿದ ಹುಲ್ಲೆಯಂತೆ ನಿಂತ ಚೌಕುಳಿ ಸೀರೆಯುಟ್ಟ ತರುಣಿ, ಬಾಗಿಲಿನತ್ತ ಕಾಣಿಸಿಕೊಂಡ ಪತಿಯನ್ನು ಎವೆಯಿಕ್ಕದೇ ವೀಕ್ಷಿಸುತ್ತಿದ್ದಾಳೆ. ಒಳನುಗ್ಗಲು ಬಂದ ಕಳ್ಳನನ್ನೋ ಕಾಮುಕನನ್ನೋ ಎದುರಿಸಲು ಆತ ಖಡ್ಗದೊಂದಿಗೆ ಧಾವಿಸಿದಂತಿದೆ. ಇನ್ನೊಂದು ಅಂಕದಲ್ಲಿ ಹಾರ್ಮೋನಿಯಂ ನುಡಿಸುತ್ತಿರುವ ಮಹಿಳೆಯ ಚಿತ್ರದಿಂದ ಕೊಂಕಣಿಗರ ಸಂಗೀತ ಪ್ರೇಮವನ್ನು ಎತ್ತಿ ತೋರಿಸುತ್ತಿದ್ದಂತೆ ಇದೆ. ಇನ್ನೊಂದೆಡೆ ಕಮಾನಿನ ಅಡಿಯಲ್ಲಿ ನಿಂತ ಗೃಹಿಣಿ, ಪ್ರಿಯತಮನ ಆಗಮನಕ್ಕಾಗಿ ಕಾತರತೆಯಿಂದ ಕಾದು ನಿಂತಿದ್ದಾಳೆ.

ಹಲವಾರು ಚಟುವಟಿಕೆಗಳಲ್ಲಿ ತೊಡಗಿದ ಹೆಂಗಳೆಯರು ಅನೇಕ ಕಡೆ ಚಿತ್ರಿತರಾಗಿದ್ದಾರೆ. ಸಿರ್ಸಿಯಲ್ಲಿ ಸೀರೆಯುಟ್ಟ ಯೌವನೆ, ಕೈಯಲ್ಲಿ ದಾರದ ಗಿರಗಿಟ್ಲೆ ಆಡಿಸುತ್ತ ಮೈಮರೆತಿದ್ದಾಳೆ. ನೆಲದ ಮೇಲೆ ಬಿದ್ದ ಕಾಳು-ಕಡ್ಡಿಗಳನ್ನು ಹೆಕ್ಕಿ ತಿನ್ನುತ್ತಿದ್ದ ಪಾರಿವಾಳ, ಇವಳ ಮನೆ ಹಾಳಾಗ! ಎಂಬ ಭಾವ ತಳೆದು, ಇನ್ನೇನು ಹಾರಿ ಹೋಗುವುದರಲ್ಲಿದೆ. ಪ್ರೇಮಕಾತರ, ಕಾಮಾತುರ ಮಹಿಳೆಯರು ಅಲ್ಲಿ-ಇಲ್ಲಿ ಚಿತ್ರರೂಪದಲ್ಲಿ ಕಣ್ಣಿಗೆ ಬೀಳುತ್ತಾರೆ. ಸಿದ್ಧಾಪುರದಲ್ಲಿ ಅಂಗಾಂಗ ತುಂಬಿಕೊಂಡ ಹರೆಯದವಳು ಎಡಗೈಯನ್ನು ಸೊಂಟದಲ್ಲಿಟ್ಟು ಬಲಗೈಯಲ್ಲಿ ಹೂವೊಂದನ್ನು ಹಿಡಿದು ಪ್ರಿಯಕರನಿಗಾಗಿ ಕಾಯುತ್ತಿದ್ದಾಳೆ. ಹೊನ್ನಾವರದ ಚಿತ್ರದಲ್ಲಿ ಸರಸ ಸಲ್ಲಾಪದಲ್ಲಿ ಮೈಮರೆತ ಪ್ರೇಮಿಗಳನ್ನು ನೈಜತೆಯಿಂದ ಚಿತ್ರಿಸಲಾಗಿದೆ. ತೂಗುದೀಪದ ಮಂದ ಬೆಳಕಿನಲ್ಲಿ ತಲೆಯನ್ನು ದಿಂಬಿಗೊರಗಿಸಿ ಪ್ರಿಯಕರನು ಪವಡಿಸಿದ್ದಾನೆ. ಅವನ ತೋಳತೆಕ್ಕೆಯಲ್ಲಿ ಬಂಧಿತಳಾದ ಯುವತಿ, ಅವನಿಂದ ಪ್ರೀತಿಯ ಕಾಣಿಕೆ ಪಡೆಯುವ ಹವಣಿಕೆಯಲ್ಲಿದ್ದಾಳೆ. ಕುಮಟೆಯ ಶ್ರೀವಿಷ್ಣುವಿನ ಚಿತ್ರದಲ್ಲಿ ಪತಿಯ ಎಡತೊಡೆಯನ್ನೇರಿದ ಲಕ್ಷ್ಮಿಯ ಸ್ತನಮರ್ದನದಲ್ಲಿ ಶ್ರೀಹರಿಯು ಮೈಮರೆತಿದ್ದಾನೆ. ಕರ್ನಾಟಕದ ಉದ್ದಗಲಕ್ಕೆ ಹರಡಿಕೊಂಡ ಶಿಲ್ಪ-ಭಿತ್ತಿ ಚಿತ್ರಗಳಲ್ಲಿ ಗೋಪ-ಗೋಪಿಯರ ಇಂಥ ಹಲವಾರು ಭಂಗಿಗಳು ಚಿತ್ರಿತವಾಗಿವೆ.





ಪತ್ನಿಯರೊಂದಿಗೆ ಶ್ರೀಹರಿ





ಸೂರ್ಯಕಾಂತಿ ಮತ್ತು ಕಮಲ ಹೂವುಗಳು

8. ಹೂ–ಬಳ್ಳಿಗಳು

ವೇದೋಪನಿಷತ್ತು, ಪುರಾಣಗಳು ಇನ್ನಿತರ ಧರ್ಮಗ್ರಂಥಗಳಲ್ಲಿ ಸಸ್ಯಗಳಿಗೆ ಗೌರವದ ಸ್ಥಾನ ಕೊಡಲಾಗಿದೆ. ಅವು ಸಂತಾನೋತ್ಪತ್ತಿಯನ್ನು ಪ್ರತಿನಿಧಿಸುವುದೇ ಇದಕ್ಕೆ ಮುಖ್ಯ ಕಾರಣವಿದ್ದಿರಬೇಕು. ಫಲ–ಪುಷ್ಪ, ಪರ್ಣಗಳಿಲ್ಲದೇ ಯಾವ ದೈವಿಕ ಆರಾಧನೆಯೂ ನಡೆಯುವಂತಿಲ್ಲ. ಇಷ್ಟೇ ಏಕೆ? ದೇವ–ದೇವತೆಗಳೂ ವೃಕ್ಷಗಳನ್ನು ಪ್ರತಿನಿಧಿಸುತ್ತಾರೆಂದು ವಾದಿಸುವವರಿದ್ದಾರೆ. ಕಾಲುಗಳು ವೃಕ್ಷದ ಕಾಂಡವಾದರೆ ಕೈಗಳು ರೆಂಬೆ; ಟೊಂಗೆಗಳೆಂದು ಗುರುತಿಸಲಾಗುತ್ತದೆ. ಇದಕ್ಕಾಗಿಯೇ ಅತಿಮಾನವರಿಗೆಲ್ಲ ಅನೇಕಾನೇಕ ಕೈಗಳಿರುವಂತೆ ಚಿತ್ರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಪೂರ್ಣಕುಂಭ ಕಲಶ, ವೃಕ್ಷಪೂಜೆ, ವೃಕ್ಷನೋಂಪಿ, ವೃಕ್ಷ ಸುಂದರಿ, ವೃಕ್ಷ–ಯಕ್ಷ, ನಾಗವೃಕ್ಷದ ಕಲ್ಪನೆಗಳು ಬೆಳೆದುಬಂದವು. ಶಿಲ್ಪಿಗಳಂತೆ ಕಾವಿ ಕಲಾಕಾರರು ಸಸ್ಯಗಳಿಗೆ ತಮ್ಮ ಕೃತಿಗಳಲ್ಲಿ ಆದ್ಯತೆ ಕೊಟ್ಟಿದ್ದಾರೆ.

ಅಂಕಣಗಳು ಬರಿದು ಅನಿಸದಂತೆ ಕಲಾಕಾರರು ಅವುಗಳನ್ನು ಹೂ, ಬಳ್ಳಿ–ವೃಕ್ಷಗಳಿಂದ ಕಿಕ್ಕಿರಿದು ತುಂಬಿಸಿದ್ದಾರೆ. ಇದರಿಂದ ಅನೇಕ ಕಡೆಗಳಲ್ಲಿ ಆಭಾಸವಾಗುವಂತೆ ತೋರುವ ಸಸ್ಯಗಳನ್ನು ಸೃಷ್ಟಿಸಿದ್ದಾನೆ. ಮಾಜಾಳಿಯ ಕಲಾಕಾರನಿಗೆ ಹೂಗಳೆಂದರೆ ಪಂಚಪ್ರಾಣವಿರಬೇಕು. ಅಂತೆಯೇ ಪ್ರತಿಯೊಂದು ಚೌಕಟ್ಟಿನಲ್ಲೂ ದೇವತೆಗಳಿಗಿಂತ ಫಲ–ಪುಷ್ಪಗಳಿಗೇ ಆದ್ಯತೆ ಕೊಡಲಾಗಿದೆ. ಮತ್ಸ್ಯಾವತಾರದ ಪರಿಸರದಲ್ಲಿ ಜಲಪ್ರಾಣಿಗಳನ್ನು ಚಿತ್ರಿಸುವ ಬದಲು ಹೂಗಳು ಅರಳಿ ನಿಂತಿವೆ. ಉಗ್ರನರಸಿಂಹನು ಹೂವುಗಳನ್ನು ಮುಡಿದುಕೊಂಡೇ ಹಿರಣ್ಯಕಶಿಪುವಿನ ಕರುಳುಗಳನ್ನು ಬಗೆಯುತ್ತಿದ್ದಾನೆ! ಗೇಣುದ್ದ ವಾಮನನು ಬಲಿಷ್ಠನಾದ ಬಲಿ ಚಕ್ರವರ್ತಿಯನ್ನು ಪಾತಾಳಲೋಕಕ್ಕೆ ಅಟ್ಟುವ ವಿಧಾನಕ್ಕೆ ಮೆಚ್ಚಿಗೆ ಸೂಸುವಂತೆ ಹೂ–ಬಳ್ಳಿಗಳು ಪ್ರಸನ್ನವಾಗಿ ನಿಂತಿವೆ. ಪರಶುರಾಮನು ಸಹಸ್ರಾರ್ಜುನನೊಡನೆ ಕದನಕ್ಕಿಳಿದಾಗ, ಅವರೀರ್ವರ ನಡುವೆ ತಲೆಯೆತ್ತಿ ನಿಂತ ಒಂಟಿ ಹೂವು, ಶಾಂತಿ ಸಂದೇಶವನ್ನು ಸಾರುವಂತಿದೆ. ಕಲ್ಕಿ ಅವತಾರದ ಅಂಕಣವನ್ನು ಹೂ–ಬಳ್ಳಿಗಳಿಂದ ಕಿಕ್ಕಿರಿಸಿ ತುಂಬಿಸಿದರೂ, ದೇವವಾಹನವಾದ ಕುದುರೆ, ಅವುಗಳ ಗೊಡವೆಗೆ ಹೋಗದೇ ತನ್ನ ಮಾಲಿಕನ ಮಾತುಗಳನ್ನು ಆಲಿಸುವುದರಲ್ಲಿ ಮೈಮರೆತಂತಿದೆ. ವಿಠ್ಠಲನ ಚಿತ್ರದಲ್ಲೂ ಸಾಕಷ್ಟು ಹೂಗಳನ್ನು ಸೇರ್ಪಡೆ ಮಾಡಲಾಗಿದೆ. ಬೀಳಗಿಯಲ್ಲಿ ವಿಜಯ ವಿಠ್ಠಲನ ಸುತ್ತಲೂ ಕಲಾಮಂಟಪವನ್ನೇ ನಿರ್ಮಿಸಲಾಗಿದೆ. ಅದರಂತೆ ನಾರದಮುನಿಯು ಭೂಲೋಕಕ್ಕೆ ಇಳಿದು ಬರುತ್ತಿದ್ದಂತೆ ಸ್ವರ್ಗಲೋಕದ ಪುಷ್ಪಲತೆಗಳು ಅವನನ್ನು ಬಿಟ್ಟು ಬದುಕಲಾರದೇ ಬೆನ್ನಟ್ಟಿಕೊಂಡು ಬಂದಂತೆ ಭಾಸವಾಗುತ್ತದೆ. ಕರ್ಣನು ಧನುರ್ವಿದ್ಯೆ ಅಭ್ಯಸಿಸುತ್ತಿರುವ ದೃಶ್ಯದಲ್ಲಿಯೂ ಲತೆಗಳನ್ನು ಹಬ್ಬಿಸಲಾಗಿದೆ.



ಹೂ ಗಿಡ, ಲತೆಯಲ್ಲಿರುವ ಗಿಳಿ

ಶ್ರೀರಾಮನು ಕುಳಿತು ವಿಶ್ರಮಿಸುತ್ತಿರುವ ತಾಣಕ್ಕೆ ಹಿನ್ನೆಲೆಯಾಗಿ ಹೂ-ಬಳ್ಳಿಗಳನ್ನು ಬಳಸಲಾಗಿದೆ. ಇದರಂತೆ ಸೀತಾದೇವಿ ನಿಂತಲ್ಲಿ ಪುಷ್ಪಲತೆಗಳು ತೂಗುತ್ತಿವೆ. ಅಂಕೋಲೆಯಲ್ಲಿ ನಾಗಾಲೋಟ ಹಾಕುತ್ತಿರುವ ಅಶ್ವವೊಂದು ಕಾಲಡಿಯಲ್ಲಿ ಅರಳಿ ನಿಂತ ಹೂ ಗಿಡವನ್ನು ಹಾಳುಗೆಡವದಂತೆ ಎಚ್ಚರಿಕೆ ವಹಿಸುವ ಚಮತ್ಕಾರಿಕ ಚಿತ್ರವಿದೆ.

ಹೊನ್ನಾವರದ ಚಿತ್ರಗಳಲ್ಲಿಯೂ ಪುಷ್ಪ-ಲತೆಗಳನ್ನು ಸೇರಿಸಲಾಗಿದೆ. ಆದರೆ ಇವೆಲ್ಲ ಸಸ್ಯಶಾಸ್ತ್ರ ಆಧಾರಿತ ವೈಜ್ಞಾನಿಕ ರೂಪವಾಗಿರದೇ ಸಾಂಕೇತಿಕವಾಗಿವೆ. ಅಂತೆಯೇ, ಅವನ್ನು ಶಾಸ್ತ್ರಬದ್ಧವಾಗಿ ಗುರುತಿಸುವುದು ತೊಡಕಿನ ಕೆಲಸ. ಸರಸ್ವತಿಯ ಅಂಕಣದಲ್ಲಿ ಸೂರ್ಯಕಾಂತಿ ಹೂ ಅರಳಿನಿಂತಿದೆ. ಸನಿಹದಲ್ಲಿಯೇ ಇನ್ನೆರಡು ಹೂವುಗಳು ಕೇವಲ ಪಕಳೆಗಳಿಂದ ಪ್ರತಿನಿಧಿಸಲಾಗಿದೆ. ಸಹಸ್ರಾರ್ಜುನನ ಹತ್ತಿರದಲ್ಲಿಯೇ ಅರಳುತ್ತಿರುವ ಒಂಟಿ ಕಮಲವಿದೆ. ಜೊತೆಗೆ ಕಾಲ್ಪನಿಕ ಹೂವೊಂದನ್ನು ಚಿತ್ರಿಸಲಾಗಿದೆ. ಕಾಳಿಯಮರ್ದನ ಚೌಕಟ್ಟಿನಲ್ಲಿ, ಹಾರುವ ತಟ್ಟೆ ನೆನಪಿಗೆ ತರುವಂತಹ ಜೋಡಿಹೂಗಳಿವೆ. ಗಾಳಿಯಿಂದ ಬೀಜ ಪ್ರಸಾರಕ್ಕಾಗಿ ಇಂಥ ಗರಿಗಳನ್ನು ಗಿಡಮರಗಳು, ಬಳಸುವುದು ಸಾಮಾನ್ಯವಾಗಿದ್ದರೂ ಹೂಗಳು ಹಾರುವುದು ಸಸ್ಯ ವಿಜ್ಞಾನಕ್ಕೆ ಹೊಸ ಜ್ಞಾನವೇ! ಮತ್ಸ್ಯಾವತಾರದ ಅಂಕಣದಲ್ಲಿ ವಿವಿಧ ಪ್ರಕಾರದ ಪುಷ್ಪಗಳ ಸುರಿಮಳೆಯನ್ನೇ ಸುರಿಯಲಾಗಿದೆ. ಅನಂತಶಯನ ಅಂಕಣದಲ್ಲಿ ಬಳ್ಳಿಗಳು, ಮೊಗ್ಗುಗಳನ್ನು ಹೊತ್ತು ನಿಂತಿವೆ. 'ಗಜೇಂದ್ರಮೋಕ್ಷ' ಚೌಕಟ್ಟಿನಲ್ಲಿ ಆನೆಯೊಡನೆ ಮೊಸಳೆಯ ಸೆಣಸಾಟ ನಡೆಯುವಾಗ, ಮಡುವಿನಲ್ಲಿ ಬೆಳೆದು ನಿಂತ ಕಮಲಗಳು ಯಾರು ಗೆಲ್ಲಬಹುದು? ಎಂದು ಕೌತುಕತೆಯಿಂದ ಕಾಯುತ್ತಿರುವಂತೆ ಭಾಸವಾಗುತ್ತದೆ. ಇನ್ನೊಂದೆಡೆ ಬ್ರಹ್ಮದೇವನಿಗೆ ಆಶ್ರಯನೀಡುವುದಕ್ಕಾಗಿ ನಾರಾಯಣನು ನಾಭಿಯಲ್ಲಿ ಕಮಲವನ್ನು ಹೇಗೆ ಬೆಳೆಸಿದನೆಂದು ಅರಿಯದೆ ಮಂಕಾಗಿ ನಿಲ್ಲುವಂತಾಗುತ್ತದೆ!

ಕೊಂಕಣಿಗರು ಪ್ರತಿಯೊಂದು ಶುಭಕಾರ್ಯವನ್ನು ಕೈಕೊಳ್ಳುವಾಗ, ಫಲ-ಪುಷ್ಪಗಳಿಂದ ಅಲಂಕೃತವಾದ ಪೂರ್ಣಕಳಶವನ್ನು ಸ್ಥಾಪಿಸುತ್ತಾರೆ. ಸಾಧು-ಸಂತರನ್ನು ಬರಮಾಡಿಕೊಳ್ಳುವಾಗ ಕೂಡ ಹೆಂಗಳೆಯರು ಕಲಶವನ್ನು ಹೊತ್ತು ಹೊರಡುವುದು ವಾಡಿಕೆ. ಗೋವಾದ ಪರ್ಲೆಮ್‌ದಲ್ಲಿ ಇಂಥ ಕಲಶವನ್ನು ಕಾವಿ ಚಿತ್ರದಲ್ಲಿ ಕಾಣಬಹುದು. ಇದರಂತೆ ಸತ್ಯನಾರಾಯಣ ವ್ರತಾರಂಭದಲ್ಲಿ ಇನ್ನಿತರ ಕಡೆಯಂತೆ ಪುಷ್ಪಾಲಂಕೃತ ಕಲಶ, (ಕುಂಭ)ವನ್ನು ಬಳಸುತ್ತಾರೆ. ಕರಾವಳಿಯ ವಿವಿಧ ಊರುಗಳಲ್ಲಿ ಪ್ರತಿವರ್ಷವೂ ನಡೆಯುವ ಬಂಡಿ ಹಬ್ಬದ ಅಂಗವಾಗಿ ಗುನಗನು ಇಂಥ ಕಲಶ ಹೊತ್ತು ಮೆರವಣಿಗೆಯಲ್ಲಿ ಹೋಗುವ ಪರಿಪಾಠವಿದೆ. ಇಂಥ ಪುಷ್ಪಾಲಂಕಾರ ಕಲಶ, ಶೆಟಗೇರಿಯಲ್ಲಿ ಚಿತ್ರಿತವಾಗಿದೆ.

ವೇದವ್ಯಾಸರು ಪುಷ್ಪಪ್ರೇಮಿಗಳು ಇದ್ದರೋ ಇಲ್ಲವೋ ಎಂಬುದು ಇತಿಹಾಸದ ಪುಟಗಳಿಂದ ತಿಳಿಯುವಂತಿಲ್ಲ! ಆದರೆ ಬೀಳಗಿಯಲ್ಲಿ ತಾಳೆಗರಿಗಳನ್ನು ಕೈಯಲ್ಲಿ ಹಿಡಿದು ಧರ್ಮಬೋಧನೆಯಲ್ಲಿ ತೊಡಗಿದ ಅವರ ಅಂಕಣದಲ್ಲಿ ವಿಪುಲವಾದ ಹೂಗಳನ್ನು ಕಾಣಬಹುದಾಗಿದೆ. ಸಮಕಾಲೀನ ವ್ಯಕ್ತಿಗಳಲ್ಲಿ ಹೂಗಳ ಪ್ರೀತಿಯನ್ನು ಹಲವಾರು ಚಿತ್ರಗಳಲ್ಲಿ ಗುರುತಿಸಬಹುದು. ಹೆಗಡೆಯಲ್ಲಿ ಧನಿಕನ ವೇಷಭೂಷಣ ಧರಿಸಿ ದಿಂಬಿಗೆ ಆತು ಮೆತ್ತಗಿನ ಗಾದಿಯ ಮೇಲೆ ಕುಳಿತ ವ್ಯಕ್ತಿಯು ಬಲಗೈಯಲ್ಲಿ ಚಂದ್ರಮುಖಿಯಾದ ಸೂರ್ಯಕಾಂತಿ




ಮಧ್ವಾಚಾರ್ಯರು



ಲತೆ ಮತ್ತು ಲತಾ

ಹೂವನ್ನು ಹಿಡಿದಿದ್ದಾನೆ. ಹೊನ್ನಾವರದ ಹನುಮಂತ ದೇವಸ್ಥಾನದಲ್ಲಿ ಆಗರ್ಭ ಶ್ರೀಮಂತನೋರ್ವನು, ರುಮಾಲು, ಕೋಟು, ಶಲ್ಯವನ್ನು ಧರಿಸಿ ಬರಿಗೈಯಲ್ಲಿ ಕಮಲದ ಹೂ ಹಿಡಿದು, ಯಾರಿಗೋ ಬೀಳ್ಕೊಡುವಂತೆ ಎಡಗೈ ಎತ್ತಿ ಹಿಡಿದಿದ್ದಾನೆ. ಅವನ ಬಲ ಭುಜದ ಮೇಲೆ ದೇಟು ಇದ್ದ ಹೂ ಒಂದಿದೆ. ಶಿರಾಲಿಯಲ್ಲಿ ಸುಸಜ್ಜಿತನಾದ ರಸಿಕನೋರ್ವನು ಬಲಗೈಯಲ್ಲಿ ಸೇವಂತಿ ಹೂ ಹಿಡಿದಿದ್ದಾನೆ. ತನ್ನ ಪ್ರಿಯತಮೆಯನ್ನು ಕಾಣಲು ಆತನು ಹೊರಟಿದ್ದರೆ ಆಶ್ಚರ್ಯವಿಲ್ಲ. ಅವರ್ಸಾದ ನಾಗೇಶ ಶೆಣ್ವೈ ಅವರ ಮನೆಯ ಚಿತ್ರದಲ್ಲಿ ಗೃಹಸ್ಥರ ಕೋಟಿಗೆ ಹೂವೊಂದನ್ನು ಸಿಕ್ಕಿಸಲಾಗಿದೆ.

ಇಂದಿನಂತೆ ಹಿಂದೆಯೂ ಕುಂಡಗಳಲ್ಲಿ ಗಿಡಗಳನ್ನು ಬೆಳೆಸುವ ಪದ್ಧತಿ ಇತ್ತೆಂದು ಈ ಚಿತ್ರಗಳಿಂದ ಮನವರಿಕೆ ಮಾಡಿಕೊಳ್ಳಬಹುದು. ಶಿರಾಲಿಯಲ್ಲಿ ಖಡ್ಗ ಹೊಂದಿದ ಸದ್ಗೃಹಸ್ಥನ ಚಿತ್ರದ ಹಿನ್ನೆಲೆಯಲ್ಲಿ ಕುಂಡದಲ್ಲಿ ಬೆಳೆಸಿದ ಹೂಗಿಡವೊಂದಿದೆ. ಅಲ್ಲಿಯ ಇನ್ನೂ ಅನೇಕ ಅಂಕಣಗಳಲ್ಲಿ ಎರಡು–ಮೂರು ಸ್ಥಳಾಂತರಿಸಬಹುದಾದಂತಹ ಸಸ್ಯಗಳನ್ನು ಬಳಸಲಾಗಿದೆ. ಸಹಸ್ರಾರ್ಜುನನ ಇಪ್ಪತ್ನಾಲ್ಕು ಕೈಗಳು ಚೌಕಟ್ಟಿನ ತುಂಬ ಹರಡಿಕೊಂಡಿದ್ದರಿಂದ ಕುಂಡದಲ್ಲಿಯ ಗಿಡಗಳು ಕುಬ್ಜವಾಗಿವೆ. ಪರತಕಾಳ ಮಠದ ಹೊರಗೋಡೆಯ ಅಲಂಕಾರಕ್ಕಾಗಿ ಅರೆವರ್ತುಲ, ಕಾಲು ವರ್ತುಲಗಳೊಂದಿಗೆ, ಕುಂಡದಲ್ಲಿ ಬೆಳೆದ ಹೂ ಗಿಡಗಳನ್ನು ಯಥೇಷ್ಟವಾಗಿ ಬಳಸಲಾಗಿದೆ. ಇದರಂತೆ ಸಿರ್ಸಿಯಲ್ಲಿಯೂ ಇಂತಹ ಅಲಂಕರಣವನ್ನು ನೋಡಬಹುದಾಗಿದೆ. ಹೊಸಾಡದಲ್ಲಿ ಹನುಮಾನನು ಸೀತೆಯ ದರ್ಶನ ಪಡೆಯುವ ಅಶೋಕವನದ ದೃಶ್ಯದಲ್ಲೂ ಹಲವಾರು ಕುಂಡಗಳಲ್ಲಿ ಬೆಳೆಸಿದ ಸಸ್ಯಗಳನ್ನು ಗುರುತಿಸಬಹುದಾಗಿದೆ.



ವೃಕ್ಷಗಳಿಗೆ ಆದ್ಯ ಸ್ಥಾನ ಕೊಡದಿದ್ದರೂ ಅವನ್ನು ಅಲಕ್ಷಿಸಿಲ್ಲ. ಕುಮಟೆಯ ಕಾಮಧೇನುವಿಗೆ ಹಿನ್ನೆಲೆಯಾಗಿ ಕರಾವಳಿಯಲ್ಲಿ ವಿಪುಲವಾಗಿರುವ ಕೊಂಕಣಿಗರ ಕಲ್ಪವೃಕ್ಷವೆಂದು ಪರಿಗಣಿಸಲ್ಪಡುವ ತೆಂಗಿನಮರ, ಮನಸ್ವೀ ಬೆಳೆದು ನಿಂತಿದೆ. ಹೊನ್ನಾವರದಲ್ಲಿ ಭಸ್ಮಾಸುರ-ಮೋಹಿನಿಯರು ಆಶ್ರಯ ಪಡೆದ ಅಶ್ವತ್ಥ ಮರಕ್ಕೆ ಕಟ್ಟೆಯನ್ನು ಕಟ್ಟಲಾಗಿದೆ. ಅನಂತಶಯನ ಚಿತ್ರದಲ್ಲಿ ತೆನೆಬಿಟ್ಟ ಎರಡು ಟಿಸಿಲುಗಳಿಂದಲೇ ವೃಕ್ಷದ ಅಸ್ತಿತ್ವವನ್ನು ಸೂಚಿಸಲಾಗಿದೆ. ಶ್ರೀರಾಮಚಂದ್ರನು ಯುದ್ಧಕ್ಕೆ ಹೊರಟ ಪರಿಸರವು ದಟ್ಟಕಾಡಿನಿಂದ ಆವರಿಸಿದೆ, ಎಂದು ಸೂಚಿಸಲು ಜೋಡಿ ವೃಕ್ಷವನ್ನು ಸೇರಿಸಲಾಗಿದೆ. ಪ್ರಥಮದರ್ಶನಕ್ಕೆ ಇದೆಂಥ ಬಾಲಿಶ ಚಿತ್ರ! ಎಂದು ಅನಿಸಿದರೂ ಅವನ್ನು ಅಭ್ಯಸಿಸಿದಾಗ, ಕೆಲವೇ ಪ್ರಬುದ್ಧ ರೇಖೆಗಳಿಂದ, ಪರಿಪೂರ್ಣ ವೃಕ್ಷವೊಂದನ್ನು ರಚಿಸಲಾಗಿದೆ ಎಂದು ಅನಿಸದಿರದು. ಕೇವಲ ಎರಡು ದಶಕಗಳ ಹಿಂದೆ ಹೆಂಗಳೆಯರು ಬಿಡುವಿನ ವೇಳೆಯಲ್ಲಿ ಉರುಟು ಬಟ್ಟೆಯ ಮೇಲೆ ಬಣ್ಣದ ನೂಲಿನಿಂದ ಇಂಥ ವೃಕ್ಷ, ಪುಷ್ಪಾಲಂಕಾರಗಳನ್ನು ಕಸೂತಿಸಿ ಗೃಹಾಲಂಕಾರಕ್ಕೆ ಬಳಸುತ್ತಿದ್ದರು, ಎಂಬುದನ್ನು ಸ್ಮರಿಸಿಕೊಳ್ಳಬಹುದು. ಹೆಗಡೆಯಲ್ಲಿ ಪ್ರತಿಷ್ಠಿತನೋರ್ವನು ವೃಕ್ಷಕ್ಕೆ ವಂದಿಸುವ ಚಿತ್ರವಿದೆ. ರಾವಣನ ಅಂಕಣದಲ್ಲಿ ಅವನ ಹತ್ತು ಮುಖ, ಇಪ್ಪತ್ತು ಕೈಗಳಿಂದಾಗಿ, ವೃಕ್ಷವೊಂದು ತೀರ ಕಿರಿದಾಗಿ ಚಿತ್ರಿತವಾಗಿದೆ. ಇದರಿಂದಾಗಿ ಹಿಂದಿನವರಿಗೂ ಕುಬ್ಜ ಸಸ್ಯ (ಬೊನ್‌ಸೈ)ಗಳನ್ನು ಬೆಳೆಸುವ ವೈಜ್ಞಾನಿಕ ಪದ್ಧತಿಯ ಅರಿವಿತ್ತು, ಎಂದು ಅನಿಸದಿರದು.





ದ್ವಾರಪಾಲಕರು

9. ದ್ವಾರ ಪಾಲಕರು

ಕೊಂಕಣಿಗರ ದೇವಾಲಯಗಳಲ್ಲಿ ಬಾಗಿಲುಗಳ ಎಡಬಲದಲ್ಲಿ ದ್ವಾರ ಪಾಲಕರನ್ನು ಚಿತ್ರಿಸುವುದು ನಿಯಮ. ಮಹಾದ್ವಾರಗಳಷ್ಟೇ ಅಲ್ಲದೇ ಕಿರುಬಾಗಿಲು, ಕಳ್ಳಬಾಗಿಲು, ತೋರಬಾಗಿಲುಗಳನ್ನು ಕಾಯುವುದಕ್ಕಾಗಿ ಇಂತಹ ದ್ವಾರಪಾಲಕರನ್ನು ಶಾಶ್ವತವಾಗಿ ನಿಲ್ಲಿಸಿರುತ್ತಾರೆ. ಚಿತ್ರಿಸಿದ ಗಿಡಮರಗಳ ಇಕ್ಕೆಲದಲ್ಲಿ ಕಾವಲುಗಾರರು ಇರುವುದೂ ಉಂಟು. ಗರ್ಭಗುಡಿ, ಎರಡು ಅಂತಸ್ತುಗಳದ್ದಾದರೆ, ಅದರ ನಾಲ್ಕು ಗೋಡೆಗಳನ್ನೂ ಕಾವಲುಗಾರರು ಕಾಯುತ್ತಿರುತ್ತಾರೆ. ಖಾಸಗಿ ಕಟ್ಟಡದ ಹೊರ ಕಂಬಗಳ ಮೇಲೂ ಇಂತಹ ದ್ವಾರಪಾಲಕರನ್ನು, ಕಾವಲುಗಾರರನ್ನು ಕಾಣಬಹುದು. ಅವರು ದೇವದೂತರಿರಬಹುದು, ಭಕ್ತರಿರಬಹುದು. ಇಲ್ಲವೇ ಸಮಕಾಲೀನ ವ್ಯಕ್ತಿಗಳಿರಬಹುದು. ಇವರಲ್ಲಿ ಬಹುಸಂಖ್ಯಾತರು ಪುರುಷರಿದ್ದರೂ ಕೆಲವೆಡೆ ಹೆಂಗಳೆಯರೂ ಇಲ್ಲದಿಲ್ಲ.

ಶ್ರೀರಾಮನ ಬಂಟ ಹನುಮಂತ, ಮತ್ತು ಶ್ರೀವಿಷ್ಣುವಿನ ವಾಹನ, ಗರುಡರು, ದೇಗುಲ ದ್ವಾರಗಳನ್ನು ಕಾಯುತ್ತಿರುವುದು ತೀರ ಸಾಮಾನ್ಯ. ಬಿಚೋಲಿಯಲ್ಲಿ ಎಡ ಬಲದಲ್ಲಿ ಮಾರುತಿಯನ್ನೇ ಚಿತ್ರಿಸಿದ್ದಾರೆ. ಎಡಗೈಯಲ್ಲಿ ಧ್ವಜ ಹಿಡಿದು ಬಲಗೈಯಲ್ಲಿದ್ದ ಗದೆಯನ್ನು ತಿರುವುತ್ತ ವೈರಿಯನ್ನು ಸದೆಬಡೆಯಲು ಹೊರಟ ಭಂಗಿ ಮೋಜಿನದಾಗಿದೆ. ಬಳಲೆ ಗ್ರಾಮದ ಗುಡಿಯಲ್ಲಿ ಈ ನರವಾಹನರು ಈಜಿಪ್ತದ ಮಮ್ಮಿಗಳನ್ನು ನೆನಪಿಸುತ್ತಾರೆ. ಸ್ಥಳದ ಅಭಾವದಿಂದಲೋ, ಕಲೆಯು ಕೊರತೆಯಿಂದಲೋ ಅಂಗಾಂಗಳೆಲ್ಲ ಮುದುಡಿಕೊಂಡಂತೆ ಭಾಸವಾಗುತ್ತದೆ. ಅವರ್ಸಾದ ಹನುಮಾನನು ಲಂಕಾ ದಹನಕ್ಕಾಗಿ ಹಾರುತ್ತಿದ್ದಾನೆಯೇ ಎಂದು ಭಾಸವಾದರೆ, ಸರ್ಪವನ್ನು ನಿಯಂತ್ರಿಸಲಾಗದ ಗರುಡನು, ಅದರ ಕತ್ತು ಹಿಸುಕಿ ಕೊಲ್ಲುವ ಯತ್ನದಲ್ಲಿ ಇದ್ದಾನೆಯೇ? ಎಂಬ ಭ್ರಮೆ ಹುಟ್ಟಿಸುತ್ತದೆ. ಮಾಜಾಳಿಯ ಮಾರುತಿ, ಬಲಗೈಯಲ್ಲಿ ಗದೆ, ಎಡಗೈಯಲ್ಲಿ ಬಾಲವನ್ನು ಎತ್ತಿಹಿಡಿದು, ಕಾದಾಟಕ್ಕೆ ಹೊರಟರೆ, ಗರುಡನು ಸರ್ಪವನ್ನೇ ಆಯುಧವನ್ನಾಗಿ ಮಾಡಿಕೊಂಡಂತಿದೆ! ಹೊನ್ನಾವರದ ವಾನರ ಮುಖಂಡನು, ಕೋಪದಿಂದ ಮುಖವುಬ್ಬಿಸಿಕೊಂಡಂತಿದ್ದರೆ, ಗರುಡನು, ಎರಡು ಸರ್ಪಗಳನ್ನು ನಿಯಂತ್ರಿಸುತ್ತ ಮೊಣಕಾಲೂರಿ ಕುಳಿತಿದ್ದಾನೆ. ಶಿರಾಲಿಯ ರಾಮಭಕ್ತನು, ರಾಕ್ಷಸನಿಗೆ ಗದಾಪ್ರಯೋಗ ತೋರಿಸಿದರೆ, ಗರುಡನು, ನಾಗನನ್ನೇ ಗದೆಯಂತೆ ಹಿಡಿದಿದ್ದಾನೆ. ಕುಮಟೆಯಲ್ಲಿ ಹನುಮಾನನು, ನೆಲಕ್ಕುರುಳಿದ ದೈತ್ಯನನ್ನು ತುಳಿಯುತ್ತ ಛೀಳಿಡುತ್ತಿದ್ದಾನೆ. ಅದರಂತೆ ಗರುಡನು, ರಾಕ್ಷಸನ ಕೇಶರಾಶಿಯನ್ನು ಎಡಗೈಯಲ್ಲಿ ಹಿಡಿದು ಅವನನ್ನು ಹಣ್ಣು ಮಾಡುತ್ತಿದ್ದಾನೆ.



ಕಾವಲುಗಾರರು

ಸೂರ್ಯಚಂದ್ರರನ್ನೇ ದ್ವಾರಪಾಲಕರನ್ನಾಗಿ ನೇಮಿಸಿಕೊಂಡ ಶ್ರೇಯಸ್ಸು, ಕುಮಟಾದ ನಾರಾಯಣೀ ದೇವಸ್ಥಾನಕ್ಕೆ ಸಲ್ಲಬೇಕು. ಹೆಬ್ಬಾಗಿಲಿನ ಬಲಭಾಗದ ಗೋಡೆಯನ್ನು ಭವ್ಯವಾದ ಸೂರ್ಯಮಂಡಲ, ಅಲಂಕರಿಸಿದೆ. ಸಪ್ತ ಅಶ್ವಗಳು ಎಳೆಯುತ್ತಿರುವ ಅಗ್ನಿರಥವು ವಾಯುವೇಗದಿಂದ ಓಡುವುದನ್ನು ಸಾರಥಿಯು, ನಿಯಂತ್ರಿಸಲು ಸರ್ವಪ್ರಯತ್ನ ನಡೆಸಿದ್ದಾನೆ. ಚತುರ್ಭುಜದ ಸೂರ್ಯದೇವನು ಪ್ರಸನ್ನವದನನಾಗಿ, ಜಗತ್ತಿನ ಆಗು-ಹೋಗುಗಳನ್ನು ವೀಕ್ಷಿಸುತ್ತಿದ್ದಾನೆ. ನೋಡಿದಷ್ಟು ಇನ್ನೂ ನೋಡಬೇಕೆಂದೆನಿಸುವ ಸುಂದರ ಚಿತ್ರ, ಮೈಮರೆತು ವೀಕ್ಷಿಸುತ್ತಿದ್ದಾಗ, ಸೂರ್ಯದೇವನೇ ಸಹ್ಯಾದ್ರಿ ಪರ್ವತಾವಳಿಯನ್ನು ಹಂತಹಂತವಾಗಿ ಹತ್ತಿ ಬರುತ್ತಿದ್ದಂತೆ ಭಾಸವಾಗುತ್ತದೆ. ಇಂಥ ಅಮೋಘ ಚಿತ್ರ ರಚಿಸಿದ ಅಜ್ಞಾತ ಕಲಾಕಾರನ ಬಾಳು ಧನ್ಯ! ಎಡಗೋಡೆಯಲ್ಲಿ ಚಂದ್ರಮಂಡಲದ ಚಿತ್ರವಿದೆ. ಇದರಲ್ಲಿ ಹುಣ್ಣಿಮೆಯ ಬೆಳದಿಂಗಳಿನಂತೆ, ಎಲ್ಲವೂ ಪ್ರಶಾಂತವಾಗಿದೆ. ರಥವನ್ನು ಎಳೆಯುವ ಐದು ಕುದುರೆಗಳಿಗೆ ನಾಗಾಲೋಟ ಹಾಕಿ ಗುರಿಮುಟ್ಟಲೇ ಬೇಕು, ಎನ್ನುವ ತವಕ ಇಲ್ಲ. ಸಾರಥಿಗೆ ಚಂದಿರನಿಂದ ಬೆನ್ನು ತಟ್ಟಿಸಿಕೊಳ್ಳುವ ಹಂಬಲವಿಲ್ಲ. ಪ್ರೇಮಿಗಳಿಗೆ ಕಾಮೋದ್ರೇಕವಾಗುವಂತೆ, ಗಗನ ಮಂಡಲವೆಲ್ಲ ಹಾಲು ಚೆಲ್ಲಿದಂತೆ ಬೆಳದಿಂಗಳಿನಿಂದ ತುಂಬಿ ತುಳುಕುತ್ತಿದೆ. ಕಾವಿ ಕಲಾಕಾರರದು ಅದೆಂತಹ ಕಲ್ಪನಾಶಕ್ತಿ!

ಸಮಕಾಲೀನ ದ್ವಾರಪಾಲಕರ ಚಿತ್ರಗಳಿಗೂ ಏನೇನೂ ಕೊರತೆಯಿಲ್ಲ. ಅವರ್ಸಾದವರು, ರಸಿಕ ಶಿಖಾಮಣಿಗಳನ್ನು ಕಾವಲುಗಾರರನ್ನಾಗಿ ನೇಮಿಸಿಕೊಂಡಂತೆ ಇದೆ. ಬಲಗಡೆಯವನು ಗೂರ್ಖರನ್ನು ನಾಚಿಸುವಂಥ ಸಮವಸ್ತ್ರ ತೊಟ್ಟು ಸೈನಿಕ ಶಿಸ್ತಿನಿಂದ ನಿಂತಿದ್ದಾನೆ. ಬಲಗೈಯಲ್ಲಿ ಹದವಾದ ದೊಣ್ಣೆಯನ್ನು ಆಯುಧವಾಗಿ ಹಿಡಿದಿದ್ದಾನೆ. ಎಡಗಡೆಯವನು ಬಹಳವಾಗಿ ಸರದಾರಜಿಯನ್ನು ಹೋಲುತ್ತಿದ್ದಾನೆ. ತಲೆಗೆ ಸುತ್ತಿಕೊಂಡ ರುಮಾಲಿನ ಒಂದು ಅಂಚನ್ನು ಭುಜದ ಮೇಲಿನಿಂದ ಎದೆಯ ಮೇಲೆ ಇಳಿಬಿಟ್ಟಿದ್ದಾನೆ. ಎಡಗೈಯಲ್ಲಿ ಮೂರಡಿಯ ಖಡ್ಗ ಹಿಡಿದಿದ್ದಾನೆ. ಕಾವಲುಗಾರನು ತಲೆಗೆ ಜೈಪುರಿ ಮಾದರಿಯ ರುಮಾಲು ಸುತ್ತಿಕೊಂಡು ಮೊಣಕಾಲಿನವರೆಗೆ ಬರುವ ಕೋಟು ಧರಿಸಿದ್ದಾನೆ. ಜೊತೆಗೆ ಚೂಡಿದಾರದಂಥ ಪಾಯಜಾಮವನ್ನು ಬಳಸಿಕೊಂಡಿದ್ದಾನೆ. ಅವನಿಗಿಂತ ಉದ್ದವಾದ ದಂಡವನ್ನು ಎರಡೂ ಕೈಯಲ್ಲಿ ಹಿಡಿದಿದ್ದಾನೆ. ಇನ್ನೊಬ್ಬ ಕಾವಲುಗಾರನು ಬ್ರಿಟಿಷರ ಕಾಲದ ಪೋಲೀಸರನ್ನು ನೆನಪಿಗೆ ತರುವ ವೇಷಭೂಷಣ ತೊಟ್ಟಿದ್ದಾನೆ. ಪರ್ವತ ಶಿಖರದಂತೆ ಎತ್ತರದ ಟೋಪಿಯ ಸುತ್ತಲೂ ರುಮಾಲು ಸುತ್ತಿದ್ದಾನೆ. ಉದ್ದ ತೋಳಿನ ನಿಲುವಂಗಿಯ ಮೇಲೆ ಸೊಂಟಕ್ಕೆ ಬೆಲ್ಟು ಬಿಗಿದುಕೊಂಡಿದ್ದಾನೆ. ಗೀರುಗಳಿರುವ ಅರ್ಧ ಪ್ಯಾಂಟು ತೊಟ್ಟಿದ್ದಾನೆ. ಬಲಗೈಯಲ್ಲಿ ಲಾಠಿ, ಎಡಗೈಯಲ್ಲಿ ಚಾಕುವಿನಂತಹ ಹರಿತವಾದ ಆಯುಧ ಹಿಡಿದಿದ್ದಾನೆ. ಅವರ್ಸಾದ ನಾಗೇಶ್ ಶೆಣೈರ ಗೃಹದಲ್ಲಿಯೂ ಇಂಥ ಸಶಸ್ತ್ರ ಕಾವಲುಗಾರನ ಚಿತ್ರವಿದೆ. ಅವನು ಮೀಸೆ ಬೆಳೆಸಿಕೊಂಡಿದ್ದಾನಲ್ಲದೇ ಬಾಯೊನೆಟ್ ತಗುಲಿಸಿದ ಬಂದೂಕನ್ನು ಬಲಭುಜಕ್ಕೇರಿಸಿದ್ದಾನೆ. ಈ ಮನೆಯಲ್ಲಿ ಇನ್ನೂ ಅನೇಕ ಶಸ್ತ್ರಧಾರಿಗಳ ಚಿತ್ರಗಳಿವೆ. ಆದರೆ ಅವರು ದ್ವಾರಪಾಲಕ ಅಥವಾ ಕಾವಲುಗಾರರಾಗಿರದೇ ಊರ



ಇನ್ನೊಬ್ಬ ದ್ವಾರಪಾಲಕ

ಪ್ರತಿಷ್ಠಿತರಾಗಿರಬೇಕು, ಅನಿಸುತ್ತದೆ. ಅವರೆಲ್ಲ ಬೆಲೆಬಾಳುವ, ಕುಸುರಿನ ಕೆಲಸವಿರುವ ಬಟ್ಟೆ-ಬರೆಗಳನ್ನು ಧರಿಸಿ, ಪಾದರಕ್ಷೆಗಳನ್ನು ಮೆಟ್ಟಿದ್ದಾರೆ. ಕೈಯಲ್ಲಿ ಹಿಡಿದಿರುವ ಖಡ್ಗ, ಅವರ ಶೌರ್ಯದ ಅಥವಾ ಪ್ರತಿಷ್ಠೆಯ ಸಂಕೇತವಿರಬಹುದು. ಬರ್ಗಿಯ ಕಾವಲುಗಾರನು ಬಲಗೈಯಲ್ಲಿ ಚಾಬೂಕು ಹಿಡಿದಿದ್ದಾನೆ.

ಗರ್ಭಗುಡಿಯ ಮೇಲಿನ ಅಂತಸ್ತಿನಲ್ಲಿ ಚಿತ್ರಿತವಾದ ಆಯುಧಧಾರಿಗಳನ್ನು ದ್ವಾರಪಾಲಕರಿಂದ ಸುಲಭವಾಗಿ ಪ್ರತ್ಯೇಕಿಸಬಹುದು. ಇವರು ವರ್ತುಲಾಕಾರದ ಜಾಮಿತಿ ಚಿತ್ರಗಳ ಎಡಬಲದಲ್ಲಿ ಚಿತ್ರಿತವಾಗಿರುತ್ತಾರೆ. ಬಾಳೆಗದ್ದೆಯಲ್ಲಿ ಸರ್ಕಸ್ಸಿನ ಹಾಸ್ಯಗಾರರ ಟೋಪಿ ಧರಿಸಿ, ಕೈಯಲ್ಲಿ ದೊಣ್ಣೆ ಹಿಡಿದು, "ತಾಕತ್ತಿದ್ದರೆ ಬಾ, ಸೆಣಸಾಟಕ್ಕೆ ತಯ್ಯಾರ್!" ಎಂದು ಆಹ್ವಾನ ಕೊಡುವಂತೆ ಭಾಸವಾಗುತ್ತದೆ. ಇನ್ನೊಂದು ಗೋಡೆಯ ಮೇಲೆ ಕೋಡಂಗಿಯ ವೇಷಭೂಷಣದಲ್ಲಿದ್ದವ, ಎತ್ತಿದ ಕೈಯಲ್ಲಿ ಖಡ್ಗ ಹಿಡಿದು ದ್ವಂದ್ವಕ್ಕೆ ಕರೆ ಕೊಡುವಂತೆ ಚಿತ್ರಿತವಾಗಿದ್ದಾರೆ. ಬೀಳಗಿಯಲ್ಲಿ ತಲೆಗೆ ಎತ್ತರದ ಪೇಟಾ ಸುತ್ತಿ, ಬಲಗೈಯಲ್ಲಿ ಕೋವಿ, ಎಡಗೈಯಲ್ಲಿ ಕಠಾರಿ ಹೊಂದಿದ ವ್ಯಕ್ತಿ ರೂಪಿತನಾಗಿದ್ದಾನೆ. ಖಾಸಗಿ ಕಟ್ಟಡಗಳ ಕಂಬಗಳ ಮೇಲೆಯೂ ಇಂಥ ಕಾವಲುಗಾರರನ್ನು ಕಾಣಬಹುದಾಗಿದೆ. ಬನವಾಸಿಯಲ್ಲಿ ಅತಿ ಪುರಾತನದ್ದು ಎನ್ನಬಹುದಾದಂತಹ ಕಾವಲುಗಾರನ ಚಿತ್ರ ಒಂದಿದೆ. ಇದರ ವೈಶಿಷ್ಟ್ಯವೆಂದರೆ ಚಿತ್ರದ ಹಿನ್ನೆಲೆಯಾಗಿ ಕಾವಿಬಣ್ಣ ಇಟ್ಟು, ಕೊರೆದು ರಚಿಸಿದ ಕಾವಲುಗಾರನ ಚಿತ್ರ ಶ್ವೇತವರ್ಣದ್ದಾಗಿದೆ. ಅವನು ಎತ್ತರದ ಟೋಪಿ ಧರಿಸಿ, ಕಂಠದಲ್ಲಿ ಹಾರ ಧರಿಸಿ ಧೋತರ ಉಟ್ಟಿದ್ದಾನೆ. ಕೈಯಲ್ಲಿ ಗದೆಯನ್ನು ಹೋಲುವ ಆಯುಧ ಹಿಡಿದಿದ್ದಾನೆ. ಈ ಚಿತ್ರದ ಮೇಲೆ ಬೌದ್ಧ ಚಿತ್ರಕಾರರ ವರ್ಚಸ್ಸು ಬಿದ್ದಂತೆ ಭಾಸವಾಗುತ್ತದೆ.

ಕರಾವಳಿಯಲ್ಲಿ ಕುದುರೆಗಳ ಬಳಕೆ ಇರದಿದ್ದರೂ, ಹಲವಾರು ಯೋಧರು, ಸೈನಿಕರು, ಸರದಾರರು, ಅಶ್ವಾರೋಹಿಗಳಾಗಿ ಚಿತ್ರಿತವಾಗಿದ್ದಾರೆ. ಬಹುಶಃ ವಿಜಯನಗರದ ಆಳರಸರು ತಮ್ಮ ಸೈನ್ಯಕ್ಕೆ ಬೇಕಾಗುವ ಕುದುರೆಗಳನ್ನು ಅರಬಸ್ತಾನದಿಂದ ಕರಾವಳಿಯ ಈ ಬಂದರುಗಳ ಮೂಲಕವೇ ಆಮದು ಮಾಡಿಕೊಳ್ಳಲಾರಂಭಿಸಿದ ಮೇಲೆ ಈ ಪರಂಪರೆ ಬೆಳೆದುಬಂದಿರಬೇಕು. ಭಟ್ಕಳದ ಕೊಂಕಣಿ ವರ್ತಕರು ಕುದುರೆಗಳ ವ್ಯಾಪಾರದಲ್ಲಿ ತೊಡಗಿ ಧನಿಕರಾಗಿದ್ದರೆಂದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ. ಅಂಕೋಲೆಯ ಸವಾರನು, ಕೈಯಲ್ಲಿ ಚಾವಟಿಗೆ ಹಿಡಿದು, ವಾಯುವೇಗದಿಂದ ಕುದುರೆಯುನ್ನು ಓಡಿಸುವಂತೆ ಚಿತ್ರಿತವಾಗಿದೆ. ಎಡಬಲದ ಅಶ್ವಾರೋಹಿಗಳು ಅಮೇರಿಕನ್‌ರಿರಬಹುದೇ? ಎಂದು ಭ್ರಮೆ ಹುಟ್ಟಿಸುವಂತೆ ಅಲಂಕರಿಸಿಕೊಂಡಿದ್ದಾರೆ. ವಿಚಿತ್ರವೆನಿಸುವ ಶಿರೋಲಂಕಾರ, ಹುಲುಸಾಗಿ ಬೆಳೆಸಿದ ಮೀಸೆ, ಮೈಗಂಟುವ ಕೋಟು, ಪ್ಯಾಂಟುಗಳ ವೇಷ. ಕುದುರೆಗಳನ್ನೂ ಸದಭಿರುಚಿಯಿಂದ ಅಲಂಕರಿಸಲಾಗಿದೆ. ಬಾಳೆಗದ್ದೆಯ ಎಡ ಕಾವಲುಗಾರ ಕುದುರೆ ಸವಾರಿ ಮಾಡಿದರೆ, ಬಲಬದಿಯವನು ಆನೆಯ ಸವಾರಿ ಮಾಡುತ್ತಿದ್ದಾನೆ.



ಅಶ್ವಾರೋಹಿ

ಅಪರೂಪಕ್ಕೆ ಹೆಂಗಳೆಯರೂ ದ್ವಾರಪಾಲಕಿಯ ಕರ್ತವ್ಯ ನಿರ್ವಹಿಸುವುದು ಕಂಡುಬರುತ್ತದೆ. ಹೊನ್ನಾವರದಲ್ಲಿ ಕಿನ್ನರಿಯರು ಈ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಇವರಿಗೆ ಪಕ್ಷಿಯ ಶರೀರವಿದ್ದರೂ ಕಟಿಯ ಮೇಲ್ಭಾಗ ಸ್ತ್ರೀಯರದು. ಮುಖಮಂಡಲದ ಸೌಂದರ್ಯ ಹೆಚ್ಚಿಸುವಂತೆ, ಎರಡು ವಿಧದ ಮೂಗುತಿ, ಹೂವಿನ ಆಕಾರದ ಬೆಂಡೋಲೆ ಧರಿಸಿದ್ದಾರೆ. ಉದ್ದ ತೋಳಿನ ರವಕೆ, ಉಬ್ಬಿದೆದೆಯನ್ನು ಪ್ರೇಕ್ಷಕರಿಂದ ಮರೆಮಾಡಲು ಅಸಮರ್ಥವಾಗಿದೆ. ಅವುಗಳ ಮೇಲೆ ಹರಿಯಬಿಟ್ಟ ಹೂವಿನ ಹಾರಗಳಿಂದ ಅವರ ಹೆಣ್ಣುತನ ಸ್ಫುಟಗೊಂಡಿದೆ. ಒಂದು ಕೈಯಲ್ಲಿ ತಂತಿ ವಾದ್ಯ ಹಿಡಿದು, ಇನ್ನೊಂದರಿಂದ ಅದನ್ನು ನುಡಿಸುತ್ತಿರುವಂತೆ ಚಿತ್ರಿಸಲಾಗಿದೆ. ಬೀಳಗಿಯಲ್ಲಿ ಸಮಕಾಲೀನ ಸ್ತ್ರೀಯರೇ ದ್ವಾರಪಾಲಕಿಯರಾಗಿದ್ದಾರೆ. ಮೊನ್ನೆ ಮೊನ್ನೆಯವರೆಗೆ ಕರಾವಳಿಯ ದೇವಾಲಯಗಳಲ್ಲಿ ಹೆಂಗಳೆಯರೇ ದೇವರಿಗೆ ಚಾಮರ ಬೀಸುತ್ತಿದ್ದರೆಂದು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.





[illegible] ಶಾರದಾಂಬೆ ದೇವಾಲಯ, [illegible]



ರಾಮಚಂದ್ರಪುರ, [illegible]

10. ಆದಿ ಬೆಳವಣಿಗೆ

ಕಾವಿ ಕಲೆಯ ಆದಿಯನ್ನು ಹುಡುಕುವುದು, ಕೊಂಕಣಿಗರ ಮೂಲವನ್ನು ಪತ್ತೆ ಹಚ್ಚುವಷ್ಟೇ ಗಡಚಿನದು! ಇಪ್ಪತ್ತೊಂದು ಬಾರಿ ಕ್ಷತ್ರಿಯರನ್ನು ಮುಗಿಸಿದ ಪಾಪಪರಿಹಾರದ ತಪಸ್ಸಿಗಾಗಿ ಪರಶುರಾಮನು ಗೋಮಂತಕ (ಗೋವಾ)ಕ್ಕೆ ಆಗಮಿಸಿದಾಗ, ಪ್ರಾರಂಭದ ಯಜ್ಞ ನಿರ್ವಹಣೆಯಲ್ಲಿ ಪರಿಣತ ಬ್ರಾಹ್ಮಣರಾರೂ ಸ್ಥಳೀಯವಾಗಿ ಸಿಗದಿದ್ದರಿಂದ, ಉತ್ತರ ಭಾರತದ ತ್ರಿಹೋತ್ರಪುರದಿಂದ ದಶಗೋತ್ರ ಬ್ರಾಹ್ಮಣರನ್ನು ಬರಮಾಡಿಕೊಳ್ಳಲಾಯಿತಂತೆ! ಈ ಬ್ರಾಹ್ಮಣರು ಪೆಡಣೆಂ ತಾಲ್ಲೂಕಿನ ಹರಮಲ್‌ದಲ್ಲಿ ಭಾರೀ ಯಜ್ಞ ಕೈಕೊಂಡರೆಂದೂ ಈ ಸಮಾರಂಭದ ಕುರುಹಾಗಿ ಅಲ್ಲಿರುವ ಬೂದಿಗುಡ್ಡ (ಭಸ್ಮಾ ಚೊ ಡೋಂಗರ)ವನ್ನು ಸ್ಥಾನೀಯರು ತೋರಿಸುತ್ತಾರೆ. ಮೂಲತಃ ಸರಸ್ವತಿ ನದಿಯ ತೀರದ ನಿವಾಸಿಗಳಾದ ಇವರು ಸಾರಸ್ವತರೆಂದು, ಇವರ ಇನ್ನೊಂದು ಶಾಖೆ ಗೌಡದೇಶ (ದಕ್ಷಿಣ ಬಂಗಾಲ)ದಿಂದ ಬಂದದ್ದರಿಂದ ಗೌಡ ಸಾರಸ್ವತರೆಂದು ಗುರುತಿಸಲ್ಪಡುತ್ತಾರೆ. ಬೇರೆ ಪ್ರದೇಶದಿಂದ ಬಂದವರಾದರೂ ಕೊಂಕಣ ಪ್ರದೇಶವನ್ನು ತಮ್ಮ ನಾಡನ್ನಾಗಿಸಿಕೊಂಡು ಕೊಂಕಣಿಗರೆಂದು ಅನ್ವರ್ಥಕನಾಮ ಪಡೆದರು. ಅವರ ಉದರ ನಿರ್ವಹಣೆಗೆ ಅರವತ್ತಾರು ಅಗ್ರಹಾರಗಳನ್ನು ಉಂಬಳಿಯಾಗಿ ನೀಡಲಾಯಿತು. ಬಹು ಸಂಖ್ಯಾತರು ಪೂಜೆ, ಸ್ವಾಧ್ಯಾಯ–ಅಧ್ಯಾಪನಗಳನ್ನು ವೃತ್ತಿಯಾಗಿಸಿಕೊಂಡರೆ, ಕೆಲವರು ಕೃಷಿ–ವ್ಯಾಪಾರಗಳಲ್ಲೂ ಆಸಕ್ತಿ ವಹಿಸಿದರು. ಇವರಲ್ಲಿ ಸಾಹಸಿಗರು ಪಶ್ಚಿಮ ಕರಾವಳಿಯಿಡಿಯಾಗಿ ಅಲ್ಲದೇ ದಕ್ಷಿಣ ಭಾರತದಲ್ಲೂ ನೆಲೆಸಿದರು. ಅಂತೆಯೇ ಮಧ್ವಾಚಾರ್ಯರು ಕ್ರಿ.ಶ. 1293ರಲ್ಲಿ ಮಂಜೇಶ್ವರದ ಶ್ರೀಮದನ್ನಂತೇಶ್ವರ ದೇವಾಲಯಕ್ಕೆ ಭೇಟಿಕೊಟ್ಟಾಗ, ಆದಾಗಲೇ ಕೊಂಕಣಿಗರು ಅಲ್ಲಿ ಬೀಡು ಬಿಟ್ಟಿದ್ದು ಕಂಡು ವಿಸ್ಮಯಪಡುವಂತಾಗಿತ್ತು.

ಉತ್ತರದಿಂದ ಆಗಮಿಸಿದ ಕೊಂಕಣಿಗರು ಬೇಗನೇ ಕರಾವಳಿಯ ಜೀವನಕ್ಕೆ ಒಗ್ಗಿಕೊಂಡುಬಿಟ್ಟರು. ಸ್ಥಾನೀಯ ದೇವತೆಗಳನ್ನು ತಂತಮ್ಮ ಕುಲದೇವರಾಗಿ ಸ್ವೀಕರಿಸಿ, ದೇವಾಲಯಗಳನ್ನು ಕಟ್ಟಿಸಿ ಧಾರ್ಮಿಕ ಜೀವನ ನಡೆಸಿದರು. ಅಂತೆಯೇ ಅವರ ದೇವತೆಗಳು ಶಾಂತಾದುರ್ಗಾ, ಮಂಗೇಶ (ಮಹಾನ್ ಗಿರೀಶ), ಮ್ಹಾಳಸಾ, ಮಹಾಲಸಾ, ನಾಗೇಶ, ರಾಮನಾಥ, ರವಳನಾಥ, ದಾಮೋದರ, ನರಸಿಂಹ, ಸಪ್ತಕೋಟೇಶ್ವರ, ಮಹಾಮಾಯಿ ಇತ್ಯಾದಿ. ಭಾರತದಾದ್ಯಂತ ಹಂಚಿ ಹೋದ ಕೊಂಕಣಿ ಜನಾಂಗದವರು ಈ ದೇವತೆಗಳ 'ಕುಳಾವಿ' (ಕುಲೋಪಾಸರು)ಗಳಾಗಿದ್ದಾರೆ.



ಲಕ್ಷ್ಮೀನಾರಾಯಣ ಮಹಾಮಾಯ ದೇವಾಲಯ, ಅಂಕೋಲ



ಮಾರಿಕಾಂಬ ದೇವಾಲಯ, ಸಿರಸಿ

ಕೊಂಕಿಣಿಗರು ತಂತಮ್ಮ ಗ್ರಾಮಗಳಲ್ಲಿ ಮರಕಲ್ಲುಗಳಿಂದಲೇ ಭವ್ಯವಾದ ದೇವಾಲಯಗಳನ್ನು ಕಟ್ಟಿಸಲಾರಂಭಿಸಿದರು. ಇವುಗಳ ವಾಸ್ತುಶಿಲ್ಪ ಆಗಲೇ ಅಲ್ಲಿದ್ದ ಪ್ರಾಚೀನ ಕಟ್ಟಡಗಳಿಂದ ಭಿನ್ನವಾಗಿರುವುದು ಸ್ವಾಭಾವಿಕವಾಗಿತ್ತು. ತಮ್ಮ ಸಂಸ್ಕತಿಗೆ, ಅಭಿರುಚಿಗೆ ತಕ್ಕಂತೆ ಹೊಸ ವಲಸಿಗರು ಕೊಂಕಣಿಗರು ಈ ಮಂದಿರಗಳನ್ನು ಕಾವಿ ಭಿತ್ತಿಚಿತ್ರಗಳಿಂದ ಅಲಂಕರಿಸಲಾರಂಭಿಸಿದರು. ಈ ಕಲೆಯನ್ನು ಅವರು ತಮ್ಮೊಂದಿಗೆ ಉತ್ತರ ಭಾರತದಿಂದ ತಂದರೋ ಅಥವಾ ಸ್ಥಾನೀಯವಾಗಿ ಪ್ರಚಲಿತವಿದ್ದುದಕ್ಕೇ ಪಕ್ವ ರೂಪ ನೀಡಿ ಬಳಸಿದರೋ ಎಂದು ಹೇಳುವುದು ಕಷ್ಟ. ಕೊಂಕಣಿಗರು ತಮ್ಮ ಮಾತೃಭಾಷೆಯಲ್ಲಿ ಸಾಕಷ್ಟು ಸಾಹಿತ್ಯ ಕೃತಿಗಳನ್ನು ರಚಿಸಿದರು. ಬರವಣಿಗೆ ವಾಚನಗಳಲ್ಲಿ ಏಕರೂಪತೆ ತರುವ ಸಲುವಾಗಿ ವ್ಯಾಕರಣದ ರಚನೆಯೂ ಆಯಿತು. ಕೊಂಕಣಿ, ಮರಾಠಿಯ ಉಪಭಾಷೆಯೆಂದು ಮಹಾರಾಷ್ಟ್ರದವರು ವಾದಿಸಿದರೂ, ಆ ಭಾಷೆಯಿಂದಲೇ ಮರಾಠಿ ಹುಟ್ಟಿಕೊಂಡಿರುವ ಸಾಧ್ಯತೆಗಳೇ ಹೆಚ್ಚು. ಮರಾಠಿಯ ಪ್ರಾಚೀನ ಗ್ರಂಥ, ಜ್ಞಾನೇಶ್ವರಿಯ ಭಾಷೆ ಬಹುಮಟ್ಟಿಗೆ ಕೊಂಕಣಿಯೇ ಆಗಿದೆ!

ಗೋಮಂತಕದ ಆಡಳಿತ ಕ್ರಿ.ಶ. 1312 ಮತ್ತು 1472ರಲ್ಲಿ ಧರ್ಮಾಂಧ ಮುಸಲ್ಮಾನರ ಕೈ ಸೇರಿದಾಗ ಶಾಂತಿಪ್ರಿಯ ಕೊಂಕಣಿಗರ ಅಸ್ತಿತ್ವಕ್ಕೇ ಸಂಚಕಾರ ಒದಗಿತು. ಸಾಲದ್ದಕ್ಕೆ ಪೋರ್ಚುಗೀಸರು ಕ್ರಿ.ಶ. 1510ರಲ್ಲಿ ಗೋವಾ ಪ್ರಾಂತವನ್ನು ಗೆದ್ದುಕೊಂಡು, ತಮ್ಮ ಪೂರ್ವ ದೇಶಗಳಲ್ಲಿಯ ವಸಾಹತುಗಳ ಪ್ರಧಾನ ಕಛೇರಿಯನ್ನಾಗಿ ಪರಿವರ್ತಿಸಿದರು. ಆಡಳಿತಗಾರರೊಂದಿಗೆ ಆಗಮಿಸಿದ ಕ್ರಿಶ್ಚಿಯನ್ ಧರ್ಮಾಧಿಕಾರಿಗಳು ಹಿಂದೂಗಳನ್ನು ಬಲಾತ್ಕಾರದಿಂದ ಧರ್ಮಾಂತರಗೊಳಿಸಲಾರಂಭಿಸಿದರು. ಕ್ರಿ.ಶ. 1540ರಲ್ಲಿ ದೇವಾಲಯಗಳನ್ನೆಲ್ಲ ಹಾಳುಗೆಡವಲು ಪೋರ್ತುಗಾಲದ ಸರಕಾರವು ಗೋವೆಯ ವಾಯಿಸ್‌ರಾಯನಿಗೆ ಅಧಿಕಾರವನ್ನು ನೀಡಿತು. 8 ವರ್ಷಗಳ ನಂತರ ಹೃದಯಹೀನ ಬಿಷಪ್ ಒಬ್ಬನು, ಕೊಂಕಣಿ ಗ್ರಂಥಗಳನ್ನೆಲ್ಲ ಸುಟ್ಟು ಬೂದಿ ಮಾಡಿಬಿಟ್ಟನು. ಅಲ್ಲಿಗೆ ಸಕಲ ಸಾಹಿತ್ಯ ರಾಶಿಯನ್ನು ಕಳೆದುಕೊಂಡು ಕೊಂಕಣಿ ಭಾಷೆ ಅನಾಥವಾಗಿ ಕೇವಲ ಆಡುಭಾಷೆಯಾಗಿ ಉಳಿಯಿತು. ಕ್ರಿ.ಶ. 1560ರ ಹೊತ್ತಿಗೆ ಕಡ್ಡಾಯವಾಗಿ ಕ್ರಿಶ್ಚಿಯನ್ ಮಾಡುವ ಕಾರ್ಯಕ್ರಮ ವ್ಯವಸ್ಥಿತವಾಗಿ ಪ್ರಾರಂಭವಾಗಿ ಕೊಂಕಣಿಗರು ಕಂಗೆಟ್ಟರು. ಮುಂದಿನ ಏಳು ವರ್ಷಗಳಲ್ಲಿ ಬಾರ್ದೆಝ್ (ಬಾರದೇಶ್) ಸಾಲ್‌ಸೆಟ್ (ಸಾಷ್ಟ) ತಾಲ್ಲೂಕುಗಳಲ್ಲಿಯ ಎಲ್ಲ ದೇವಾಲಯಗಳನ್ನು ಪೋರ್ಚುಗೀಸರು ನೆಲಸಮ ಮಾಡಿಬಿಟ್ಟರು. ಕುಠ್ಠಾಳಿ (ಕುಶಸ್ಥಲೀ)ಯಲ್ಲಿಯ ಮಂಗೇಶ ದೇವಸ್ಥಾನವನ್ನು ಕೆಡವಿ ಅದರ ಸ್ಥಾನದಲ್ಲಿ ಕೋರ್ಟಲಿಯಂ ಚರ್ಚ್ ವಿರಾಜಿಸುವಂತೆ ಮಾಡಿದರು. ಧರ್ಮಿಷ್ಠ ಕೊಂಕಣಿಗರೆಲ್ಲ ತಮ್ಮ ಇಷ್ಟ ದೇವರ ವಿಗ್ರಹಗಳೊಂದಿಗೆ ಸ್ವಾದಿ ಮನೆತನದ ಆಡಳಿತಕ್ಕೆ ಒಳಪಟ್ಟಿದ್ದ ಪೊಂಡಾ, ಬಿಚೋಲಿಂ, ಕಾಣಕೋಣಗಳಿಗೆ ಧಾವಿಸಿ ಅಲ್ಲಿ ದೇವಾಲಯಗಳನ್ನು ಕಟ್ಟಿಕೊಂಡರು. ಪ್ರಿಯೋಳದಲ್ಲಿ ಮಂಗೇಶ ದೇವಸ್ಥಾನ ಕಟ್ಟಿಸಿದರೆ ಅಂತ್ರುಝ್‌ದಲ್ಲಿ ಶಾಂತಾ ದುರ್ಗೆಗೆ ನೆಲೆ ಕಲ್ಪಿಸಲಾಯಿತು. ಆ ಬಳಿಕ ಪೋರ್ಚುಗೀಸರು ಈ ಪ್ರದೇಶವನ್ನು ಗೆದ್ದುಕೊಂಡರು. ಎಲ್ಲ ಧಾರ್ಮಿಕ ಕಾರ್ಯಕ್ರಮಗಳು ದೇವಸ್ಥಾನ ಬಿಟ್ಟು, ಸಾರ್ವಜನಿಕ ಸ್ಥಳಗಳಲ್ಲಿ ನಡೆಯಕೂಡದು, ಎಂದು ಕಟ್ಟಪ್ಪಣೆ ಮಾಡಿದ್ದರಿಂದ,



ಅಡಗೂರ ಮನೆಯೊಂದರಲ್ಲಿ



ಹೊವ್ವಪಾದ ಬಳಿಯ ಮನೆಯೊಂದರಲ್ಲಿ

ಹದಿನಾರನೇ ಶತಮಾನದಲ್ಲಿ ಚಿಕ್ಕದಾಗಿ ರಚಿತಗೊಂಡ ದೇವಾಲಯುಗಳನ್ನು ಹದಿನೆಂಟನೆಯ ಶತಕದಲ್ಲಿ ವಿಸ್ತರಿಸಿ ಕಲ್ಯಾಣ ಮಂಟಪ, ಅತಿಥಿ ಗೃಹಗಳನ್ನು ಸೇರಿಸಲಾಯಿತು.

ಕ್ರಿಶ್ಚಿಯನ್ ಧರ್ಮಾಂಧರ ಸಹವಾಸವೇ ಬೇಡ, ಎಂದು ನಿರ್ಧರಿಸಿದ ಸಾಹಸಿಗರು, ಜಲಮಾರ್ಗ, ಭೂಮಾರ್ಗಗಳಿಂದ ಕುಲದೇವತೆಗಳ ವಿಗ್ರಹಗಳೊಂದಿಗೆ ಕನ್ನಡನಾಡಿಗೆ ವಲಸೆ ಬಂದರು. ಕರಾವಳಿಯನ್ನು ಆಳುತ್ತಿದ್ದ ತುಂಡರಸರು, ಮಾಂಡಲೀಕರು, ಆಗಂತುಕರಿಗೆ ಆಶ್ರಯ ನೀಡಿ, ಹೊನ್ನಾವರ, ಭಟ್ಕಳ, ಬಸರೂರು, ಬಾರಕೂರು, ಬ್ರಹ್ಮಾವರ, ಮೂಲ್ಕಿ, ಮಂಗಳೂರು, ಉಲ್ಲಾಳ ಊರುಗಳಲ್ಲಿ ವಾಸಕ್ಕಾಗಿ ಅನುಕೂಲ ಮಾಡಿಕೊಟ್ಟರು. ಬೀಡು ಬಿಟ್ಟ ಊರುಗಳಲ್ಲಿಂಯೇ ಆಶ್ರಯ ತಪ್ಪಿದ ಕುಲದೇವತಾವಿಗ್ರಹಗಳನ್ನೇ ಪ್ರತಿಷ್ಠಾಪಿಸಿ, ಆಗಂತುಕರು ಸಣ್ಣ ಗುಡಿಗಳನ್ನು ಕಟ್ಟಿಸಿ ಪೂಜೆ ನೈವೇದ್ಯಗಳ ಏರ್ಪಾಡು ಮಾಡಿಕೊಂಡರು. ಕನ್ನಡಿಗರ ಔದಾರ್ಯದಿಂದ ಪುಳಕಿತಗೊಂಡ ಕೊಂಕಣಿಗರು ಗ್ರಾಮಗಳನ್ನೂ ಸೇರಿಕೊಂಡು ಕೃಷಿಕರಾದರು. ಬಂದರುಗಳಿದ್ದ ಊರುಗಳಿಗೆ ಬಂದು ವ್ಯಾಪಾರಿಗಳಾದರು. ರಾಜ್ಯಾಡಳಿತದಲ್ಲೂ ಸೇರಿಕೊಂಡು ಸ್ವಾಮಿನಿಷ್ಠರೆನಿಸಿಕೊಂಡರು. ವಿಜಯನಗರದ ಪತನದ ನಂತರ ಮಾಂಡಳಿಕರಾಗಿದ್ದ ಕೆಳದಿಯ ಅರಸರು ಸ್ವತಂತ್ರರಾದಾಗ, ರಾಜ್ಯ ಕಾರಭಾರಕ್ಕಾಗಿ ಹಲವಾರು ಕೊಂಕಣಿಗರನ್ನು ನೇಮಿಸಿಕೊಂಡಿದ್ದರು. ಸದಾಶಿವನಾಯಕ (ಕ್ರಿ.ಶ. 1565–86)ನಿಂದ ಪ್ರಾರಂಭವಾದ ಈ ಪರಿಪಾಠ, ಇಕ್ಕೇರಿ ರಾಜ್ಯದ ಅಂತ್ಯದ (ಕ್ರಿ.ಶ. 1763)ವರೆಗೂ ಏಕಪ್ರಕಾರವಾಗಿ ನಡೆದು ಬಂದಿತು. ಆರ್ಥಿಕವಾಗಿ ಬಲಗೊಂಡಾಗ, ಸಾಮೂಹಿಕವಾಗಿ ವರ್ಗಣಿ ಪಡೆದು ಕುಲದೇವತೆಗಳು ಭವ್ಯ ದೇವಾಲಯಗಳನ್ನು ಪಡೆದವು. ಕೆಲವು ಧನಿಕರು ಖಾಸಗಿಯಾಗಿಯೂ ದೇಗುಲಗಳನ್ನು ರಚಿಸಿದರು.

ಗೋವೆಯಲ್ಲಿ ಬಿಟ್ಟು ಬಂದ, ಇಲ್ಲವೇ ಧ್ವಂಸಗೊಂಡ, ದೇವಾಲಯಗಳ ನೆನಪಿಗಾಗಿ, ಮತ್ತು ಅಂಥವುಗಳ ಪ್ರತಿಕೃತಿಗಳನ್ನು ಕಟ್ಟಿಸುವ ಸಲುವಾಗಿ, ಅವುಗಳ ರಚನೆಯಲ್ಲಿ ಪರಿಣಿತರಾದ ಶಿಲ್ಪಿ, ಕಲಾಕಾರರನ್ನು ರತ್ನಾಗಿರಿ ಜಿಲ್ಲೆ (ಮಹಾರಾಷ್ಟ್ರ) ಇಲ್ಲವೇ ಗೋಮಂತಕದಿಂದ ಬರಮಾಡಿಕೊಂಡರು. ಇವರ ನೆರವಿಗೆ ಸ್ಥಾನೀಯ ಗಾರೆಯವರು, ಗುಡಿಗಾರರು ಇದ್ದೇ ಇದ್ದರು. ಈ ವಾಸ್ತುಶಿಲ್ಪಿ ಮತ್ತು ಕಲಾಕಾರರನ್ನು ಕೊಂಕಣಿಗರು ಆದರ ವಿಶ್ವಾಸಗಳಿಂದ ಬರಮಾಡಿಕೊಂಡು ವಾಸಕ್ಕಾಗಿ ಮನೆ, ಖರ್ಚಿಗಾಗಿ ಮುಂಗಡ ಹಣ ಒದಗಿಸುತ್ತಿದ್ದರು. ಇವರು ತಮ್ಮ ಕುಟುಂಬದವರನ್ನು ಸ್ವಂತ ಊರಿನಲ್ಲಿಯೇ ಬಿಟ್ಟು ಬರುತ್ತಿದ್ದರಿಂದ ಗೃಹಕೃತ್ಯದ ಕೆಲಸಗಳನ್ನೆಲ್ಲ ಸ್ವತಃ ನಿರ್ವಹಿಸಿಕೊಳ್ಳುತ್ತಿದ್ದರು. ದೇವಾಲಯಗಳ ಆಡಳಿತಗಾರರು, ಊರ ಪ್ರತಿಷ್ಠಿತರು, ಮನೆ–ಮಠ–ಅಂಗಡಿಗಳ ನಿರ್ಮಾಣ ಮತ್ತು ಅವುಗಳ ಮೇಲೆ ಕಾವಿ ಭಿತ್ತಿ ಚಿತ್ರಗಳ ರಚನೆಗಾಗಿ ಕರಾರು ಮಾಡಿಕೊಂಡು, ಫಲ ತಾಂಬೂಲಗಳೊಂದಿಗೆ ಸಂಚಕಾರ (ಮುಂಗಡ ಹಣ) ಕೊಡುತ್ತಿದ್ದರು. ಹೆಚ್ಚಿನವರು, ಕಾಳುಕಡಿ, ಬಟ್ಟೆ ಬರೆಗಳ ರೂಪದಲ್ಲಿ, ಅವರ ವೇತನವನ್ನು ಸಂದಾಯ ಮಾಡುತ್ತಿದ್ದರು. ಕಲಾಕಾರರು ನಸುಕಿನಲ್ಲಿಯೇ ಎದ್ದು ತಣ್ಣೀರು ಸ್ನಾನ ಮಾಡಿ, ಅಲ್ಪೋಪಹಾರ ಸೇವಿಸಿ ಕಟ್ಟಡ–ಚಿತ್ರಗಳ ರಚನೆಯಲ್ಲಿ ತೊಡಗುತ್ತಿದ್ದರು.



[illegible]



[illegible]

ಕೃತಿಗಳ ರೂಪರೇಷೆಗಳನ್ನು ರೇವೆಯಲ್ಲಿ ರಚಿಸಿ, ಒಪ್ಪಿಗೆಯಾದ ನಂತರವೇ ಅವನ್ನು ಅಳವಡಿಸಿಕೊಳ್ಳುತ್ತಿದ್ದರು. ಕಲಾತ್ಮಕ ಚಿತ್ರಗಳ ಬಾಹ್ಯರೇಷೆಗಳನ್ನು ಗುಡಿಗಾರರಿಂದ ಪಡೆಯುತ್ತಿದ್ದರು. ಅವರಿಗೆ ರಾಮಾಯಣ, ಮಹಾಭಾರತ, ಭಾಗವತಗಳ ಸನ್ನಿವೇಶಗಳೆಲ್ಲ ಕಂಠಪಾಠವಿರುತ್ತಿದ್ದುದರಿಂದ ಅವನ್ನು ಲೀಲಾಜಾಲವಾಗಿ ಚಿತ್ರರೂಪದಲ್ಲಿ ಅಳವಡಿಸಲು ಸಾಧ್ಯವಾಗುತ್ತಿತ್ತು. ಸಾಮಾಜಿಕ ಸನ್ನಿವೇಶಗಳನ್ನು ಸ್ವಾನುಭವದಿಂದಲೂ, ಸಮಕಾಲೀನ ಆಗು ಹೋಗುಗಳ ವೀಕ್ಷಣೆಯಿಂದಲೂ ಚಿತ್ರಿಸುತ್ತಿದ್ದರು. ಸೂರ್ಯಾಸ್ತದ ನಂತರ ಅಡಿಗೆ ಊಟಗಳನ್ನು ಮುಗಿಸಿ, ನಿದ್ರಾದೇವಿ ಪ್ರಸನ್ನಳಾಗುವವರೆಗೆ ನೆರೆಹೊರೆಯ ಮಕ್ಕಳಿಗೆ ಪೌರಾಣಿಕ ಕಥೆಗಳನ್ನು ಮನದಟ್ಟಾಗುವಂತೆ ಹೇಳುತ್ತಿದ್ದರು.

ಆದಿಶಕ್ತಿ ಜಗದಂಬೆಯ ಸೌಮ್ಯ ಸ್ವರೂಪಿಣಿಯಾದ ಶಾಂತಾದುರ್ಗಾ ದೇವತೆಗೆ ಮೀಸಲಾದ ದೇವಾಲಯ, ಕವಳೆ (ಗೋವಾ)ಯಲ್ಲಿ ಇದೆ. ಅದೇ ಮಾದರಿಯಲ್ಲಿ ಕುಮಟೆಯಲ್ಲಿ ಶಾಂತೇರಿ ಮಂದಿರವನ್ನು ಕಟ್ಟಲಾಯಿತು. ಅದರಂತೆ ಮೂಲ ಗೋವೆಯ ಮಾಶೆಲ್‌ದಲ್ಲಿರುವ ದೇವಕಿಕೃಷ್ಣ ರವಳನಾಥ ದೇವಾಲಯದ ಅನುಕರಣೆಯಲ್ಲಿ ಅಶ್ನೋಟ ಮತ್ತು ಕಾಗಾಲ (ಉತ್ತರ ಕನ್ನಡ ಜಿಲ್ಲೆ)ಗಳಲ್ಲಿ ಕಟ್ಟಲಾಗಿದೆ. ಇದೇ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಮಹಾಲಸಾ, ಮಹಾಮಾಯೀ, ಶಾಂತೇರಿ ಮುಂತಾದ ಕುಲದೇವತೆಗಳ ದೇವುಳ (ಗುಡಿ)ಗಳನ್ನು ರಚಿಸಿದ್ದರಿಂದ ವಲಸೆಗಾರರ ವಾಸಸ್ಥಳದಲ್ಲಿಯೇ ದೇವದರ್ಶನ ಪಡೆಯುವಂತೆ ಆಯಿತು. ಈ ದೇವಾಲಯಗಳನ್ನೆಲ್ಲ ಕ್ರಿ.ಶ. 1510 ರಿಂದ 1689ರ ಕಾಲಾವಧಿಯಲ್ಲಿ ಕಟ್ಟಲಾಗಿದೆ.

ಐದು ದಶಕಗಳ ಹಿಂದಿನವರೆಗೂ ಕಾವಿ ಚಿತ್ರ ನಿರ್ಮಾಣದ ಪರಂಪರೆ ಏಕಪ್ರಕಾರವಾಗಿ ಜಿಲ್ಲೆಯಲ್ಲಿ ನಡೆದೇ ಬಂದಿತ್ತು. ಅಂತು ಗಾವಡಿ ಎಂಬಾತನು ಪ್ರತಿ ವರ್ಷ ಹೊನ್ನಾವರ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಕಾವಿ ಚಿತ್ರಗಳನ್ನು ನಿರ್ಮಿಸಿ ಮಳೆಗಾಲ ಪ್ರಾರಂಭವಾಗುತ್ತಲೂ ಗೋವಾಕ್ಕೆ ಹಿಂದಿರುಗುತ್ತಿದ್ದ. ಈ ಏಕವರ್ಣೀಯ ಚಿತ್ರಗಳಲ್ಲಿ ಜನರ ಆಸಕ್ತಿ ಕ್ರಮೇಣ ಕಡಿಮೆಯಾಗಿ, ತಜ್ಞ ಕಲಾಕಾರರು ಬರುವುದನ್ನು ನಿಲ್ಲಿಸಿದಾಗ, ಅವರ ನಿರ್ದೇಶನದಲ್ಲಿ ಕೆಲಸ ಮಾಡುತ್ತಿದ್ದ ಸ್ಥಳೀಯ ಗಾರೆಯವರೇ ಸಣ್ಣಪುಟ್ಟ ದೇವಾಲಯಗಳ ಅಲಂಕರಣವನ್ನು ತಾವೇ ಮಾಡಲಾರಂಭಿಸಿದರು. ಕುಲಕೋಡ ಗಣೇಶ ಎಂಬ ಸ್ಥಾನೀಯ ಕಲಾಕಾರ ಇತ್ತೀಚಿನವರೆಗೆ ಬದುಕಿದ್ದ. ಕಲಾನೈಪುಣ್ಯದ ದೃಷ್ಟಿಯಿಂದ ಈ ಚಿತ್ರಗಳೆಲ್ಲ ಏಕಪ್ರಕಾರವಾಗಿಲ್ಲ. ಹೊನ್ನಾವರ, ಕುಮಟೆಯವು ಉತ್ತಮವೆನ್ನಬಹುದು. ಈ ಊರುಗಳಲ್ಲಿ ಶ್ರೀಗಂಧದಲ್ಲಿ ಕುಸುರಿ ಕೆಲಸ ಮಾಡುವ ಗುಡಿಗಾರರು ಶತಕಗಳಿಂದ ಬೀಡುಬಿಟ್ಟಿದ್ದಾರೆಂದು ಸ್ಮರಿಸಿಕೊಳ್ಳಬಹುದು. ನಂತರದ ಶ್ರೇಣಿಯಲ್ಲಿ ಮಾವಿನ ಕುರ್ವೆಯವು ಬರುತ್ತವೆ. ಇದೊಂದು ಹಳ್ಳಿಯಾದರೂ ಹತ್ತಿರದ ಹೊನ್ನಾವರದ ನಿಪುಣ ಕಲಾಕಾರರ ನೆರವು ಪಡೆದಿರಬೇಕು. ಮಾಜಾಳಿ, ಚಿತಾಕುಲಿಯ ಕಲಾಕಾರರಿಗೆ ಸಿದ್ಧಹಸ್ತವಿಲ್ಲದಿದ್ದರೂ ಸ್ವಂತ ಕಲ್ಪನೆ ವಿಪುಲವಾಗಿದ್ದಂತೆ ಇದೆ! ಬೀಳಗಿಯಲ್ಲಿ ವೃತ್ತಿ ಕಲಾಕಾರನಿದ್ದಂತೆ ತೋರುತ್ತದೆ. ಶಿರಾಲಿ ಮತ್ತು ಹೆಗಡೆಗಳ ಚಿತ್ರಕಾರರಿಗೆ ಕೈಕಾಲುಗಳ ಬೆರಳುಗಳನ್ನು ಸರಿಯಾಗಿ ರೇಖಿಸಲು ಬಾರದು. ಈ ಎಲ್ಲ ಊರುಗಳ ಚಿತ್ರಗಳಲ್ಲಿ ರೂಪಗೊಂಡ ದೇವ-ದೇವತೆಗಳ ಹೆಸರುಗಳನ್ನು ದೇವನಾಗರಿಯಲ್ಲಿ



ನಕುಲ ಸಹದೇವ

ಬರೆಯಲಾಗಿದೆ. ಆದರೆ ಕುಮಟೆಯ ನಕುಲ-ಸಹದೇವರ ಅಂಕಣದಲ್ಲಿ ಮಾತ್ರ ಕನ್ನಡ, ತಿಗಳಾರಿಗಳಲ್ಲೂ ಹೆಸರು ನಮೂದಿಸಲಾಗಿದೆ. ಈ ಕಲಾಕರನು ತನ್ನ ಭಾಷಾ ಪ್ರೇಮವನ್ನು ಪ್ರಕಟಿಸಲು ಹೀಗೆ ಮಾಡಿರಬೇಕು. ಹೊಸಾಡದ ನರಸಿಂಹ ನಾಯಕರು, ನಿರ್ಮಿಸಿದ ಜಾನಪದ ಶೈಲಿಯ ಚಿತ್ರಗಳ ವಿವರಗಳನ್ನು ಕನ್ನಡದಲ್ಲೇ ಕಾಣಿಸುವ ಕೃಪೆ ಮಾಡಿದ್ದಾರೆ.

ಅದೆಷ್ಟೋ ದೇವಾಲಯಗಳು, ಗುಡಿಗಳಲ್ಲಿ ಕಾವಿ ಚಿತ್ರಗಳು ಹೊತ್ತ ಹರಕೆಯನ್ನು ಪೊರೈಸುವುದಕ್ಕಾಗಿ ನಿರ್ಮಿಸಿದಂತೆ ಇವೆ. ಕಲಾಕಾರರ ಅಭಾವದಿಂದ ಹೀಗೆ ಮಾಡಿರಬೇಕು. ಅಥವಾ ಹಣ ಉಳಿಸುವ ವಿಚಾರದಿಂದ ಯಾವನೋ ಅಡ್‌ನಾಡಿ ಕಲಾವಿದನಿಂದ ಮಾಡಿಸಿರಬೇಕು. ಶೆಟಗೇರಿಯ ರಾಮ ಸೀತೆಯರ ಅಂಕಣ ಇದಕ್ಕೆ ಒಳ್ಳೆ ನಿದರ್ಶನ. ಅದರಲ್ಲಿ ವ್ಯಕ್ತಿಗಳ ಲಿಂಗಭೇದವನ್ನು ಕಲ್ಪಿಸುವುದೂ ಕಷ್ಟದ ಕೆಲಸ! ಜೊತೆಗೆ ಎರೆಹುಳ, ನಾಗರಹಾವು, ಕಪ್ಪೆಗಳನ್ನೂ ಚಿತ್ರಿಸಿ ಚಿತ್ರಕಾರನು ತನ್ನ ಸ್ವಂತಿಕೆಯನ್ನು ಪ್ರದರ್ಶಿಸಿದ್ದಾನೆ!!

ಕಾವಿ ಬಣ್ಣ (ಹುರಮುಂಜಿ)ವನ್ನು ಮನೆಗಳ ಅಲಂಕಾರಕ್ಕೆ ಧಾರಾಳವಾಗಿ ಬಳಸಲಾಗುತ್ತಿದೆ. ದಸರಾ, ದೀಪಾವಳಿ, ತುಳಸಿಹಬ್ಬಗಳಿಗಾಗಿ ಗೃಹಿಣಿಯರು ಕಾವಿ ಹಿಟ್ಟನ್ನು ನೀರಿನಲ್ಲಿ ಕರಗಿಸಿ, ಬಟ್ಟೆಯ ಕುಂಚದಿಂದ ರಂಗೋಲಿ ಹಾಕುತ್ತಾರೆ. ವಿವಾಹ ಕಾಲದಲ್ಲಿ ಮನೆಯ ಗೋಡೆಗಳನ್ನು ಇಂತಹ ಚಿತ್ರಗಳಿಂದ ಅಲಂಕರಿಸಲಾಗುತ್ತದೆ. ಮಹಾರಾಜರ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಈ ಪದ್ಧತಿಯಿತ್ತು. ಲಂಬಾಣಿಗಳಲ್ಲಿ ಇಂದಿಗೂ ಈ ರೂಢಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಹತ್ತು ಸಹಸ್ರ ವರ್ಷಗಳ ಹಿಂದೆಯೇ ಶಿಲಾಶ್ರಯ ಪಡೆದ ಮಾನವನು ಅವುಗಳನ್ನು ಅಲಂಕರಿಸಲು ಇದೇ ತಂತ್ರವನ್ನು ಬಳಸಿದ್ದನು. ಕ್ರಿ.ಶ. 1500 ರಿಂದ 1300ರವರೆಗೆ ಈಜಿಪ್ತ ದೇಶದಲ್ಲಿ ಸತ್ತವರ ಗೋರಿಗಳಲ್ಲಿ ಇಂಥ ಚಿತ್ರಗಳನ್ನು ರಚಿಸುತ್ತಿದ್ದರು. ಇದರಂತೆ ಕ್ರಿ.ಶ. ಪೂ. 800 ರಿಂದ 100ರವರೆಗೆ ಎಸ್ಟ್ರುಸ್ಕನ್ ಜನಾಂಗದವರು ತಮ್ಮ ಗುಹೆಗಳಲ್ಲಿ ಮೃತಪಟ್ಟವರ ನೆನಪಿಗಾಗಿ ಕಾವಿಯಿಂದ ಚಿತ್ರಗಳನ್ನು ಬಿಡಿಸುತ್ತಿದ್ದರು. ಗ್ರೀಕ್ ಮತ್ತು ರೋಮನ್ನರು, ತಮ್ಮ ಪಾತ್ರೆ ಪರಗಣೆಗಳ ಮೇಲೆ ಪೌರಾಣಿಕ ಸನ್ನಿವೇಶಗಳನ್ನು ಕೆಂಬಣ್ಣದಿಂದಲೇ ಚಿತ್ರಿಸುತ್ತಿದ್ದರು. ಇದಕ್ಕಾಗಿ ಅವರು ವಿವಿಧ ಉಪಕರಣಗಳನ್ನು ಬಳಸುತ್ತಿದ್ದರು. ಕೊರೆದ ಕಾವಿ ಚಿತ್ರಗಳ ನಿರ್ಮಾಣ ಎಂದಿನಿಂದ ಅಸ್ತಿತ್ವದಲ್ಲಿ ಬಂದಿತು? ಎಂದು ಖಚಿತವಾಗಿ ಹೇಳಲಾಗದಿದ್ದರೂ ಅದು ಕರ್ನಾಟಕಕ್ಕೆ ಕೊಂಕಣಿಗರ ಕೊಡುಗೆ! ಎಂದು ಅನಿಸದಿರದು. ಪೋರ್ಚುಗೀಸರು ಸುಟ್ಟು ಬೂದಿ ಮಾಡಿದ ಕೊಂಕಣಿ ಸಾಹಿತ್ಯದಲ್ಲಿ ವಾಸ್ತುಶಿಲ್ಪ ಶಾಸ್ತ್ರದ ಜೊತೆಗೆ ಕಾವಿ ಚಿತ್ರಗಳ ನಿರ್ಮಾಣ ಕುರಿತಾದ ಗ್ರಂಥಗಳೂ ಇದ್ದಿರಲು ಸಾಕು. ಅವು ಲಭ್ಯವಿದ್ದರೆ ಈ ಕಲೆಯ ಅಧ್ಯಯನಕ್ಕೆ ಎಷ್ಟೊಂದು ಉಪಯುಕ್ತವಾಗಿರುತ್ತಿದ್ದವು!

ಜರ್ಮನಿಯ ಶಿಷ್ಯವೇತನ ಪಡೆದು ಗೋವಾದ ಕಲೆಯನ್ನು ಅಭ್ಯಸಿಸಿದ ಸಂಶೋಧಕಿ ಗ್ರೆಟ್ಲಿಯು. ಮಿಟರವಾಲನ್, ಕಾವಿ ಕಲೆ, ಮೂಲತಃ ಇಟಾಲಿಯ ಗ್ರಾಫಿಕ್ (ಗೀರು ಚಿತ್ರ)ಕಲೆಯಾಗಿದ್ದು, ಪೋರ್ಚುಗೀಸರು ಇದನ್ನು ಭಾರತಕ್ಕೆ ತಂದು ಚರ್ಚುಗಳಿಗೆ

ಹಸ್ತಾಂತರಿಸಿದರೆಂದೂ, ಆ ನಂತರ ಹಿಂದೂಗಳು, ಅದನ್ನು ತಮ್ಮದನ್ನಾಗಿಸಿ ಕೊಂಡರೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾಳೆ. ಇದೆಂಥ ಅಪೂರ್ವ ಸಂಶೋಧನೆ! ಪೋರ್ಚುಗೀಸರು ಗೋವಾದ ದೇವಾಲಯಗಳ ಧ್ವಂಸ ಕಾರ್ಯವನ್ನು ಪ್ರಾರಂಭಿಸುವ ಮೊದಲೇ ಅಲ್ಲಿಯ ಯಾವ ಚರ್ಚಿನಲ್ಲಿಯೂ ಇಂಥ ಕಾವಿ ಚಿತ್ರಗಳು ಇಲ್ಲದಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಳಿದುಳಿದ ಕೆಲವೇ ಚಿತ್ರಗಳಲ್ಲಿ ಕೂಡ ಕರಾವಳಿಯ ಹಿಂದೂಗಳ ಮಣ್ಣಿನ ಕಲೆ ಗೋಚರಿಸುತ್ತದೆ. ಆದರೆ ದುರ್ದೈವದಿಂದ ಅಭಿಮಾನ ಶೂನ್ಯರಾದ ನಾವು ಅವುಗಳನ್ನು ಭರದಿಂದ ನಾಶಮಾಡಹತ್ತಿದ್ದೇವೆ. ಸರ್ವನಾಶವಾಗುವ ಮೊದಲೇ ಪುಣ್ಯಾತ್ಮರಾದ ಕಲಾಪ್ರೇಮಿಗಳು ಅವನ್ನು ಅಭ್ಯಸಿಸಿ, ಛಾಯಾಚಿತ್ರಗಳಲ್ಲಿ ಸೆರೆಹಿಡಿದು, ಗ್ರಂಥ ರೂಪಗಳಲ್ಲಿ ಅವನ್ನು ಮುಂದಿನ ಪೀಳಿಗೆಗಾಗಿ ರಕ್ಷಿಸಿಡುವುದರಿಂದ ಈ ಕಲೆಗೆ ಗೌರವ ಸಲ್ಲಿಸಬಹುದಾಗಿದೆ.



ಮತ್ಸ್ಯಾವತಾರ



ವರಾಹವತಾರ





11. ವಿನಾಶದ ಹಾದಿಯಲ್ಲಿ

ವಿದ್ಯಾರ್ಥಿ ಜೀವನದಲ್ಲಿ ಪ್ರತಿ ಬೇಸಿಗೆಯ ರಜೆಯಲ್ಲಿ ಸಿರ್ಸಿಯ ಅಜ್ಜನ ಮನೆಗೆ, ಧಾವಿಸಿ ಹೋಗಲು ಆ ಊರಿನಲ್ಲಿರುವ ಶ್ರೀಮಾರಿಕಾಂಬಾ ದೇವಾಲಯ, ದೊಡ್ಡ ಆಕರ್ಷಣೆಯಾಗಿತ್ತು. ಆ ದೇವಾಲಯದಲ್ಲಿಯ ಆನೆಯಂತೆ ಕೊಬ್ಬಿದ ಕೋಣನಂತೆಯೇ ಅಲ್ಲಿರುವ ಭಿತ್ತಿ ಚಿತ್ರಗಳೂ ಅತ್ಯಂತ ಕುತೂಹಲಕಾರಿಯಾಗಿದ್ದವು. ಅವುಗಳಲ್ಲಿಯ ರಾಮಾಯಣ, ಮಹಾಭಾರತದ ಸನ್ನಿವೇಶಗಳನ್ನು ಸ್ಪರ್ಧೆಯಿಂದ ಗುರುತಿಸುತ್ತಿದ್ದೆವು. ಶರೀರದ ಮೇಲೆ ಕತ್ತೆ-ಕೋತಿ, ಆನೆಗಳು ಓಡಾಡಿದರೂ ಎಚ್ಚರಗೊಳ್ಳದ ಕುಂಭಕರ್ಣನ ನಿದ್ರೆಯನ್ನು ನೆನೆದುಕೊಂಡು ಅವನನ್ನು ಎಬ್ಬಿಸಲು ನಾವು ಯಾವ ಯಾವ ಕ್ರಮಗಳನ್ನು ಕೈಕೊಳ್ಳುತ್ತಿದ್ದೆವು, ಎಂದು ವರ್ಣಿಸಿಕೊಂಡು ಮನದಣಿ ನಗುತ್ತಿದ್ದೆವು. ಆ ಭವ್ಯದೇವಾಲಯದ ಹೊರ ಜಗಲಿ, ಭಿಕ್ಷುಕರ ಧರ್ಮಶಾಲೆಯಾಗಿ ಮೀಸಲಾಗಿತ್ತು. ಅವರ ಅಡಿಗೆಯ ಹೊಗೆಯಿಂದಾಗಿ ಚಿತ್ರಗಳೆಲ್ಲ ಮಾಸಿ ಹೋಗಲಾರಂಭಿಸಿದ್ದರಿಂದ ಅಯ್ಯೋ! ಅನಿಸುತ್ತಿತ್ತು. ಕೆಲ ವರ್ಷಗಳ ನಂತರ ಭಿಕ್ಷುಕರನ್ನು ಅಲ್ಲಿಂದ ಕಂಬಿ ಕೀಳುವಂತೆ ಮಾಡಿದ್ದರಿಂದ ಸಮಾಧಾನವಾಗಿತ್ತು. ಆದರೆ ದೇವಾಲಯದ ಆವರಣ ಯುವಕ ಯುವತಿಯರಿಗೆ ಬ್ಯಾಡ್‌ಮಿಂಟನ್, ರಿಂಗ್ ಟೆನಿಸ್ ಆಟಗಳ ಕ್ರೀಡಾಂಗಣವಾಗಿ ಮಾರ್ಪಟ್ಟದ್ದರಿಂದ ಬಾರಿಸುವುದನ್ನು ಕೊಟ್ಟು ಊದುವುದನ್ನು ಕೊಂಡಂತಾಯಿತು. ಭಕ್ತಾದಿಗಳು ಕೊಡುವ ಉದಾರ ದೇಣಿಗೆಗಳಿಂದ ದೇವಾಲಯದ ಬೊಕ್ಕಸ ಸದಾಕಾಲ ತುಂಬಿ ತುಳುಕುತ್ತಲೇ ಇರುವುದರಿಂದ ಅದರ ಆಡಳಿತಗಾರರಾಗಲು ಸದಾ ತುರುಸಿನ ಸ್ಪರ್ಧೆ ನಡೆದೇ ಇರುತ್ತದೆ. ಹೊಸ ವಹಿವಾಟುದಾರರು ಬಂದಾಕ್ಷಣ, ದೇವಸ್ಥಾನದ ನವಿನೀಕರಣದ ನೆಪದಲ್ಲಿ ಬೊಕ್ಕಸ ಬರಿದು ಮಾಡುವುದು, ನಡೆದು ಬಂದ ಪರಂಪರೆ. ಈ ಸಂಭ್ರಮದಲ್ಲಿ ಹಳೆಯದನ್ನೆಲ್ಲ ಹೋಳಿ ಮಾಡುವುದು ತೀರ ಸಾಮಾನ್ಯ. ಉತ್ತರ ಕನ್ನಡ ಜಿಲ್ಲೆಯ ಹಿರಿಯ ಕಲಾಕಾರರಲ್ಲಿ ಒಬ್ಬರೂ, ರಾಜ್ಯ ಲಲಿತ ಕಲಾ ಅಕಾಡೆಮಿಯ ಸದಸ್ಯರೂ ಅಗಿದ್ದವರು, ನಗರಸಭೆಯ ಆಡಳಿತಗಾರರಾಗಿ ನಿಯುಕ್ತರಾದಾಗ, ಕಲಾ ಪ್ರೇಮಿಗಳಿಗೆಲ್ಲ ಹರ್ಷವಾಯಿತು. ಆದರೆ ಅವರು ಕೈಕೊಂಡ ಕಾವಿಚಿತ್ರಗಳ ದುರಸ್ತಿಯಿಂದ ಅವು ಸರ್ವಕಾಲಕ್ಕೂ ನಾಶವಾಗುವಂತಾಗಿದೆ. ಗೋಡೆಗಳಿಗೆ ಸುಣ್ಣ ಬಳಿಯುವ ಗುತ್ತಿಗೆದಾರನಿಗೆ ಕೆಂಪು ತೈಲವರ್ಣದಿಂದ ಚಿತ್ರಗಳನ್ನು ತಿದ್ದಿ ತೀಡುವ ಕೆಲಸ ಒಪ್ಪಿಸಿದರೆ ಏನಾದೀತು? ಎಂದು ಒಬ್ಬ ಬಾಲಕನಿಗೂ ತಿಳಿಯದೇ ಇರಲಾರದು. ಈ ಕಲಾವಿದನೋ ದೇವ-ದೇವತೆಗಳ ಕೈ-ಕಾಲು ಮುಖಮಂಡಲಗಳನ್ನು ಕುಷ್ಠರೋಗದ ಪೀಡನೆಗೆ



ಧ್ರುವ ಮತ್ತು ಸುರುಚಿ

ಒಳಗಾದವರಂತೆ ವಿಕಾರಗೊಳಿಸಿಬಿಟ್ಟಿದ್ದಾನೆ! ಇಂದು ಈ ಚಿತ್ರಗಳು ನಮ್ಮ ವಿಶಿಷ್ಟ ಭಿತ್ತಿಚಿತ್ರ ಪರಂಪರೆಯನ್ನು ಪ್ರತಿನಿಧಿಸುತ್ತವೆ ಎಂದು ಹೇಳಿಕೊಳ್ಳುವುದು ಕೂಡ ಅವಮಾನಕಾರಕವಾಗಿದೆ.

ಕಾವಿ ಚಿತ್ರಗಳ ಪರಂಪರೆಯ ಸ್ವಾರಸ್ಯ, ವೈಶಿಷ್ಟ್ಯಗಳನ್ನು ಅರಿಯುವ ಯತ್ನವನ್ನು ಕಲಾಕಾರರಾಗಲಿ, ಕಲಾಪ್ರೇಮಿಗಳಾಗಲಿ ಮಾಡದಿರುವಾಗ, ಜನಸಾಮಾನ್ಯರ ಮಾತು ದೂರವೇ ಉಳಿಯಿತು. ಬಾಹ್ಯ ಸೌಂದರ್ಯಕ್ಕಾಗಿ ಹಪಹಪಿಸುವವರ ಅಭಿರುಚಿಯನ್ನು ತಣಿಸಲು ಕಾವಿ ಚಿತ್ರಗಳು ಅಸಮರ್ಥವಾಗಿದ್ದರಿಂದ, ಅವು ಅವಿದ್ಯಾವಂತರ ಕೃತಿಗಳೆಂದು ಬಹು ಸಂಖ್ಯಾತರು ಅಸಡ್ಡೆ ತೋರಿಸಿದರು. ಉರಿಬಿಸಿಲಿನಿಂದ, ಜಡಿಮಳೆಯಿಂದ ಈ ಪ್ರಾಚೀನ ಕಲೆಯನ್ನು ಸಂರಕ್ಷಿಸುವ ಯಾವ ಯತ್ನವನ್ನೂ ಮಾಡಲಿಲ್ಲ. ವರ್ಷಕ್ಕೊಮ್ಮೆಯೂ ಅವುಗಳ ಮೇಲೆ ಶೇಖರವಾಗುತ್ತಿದ್ದ ಧೂಳು ಝಾಡಿಸಲಿಲ್ಲ. ಒದ್ದೆ ಬಟ್ಟೆಯಿಂದ ಶುಭ್ರಗೊಳಿಸುವ ಶ್ರಮವಹಿಸಲಿಲ್ಲ. ಇಂಥ ಅಗಾಧ ಅಸಡ್ಡೆಯಿಂದಾಗಿ ಆ ಅನಾಥ ಚಿತ್ರಗಳು ಮಾಸಿ ಹೋಗುವುದು ತೀರ ಸ್ವಾಭಾವಿಕ. ಅವರು ಜೀರ್ಣೋದ್ಧಾರ ಮಾಡುವ ನೆವದಲ್ಲಿ ಕಣ್ಣು ಕೋರೈಸುವ ರಬ್ಬಾದ ಎನಾಮಲ್ ಪೇಂಟ್ ಬಳಸಿದರು. ಇದರಿಂದ ಕಾವಿ ಚಿತ್ರಗಳ ಜೀವಾಳವಾದ ಸೂಕ್ಷ್ಮ ಸುಂದರ ರೇಖಾ-ಸಂಯೋಜನೆ ಶಾಶ್ವತವಾಗಿ ನಾಶವಾಗಿ ಹೋಗುವಂತಾಯಿತು. ಈಗ ಅಲ್ಲಲ್ಲಿ ಉಳಿದುಕೊಂಡ ಇಂತಹ ಚಿತ್ರಗಳೇ ಕಾವಿ ಕಲೆ! ಎಂದು ಅನೇಕರು ಭ್ರಮಿಸಿದ್ದಾರೆ.

ವೆಂಕಟಾಪುರದಲ್ಲಿಯ ದೇವಾಲಯದಲ್ಲಿದ್ದ ಚಿತ್ರಗಳು ಇನ್ನೂ ಸುಸ್ಥಿತಿಯಲ್ಲಿವೆ ಎಂದು ಕೆಲ ಹಿತಚಿಂತಕರು ಸೂಚಿಸಿದ್ದರಿಂದ ಕ್ಯಾಮರಾದೊಂದಿಗೆ ಅಲ್ಲಿ ಧಾವಿಸಿದಾಗ, ನಿರಾಸೆಯೇ ಕಾದಿತ್ತು. ಮೊದಲಿದ್ದ ಚಿತ್ರಗಳನ್ನು ಗಣನೆಗೆ ತೆಗೆದುಕೊಳ್ಳದೇ ಆಡಳಿತ ವರ್ಗದವರ ಅಭಿರುಚಿಗೆ ತಕ್ಕಂತೆ ಆ ಕೃತಿಗಳನ್ನು ವಾರ್ನಿಶ್ ಪೇಂಟ್‌ದಿಂದ ರಚಿಸಲಾಗಿತ್ತು. ವಿಷ್ಣುವಿನ ಅವತಾರಗಳು ಕೋಟು, ಹ್ಯಾಟು ಧರಿಸಿಕೊಂಡು ನಿಂತಿದ್ದವು! ಅವರ್ಸಾದಲ್ಲಿ ಇದಕ್ಕೂ ಮುಂದೆ ಹೋಗಿ ಬಟ್ಟೆ ಬರೆಗಳಿಗೆಲ್ಲ ವಿವಿಧ ಬಣ್ಣಗಳನ್ನು ಬಳಸಿದ್ದು ನೋಡಿ ಅಯ್ಯೋ! ಅನಿಸಿತು. ಗೋಕರ್ಣದ ಪರ್ತಗಾಳಿ ಜೀವೋತ್ತಮ ಮಠದಲ್ಲಿ ಭಕ್ತಾದಿಗಳು ವಿಪುಲವಾಗಿರುವುದರಿಂದ ಕೊಡುಗೆ, ಕಾಣಿಕೆಗಳಿಗೆ ಏನೇನೂ ಕೊರತೆಯಿಲ್ಲ. ಅಂತೆಯೇ ಅವರು ಪ್ರತಿ ವರ್ಷವೂ ಕಾವಿ ಚಿತ್ರಗಳನ್ನು ತೈಲವರ್ಣದಿಂದ ನವೀಕರಿಸುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇದೇ ಮಾತು ಕೊಲ್ಲೂರು ಮೂಕಾಂಬಿಕಾ ದೇವಾಲಯದಲ್ಲಿರುವ ಚಿತ್ರಗಳಿಗೂ ಅನ್ವಯಿಸುತ್ತದೆ. ಗೋವಾದ ಪರ್ತಗಾಳದಲ್ಲಿ ಪ್ರಧಾನ ಜೀವೋತ್ತಮ ಮಠದ ಹೊರಗೋಡೆಯಲ್ಲಿರುವ ಚಿತ್ರಗಳನ್ನೂ ನವೀಕರಿಸಿದ್ದಾರೆ. 1960ರಲ್ಲಿ ಅಖಿಲ ಭಾರತ ಕರಕುಶಲ ಕಲಾಮಂಡಳಿಯ ಅಧ್ಯಕ್ಷೆ, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ತಮ್ಮ ದೇವಾಲಯಕ್ಕೆ ಭೇಟಿ ಕೊಡಲಿರುವ ವಿಚಾರ ತಿಳಿದು, ಬರಲಿರುವ ಅತಿಥಿಗಳಿಗೆ ಪ್ರತಿಯೊಂದು ದೇವಸ್ಥಾನದ ಆಡಳಿತಗಾರರು ಪ್ರತಿ ಅಂಕಣದಲ್ಲಿಯೇ ಚಿತ್ರ ವಿವರಗಳನ್ನು ಕೊರೆಯಿಸುವ ಸಾಹಸ ಮಾಡಿದರು!

ಅನೇಕಾನೇಕ ದೇವಾಲಯಗಳಲ್ಲಿ ತಮ್ಮ ಪೂರ್ವಜರ ಈ ಕಲೆಯ ಕುರುಹೂ, ಗೋಡೆಗಳ ಮೇಲೆ ವಿರಾಜಿಸುವುದು ಅವಮಾನವೆಂಬಂತೆ ಸುಣ್ಣ-ಬಣ್ಣ-



ಇಂದ್ರ ಮತ್ತು ಕಾಮಧೇನು

ಡಿಸ್‌ಟೆಂಪರ್‌ಗಳನ್ನು ಬಳಿದು ಶುದ್ಧೀಕರಿಸಿಬಿಟ್ಟಿದ್ದಾರೆ. ಸದ್ಯ ಆ ಬರಿದಾದ ಸ್ಥಳಗಳಲ್ಲಿ ಚಿತ್ರ ನಟ-ನಟಿಯರ ಭಾವಚಿತ್ರಗಳಿಗೆ ಆಸ್ಪದ ಮಾಡಿಕೊಡಲಿಲ್ಲ. ಮುಂದಿನ ಪೀಳಿಗೆಯವರು ಅದನ್ನೂ ಮಾಡಿದರೆ ಆಶ್ಚರ್ಯವಿಲ್ಲ. ಗೋವಾ ರಾಜ್ಯದಲ್ಲಿಯ ದೇವಕಿಕೃಷ್ಣರವಳನಾಥ, (ಮಾರ್ಸೆಲ್)ದಾಮೋದರ ದೇವಾಲಯ (ಜಾಂಬಾವಲಿ) ಮಲ್ಲಿಕಾರ್ಜುನ ದೇವಾಲಯ, (ಕಾಣಕೋಣ)ಮತ್ತು ಶಾಂತಾದುರ್ಗಾ ದೇವಾಲಯ (ಫಾತರಪೆ) ಇವುಗಳಲ್ಲಿ ಹಿಂದೊಮ್ಮೆ ಕಾವಿಚಿತ್ರಗಳಿದ್ದು, ಈಗ ಅವನ್ನು ರಬ್ಬಾದ ಚಿತ್ರಗಳಿಂದ ತುಂಬಿಬಿಡಲಾಗಿದೆ. ಹಿಂದಿನ ಗಿಲಾಯಿ ಕೆಡವಿ ಅದರೊಂದಿಗೆ ಭಿತ್ತಿಚಿತ್ರಗಳನ್ನು ಸದಾಕಾಲಕ್ಕೂ ನಾಶ ಮಾಡಿದ್ದು ಇನ್ನೂ ಶೋಚನೀಯ. ಅಘನಾಶಿನಿಯ ದೇವಾಲಯದ ಪೌಳಿಯ ಒಳಗೋಡೆಗಳ ಮೇಲೆ ಅನೇಕಾನೇಕ ಸಾಮಾಜಿಕ ಚಿತ್ರಗಳು ಇದ್ದವು. ಗಂಡು ಹೆಣ್ಣಿನ ಚುಂಬನ ದೃಶ್ಯವೊಂದು ತುಂಬ ಆಕರ್ಷಕವಾಗಿತ್ತು. ಆದರೆ ಛಾಯಾಗ್ರಹಣಕ್ಕೆ ಬೆಳಕು ಸಾಲದು, ಎಂದು ಹಿಂದಿರುಗಿದ ಒಂದೇ ವಾರದಲ್ಲಿ ಕೃತಕ ದೀಪಗಳ ಸೌಕರ್ಯದಿಂದ ಬಂದು ನೋಡಿದಾಗ ಅದನ್ನೆಲ್ಲ ಕೆಡವಿಬಿಟ್ಟಿದ್ದರು! ಆತ್ಮೀಯರನ್ನು ಕಳೆದುಕೊಂಡಷ್ಟು ಖೇದವಾಯಿತು.

ಅಂಕೋಲೆಯ ಹೊರವಲಯುದಲ್ಲಿರುವ ಅಮ್ಮನವರ ದೇವಾಲಯ ಕೆಡವುತ್ತಿದ್ದುದನ್ನು ರಾಷ್ಟ್ರೀಯ ಹೆದ್ದಾರಿಯಿಂದ ಹೋಗುವಾಗ ಕಂಡದ್ದರಿಂದ ಅದರಲ್ಲೇನಾದರೂ ಕಾವಿಚಿತ್ರಗಳಿವೆಯೇ? ಎಂದು ಪರೀಕ್ಷಿಸಲು ಹೋದದ್ದಾಯಿತು. ದ್ವಾರಪಾಲಕರು ಮತ್ತು ಕುದುರೆ ಸವಾರರ ಅಪೂರ್ವ ಚಿತ್ರಗಳನ್ನು ಕ್ಲಿಕ್ಕೀಕರಿಸಿದ್ದಾಯಿತು. ಅರೆಗಳಿಗೆಯಲ್ಲಿ ಅವನ್ನು ನೆಲಸಮ ಮಾಡಿಬಿಟ್ಟಿದ್ದರು! ಗೇರಸಪ್ಪಾದ ಬಸ್‌ನಿಲ್ದಾಣದಲ್ಲಿರುವ ಎರಡು ಅಂತಸ್ತಿನ ಕಟ್ಟಡದಲ್ಲಿ ಕಾವಿ ಚಿತ್ರಗಳು ಇರುವುದನ್ನು ಬಸ್ಸಿನಿಂದಲೇ ನೋಡಿದ್ದೆ. ಕೇವಲ ಹದಿನೆಂಟು ಮೈಲು ದೂರವಿರುವ ಹೊನ್ನಾವರದಿಂದ ಒಂದೆರಡು ದಿನಗಳಲ್ಲಿ ಕ್ಯಾಮರಾದೊಂದಿಗೆ ಹಿಂದಿರುಗುವುದರೊಳಗೆ, ಕಟ್ಟಡಕ್ಕೆ ಹೊಸದಾಗಿ ಸಿಮೆಂಟಿನ ಗಿಲಾಯಿ ಮಾಡಿಸಿ ಬಣ್ಣ ಬಳಿದು, ಬ್ಯಾಂಕ್ ಒಂದರ ಶಾಖೆಯನ್ನು ಸ್ಥಾಪಿಸಿದ್ದರು!! ಮಾವಿನ ಕುರ್ವೆಯ ದೇವಿ ದೇವಸ್ಥಾನದ ಗರ್ಭಗುಡಿಯ ಸುತ್ತ ಇರುವ ಕಾವಿ ಚಿತ್ರಗಳ ಛಾಯಾಗ್ರಹಣ ಮಾಡುತ್ತಿದ್ದಾಗ ಮೋಕ್ತೇಸರರು, 'ಈ ವರ್ಷ ಗುರುಗಳು ಇಲ್ಲಿ ಚಾತುರ್ಮಾಸ ಆಚರಿಸಲಿರುವುದರಿಂದ ದೇವಾಲಯುದ ನವೀನೀಕರಣ ಮಾಡಿಸಲಿದ್ದೇವೆ. ಈ ಚಿತ್ರಗಳಿಗೂ ಬಣ್ಣ ಬಳಿಸಲಿದ್ದೇವೆ. ನಂತರ ಛಾಯಾಗ್ರಹಣ ಮಾಡಿದರಾಗದೇ?' ಎಂದು ವಿನಂತಿಸಿಕೊಂಡರು. ಅದಕ್ಕೂ ಮೊದಲೇ ಅಲ್ಲಿ ತಲುಪಿ ಚಿತ್ರೀಕರಣ ಮಾಡಿದ್ದರಿಂದ ಸಂತೋಷವಾಗಿತ್ತು. ಇದರಂತೆ ಹೊನ್ನಾವರದ ರಾಮಮಂದಿರದಲ್ಲೂ ನವೀನೀಕರಣ ಪ್ರಾರಂಭವಾಗಿತ್ತು. ಭಿತ್ತಿ ಚಿತ್ರಗಳಿಗೆ ಹೊಸ ಜೀವಕಳೆ ತುಂಬಿ ಬರಲಿದೆ, ಎಂದು ಮನವರಿಕೆ ಮಾಡಿಕೊಡಲು ಯತ್ನಿಸಿದರೂ, ಕಲ್ಲು, ಮಣ್ಣು, ಮರಳ ರಾಶಿಯನ್ನು ಹತ್ತಿ, ಇಳಿದು ಮೂಲ ಚಿತ್ರಗಳ ಛಾಯಾಗ್ರಹಣ ಮಾಡಿ ಮುಗಿಸಿದಾಗ ನೆಮ್ಮದಿಯ ಉಸಿರು ಬಿಡುವಂತೆ ಆಗಿತ್ತು.

ಅದೆಷ್ಟೋ ದೇವಾಲಯಗಳ ಕಾವಿ ಚಿತ್ರಗಳು ಇಂದು ಛಾಯಾಚಿತ್ರಗಳ ರೂಪದಲ್ಲಿ ಮಾತ್ರ ಉಳಿದುಕೊಂಡಿವೆ. ಜಾನಪದ ಶೈಲಿಯಲ್ಲಿ ರಚಿತವಾದ ಚಿತ್ರಗಳಿಗೆ ಹೆಸರು

ಪಡೆದ ಪೊಸಾಡ ದೇವಾಲಯವನ್ನು ಸಂಪೂರ್ಣ ನೆಲಸಮ ಮಾಡಿ ಊರವರು ಚಂದಾ ಹಾಕಿ ಹೊಸ ಕಟ್ಟಡ ಕಟ್ಟಿದ್ದಾರೆ. ಬೆಂಗಳೂರು ಹೊನ್ನಾವರ ರಾಜ್ಯದ ಹೆದ್ದಾರಿಯಲ್ಲಿರುವ ಬಾಳೆಗದ್ದೆಯ ದೇಗುಲವನ್ನು ಕೆಡವಿ ಹೊಸದನ್ನು ನಿಲ್ಲಿಸಿದ್ದಾರೆ. ಅದರಂತೆ ಕೆಕ್ಕಾರದಲ್ಲಿರುವ ಹನುಮಾನ್ ಮಂದಿರದ ಸ್ಥಾನದಲ್ಲಿ ಹೊಸ ಪೂಜಾ ಗೃಹ ತಲೆಯೆತ್ತಿ ನಿಂತಿದೆ. ಮುರ್ಡೇಶ್ವರದ ಮೊದಲ ದೇವಾಲಯದಲ್ಲಿ ಕಾವಿ ಚಿತ್ರಗಳಿದ್ದವು. ಈಗ ಅಲ್ಲಿ ಬೃಹತ್ ದೇವಾಲಯದ ಸಂಕೀರ್ಣ ತಲೆಯೆತ್ತಿ ಚೋಳ ಶಿಲ್ಪದ ಅನುಕರಣೆಗೆ ಸ್ವಾಗತ ನೀಡಿದ್ದರಿಂದ ಕರಾವಳಿಯ ಕಲಾಕಾರರ ಕಾವಿ ಕಲೆಗೆ ಅವಕಾಶವೇ ಇಲ್ಲವಾಗಿ ಹೋಯಿತು. ಅನೇಕಾನೇಕ ಮನೆ ಅಂಗಡಿಗಳಲ್ಲಿದ್ದ ಚಿತ್ರಗಳ ಗತಿಯೂ ಇದೇ ಆಗಿದೆ.

ಪೂರ್ವಜರ ಮನೆಗಳನ್ನು ಅಲಂಕರಿಸಿದ ಚಿತ್ರಗಳ ಛಾಯಾಗ್ರಹಣ ಮಾಡಲಾಗಲಿಲ್ಲವಲ್ಲ! ಎಂದು ಆಗಾಗ ಬೇಜಾರಾಗುತ್ತಿರುತ್ತದೆ. ಆದರೆ ಇಂದಿನ ತಲೆಮಾರಿನವರಿಗೆ ಅವುಗಳ ಇರುವಿನ ಅರಿವೂ ಇಲ್ಲ!

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಆದ ಸಾಮಾಜಿಕ ಬದಲಾವಣೆಗಳಿಗೆ ನಮ್ಮ ದೇವರು, ಮತ್ತು ದೇವಸ್ಥಾನಗಳು ಆಹುತಿಯಾಗಿವೆ! ಎಂದರೆ ಅತಿಶಯೋಕ್ತಿ ಆಗಲಾರದು. ಉತ್ತಮ ಉತ್ಪನ್ನವಿರುವ ದೇವಾಲಯಗಳನ್ನು ಸರಕಾರ, ತನ್ನ ವಶಕ್ಕೆ ತೆಗೆದುಕೊಂಡು, ಪೂಜೆ, ನೈವೇದ್ಯ ಆಡಳಿತಗಳಿಗಾಗಿ ವಾರ್ಷಿಕ ತಸದೀಕು ಕೊಡಲಾರಂಭಿಸಿತು. ಮೂಕಾಂಬಿಕಾ, ಮಾರಿಕಾಂಬಾ ದೇವಾಲಯಗಳ ಆಡಳಿತಗಾರರಾಗಲು ತುರುಸಿನ ಸ್ಪರ್ಧೆ ನಡೆದರೂ ಸಣ್ಣಪುಟ್ಟ ಗುಡಿಗಳಿಗೆ ಆಡಳಿತಗಾರರೇ ಬರದಂತೆ ಆಯಿತು. ದಶಕಗಳಿಂದ ಧನಸಹಾಯ ಸ್ಥಗಿತಗೊಂಡದ್ದರಿಂದ ಬರುತ್ತಿದ್ದ ಕಿಂಚಿತ್ ಹಣದಲ್ಲಿ ಯಾವ ಧಾರ್ಮಿಕ ಕಾರ್ಯವನ್ನೂ ನಡೆಸಲಾಗದೇ ಪೂಜಾರಿಗಳು ಚಡಪಡಿಸಲಾರಂಭಿಸಿದರು. ಕೆಲವರು ಕೃಷಿಕರಾದರೆ ಹಲವರು ಹೋಟೆಲ್ ಮಾಣಿಗಳಾದರು. ಇವರ ಪೀಳಿಗೆಯವರು ಶಾಲೆ-ಕಾಲೇಜು ಕಲಿತು ಸರಕಾರಿ ಸೇವಕರಾದರೇ ಹೊರತು, ದೇವಸ್ಥಾನದ ಪುರೋಹಿತರಾಗಲು ಮನಸ್ಸು ಮಾಡಲೇ ಇಲ್ಲ. ಪೂಜೆ ಪುನಸ್ಕಾರಗಳಿಲ್ಲದ ದೇವರು ಮೂಲೆಗುಂಪಾದರು. ವಿಗ್ರಹಗಳನ್ನು

ಕಳ್ಳಕಾಕರು ಕದ್ದೊಯ್ದರು. ದುರಸ್ತಿ ಇಲ್ಲದೇ ಹೀನಸ್ಥಿತಿಗೆ ಇಳಿದ ದೇವಾಲಯಗಳ ಕಟ್ಟಡಗಳು, ಮಳೆ-ಗಾಳಿಗಳಿಗೆ ಆಹುತಿಯಾಗಿ ನೆಲಸಮವಾದವು. ಹೆಚ್ಚಿನ ದೇವಾಲಯಗಳು, ಹಿಂದೆ ಕೊಟ್ಟ ಭೂಮಿ, ದಾನ, ಉಂಬಳಿಗಳಿಂದ ಸಕಲ ಚಟುವಟಿಕೆಗಳನ್ನು ಶತಕಗಳಿಂದ ನಡೆಸಿಕೊಂಡು ಬಂದಿದ್ದವು. ಆದರೆ ಭೂ ಸುಧಾರಣಾ ಕಾನೂನು ಬಂದ ನಂತರ ದೇವಸ್ಥಾನಗಳಿಗೆ ಸೇರಿದ ಆಸ್ತಿಯನ್ನು ರೈತ ಬಾಂಧವರು, ಬಾಡಿಗೆದಾರರು, ಪುರೋಹಿತರು ತಮ್ಮದನ್ನಾಗಿ ಮಾಡಿಕೊಂಡದ್ದರಿಂದ ದೇವರು ಕಡು ಬಡವರಾದರು. ಧನಿಕ ಕುರುವಾರುಗಳು ಇರುವ ದೇವಾಲಯದ ಆಡಳಿತಗಾರರು, ಪೂಜಾಸ್ಥಳವನ್ನು ಕಲ್ಯಾಣ ಮಂಟಪ, ವಿಶ್ರಾಂತ ಧಾಮಗಳನ್ನಾಗಿ ಪರಿವರ್ತಿಸಿ ಇತರ ಚಟುವಟಿಕೆಗಳು ಮುಂದುವರಿಯುವಂತೆ ನೋಡಿಕೊಂಡರು. ಈ ಎಲ್ಲ ಗೊಂದಲದಲ್ಲಿ ಕಾವಿ ಚಿತ್ರಗಳಿಗೆ ಕೇಳುವವರಾರು?



ಗ್ರಂಥ ಸೂಚಿ

1. ಉಲ್ಫ್‌ಗಾಂಗ್ ಸೈಡಲರ್, 1988: ಯುರೋಪಿಯನ್ ಆರ್ಟ್, ಹರ್ಡರ್ ಎಂಡ್ ಹರ್ಡರ್ ನ್ಯೂಯಾರ್ಕ್.

2. ಹಾವೆಲ್ ಇ.ಬಿ. 1964: ಆರ್ಟ ಹೆರಿಟೇಜ್ ಆಫ್ ಇಂಡಿಯಾ. ಡಿ.ಡಿ. ತಾರಾಪೂರವಾಲಾ ಸನ್ಸ್ ಅಂಡ್ ಕೊ. ಪ್ರಾಯವೇಟ್ ಲಿಮಿಟೆಡ್, ಬಾಂಬೆ.

3. ಹೆಮಲಿನ್ ಪಾಲ್, 1967: ಗ್ರೀಕ್ ಮಯ್‌ಥೊಲೊಜಿ. ನಾಲ್ಕನೇ ಆವೃತ್ತಿ. ಲಂಡನ.

4. ಶಿವರಾಮಮೂರ್ತಿ ಸಿ, 1970: ಇಂಡಿಯನ್ ಪೆಂಟಿಂಗ್ಸ್, ನೆಶನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ. ನ್ಯೂ ದಿಲ್ಲಿ.

5. ಕಾರಂತ ಶಿವರಾಮ, 1972: ಕರ್ನಾಟಕ ಪೆಂಟಿಂಗ್ಸ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

6. ಗಾಂಗುಲಿ ಅನಿಲ್ ಬರನ್, 1979: ಫಾಯಿನ್ ಆರ್ಟ್ಸ್ ಇನ್ ಎನಶಂಟ್ ಇಂಡಿಯಾ. ಅಭಿನವ ಪಬ್ಲಿಕೇಶನ್ಸ್, ನ್ಯೂ ದಿಲ್ಲಿ.

7. ರಾವ್ ಎಸ್.ಆರ್. ಬಿ.ವಿ.ಕೆ ಶಾಸ್ತ್ರೀ, 1980: ಟ್ರೆಡಿಶನಲ್ ಪೆಂಟಿಂಗ್ಸ್ ಆಫ್ ಕರ್ನಾಟಕ, ಕರ್ನಾಟಕ ಕಲಾ ಪರಿಷತ್, ಬೆಂಗಳೂರು.



ಪ್ರಗತಿಯ ಹಾದಿಯಲ್ಲಿ

1. ಮಲೆಯ ಸಂತ	– ಬಿಳುಮನೆ ರಾಮದಾಸ್	2006	ರೂ. 180
2. ದೇವರುಗಳ ರಾಜ್ಯದಲ್ಲಿ	– ಬೊಳುವಾರು ಮಹಮದ್ ಕುಂಞ	2006	ರೂ. 80
3. ನಾತಿಚರಾಮಿ	– ಎಂ.ಎ. ಇಂದಿರ	2006	ರೂ. 45
4. ಭಾವ ಬಂಧನ	– ಎಂ.ಎ. ಇಂದಿರ	2006	ರೂ. 50
5. ಸುಪ್ತ ಸಾಗರ	– ಎಂ.ಎ. ಇಂದಿರ	2006	ರೂ. 70
6. ತಮ್ಮ ತೊಟ್ಟಿಲುಗಳ ತಾವೇ ಜೀಕಿ...	– ಎನ್.ಸಿ. ಮಹೇಶ್	2006	ರೂ. 80
7. ಒಂದು ಕೈಫಿಯತ್	–ಚಂದ್ರಕಾಂತ ಕುಸನೂರ	2007	ರೂ. 075
8. ಬೇಲಿಮ್ಯಾಲಿನ ಹೂವು	–ಡಾ. ನಿಜಲಿಂಗಪ್ಪ ಮಟ್ಟಿಹಾಳ	2007	ರೂ. 80
9. ತಲ್ಲಣದ ಆ ಕ್ಷಣ	– ಕಂನಾಡಿಗಾ ನಾರಾಯಣ	2007	ರೂ. 60
10. ಕಾಲನೌಕೆ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 50
11. ಬೆನ್‌ಹರ್	– ಡಾ. ಕೆ. ಪುಟ್ಟಸ್ವಾಮಿ	2007	ರೂ. 60
12. ಮಾತಾಹರಿ	– ಡಾ. ಜೆ. ಬಾಲಕೃಷ್ಣ	2007	ರೂ. 25
13. ಪುಟ್ಟರಾಜಕುಮಾರ	– ಡಾ. ಜೆ. ಬಾಲಕೃಷ್ಣ	2007	ರೂ. 40
14. ಬೊಕಾಷಿಯೋನ ರಸಿಕತೆಗಳು	– ಡಾ. ಜೆ. ಬಾಲಕೃಷ್ಣ	2007	ರೂ. 45
15. ಮಾಯಾ ಮನುಷ್ಯ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 90
16. ಭೂ ಮಧ್ಯಕ್ಕೆ ಒಂದು ಪಯಣ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 80
17. Sociology for pre law students	- Adinarayanappa	2007	Rs.125
18. ಕುವೆಂಪು ಸಾಹಿತ್ಯ ದರ್ಶನ	– ಡಿ.ಎಸ್. ನಾಗಭೂಷಣ	2007	ರೂ. 50
19. ಇಳೆಯ ಬೆಳಗು	– ಪ್ರೊ. ಬಿ.ಎ. ಶ್ರೀಧರ	2007	ರೂ. 175
20. ಪಲ್ಲಟ ಪರ್ವ	– ಪ್ರೊ. ಬಿ.ಎ. ಶ್ರೀಧರ	2007	ರೂ. 200
21. ಗೀತಾಂಜಲಿ	– ನವೀನ್ ಹಳೆಮನೆ	2007	ರೂ. 100
22. ಸಾಹಿತ್ಯ ಸಂಭ್ರಮ	– ಸಂ. ಎಂ. ಬೈರೇಗೌಡ	2007	ರೂ. 100
23. ಬಹುಜನ ಚಿಂತನ	– ಡಾ. ಕುಂಸಿ ಉಮೇಶ್	2007	ರೂ. 60
25. ತರುಣಿ ಮಾ (ಹಿಂದಿ)	– ಪಿಂಟು ನಂಗಾವತ್	2008	ರೂ. 40
26. ದೇವರುಗಳ ರಾಜ್ಯದಲ್ಲಿ	– ಬೊಳುವಾರು ಮ. ಕುಂಞ	2008	ರೂ. 80

27. ಉತ್ಪಾತ	– ಡಾ. ಲಕ್ಷ್ಮಣಕೌಂಟೆ	2008	ರೂ. 110
28. ಕಣ್ಣ ಕಣಿವೆ	– ರೇಣುಕಾ ನಿಡಗುಂದಿ	2008	ರೂ. 50
29. 80 ದಿನಗಳಲ್ಲಿ ಭೂ ಪ್ರದಕ್ಷಿಣೆ	– ಡಾ. ಕೆ. ಪುಟ್ಟಸ್ವಾಮಿ	2008	ರೂ. 120
30. ಮಾಳಸುತ್ತಿನ ಮೂಲಿಕೆ ವೈದ್ಯ	– ಡಾ. ಸ.ನಾ.ಭಟ್	2008	ರೂ. 125
31. ಕನ್ನಡ ಸಾಹಿತ್ಯ–ಸಂಸ್ಕೃತಿ:....	– ಡಾ. ಡೊಮಿನಿಕ್	2008	ರೂ. 150
32. ಡೊಂಕು ಬಾಲದ ನಾಯಕರು	– ಡಾ.ಎಲ್. ಬಸವರಾಜು	2008	ರೂ. 100
33. ಯುಗ ಪುರುಷ	– ಡಾ. ಲಕ್ಷ್ಮಣ ಕೌಂಟೆ	2008	ರೂ. 250
34. ಹಿಂದಣ ಹೆಜ್ಜೆಯನರಿಯದೆ	– ಡಾ. ಕುಮಾರ ಚಲ್ಯ	2008	ರೂ.250
35. ನಾನು ಅವನಲ್ಲ... ಅವಳು...	– ಕನ್ನಡಕ್ಕೆ: ಡಾ. ತಮಿಳ್ ಸೆಲ್ವಿ	2008	ರೂ. 150
36. ಹುಚ್ಚು ದಾಳಿಂಬೆ ಗಿಡ	–ಡಾ. ವಿಜಯಾ ಗುತ್ತಲಾ, ಡಾ. ವಿ.ವಿಸಾಜಿ	2008	ರೂ. 70
37. ಪದ್ಯದ ಮರ	– ಕೃಷ್ಣಮೂರ್ತಿ ಬಿಳಿಗೆರೆ	2008	ರೂ. 75
38. ಜೋಳಿಗೆಯಲ್ಲೊಂದು ಅಗುಳು	– ಕೃಷ್ಣ ರಾಯಚೂರ್	2008	ರೂ. 80
39. ನದಿಯ ತೀರದ ನಡಿಗೆ	– ಡಾ. ರಂಗನಾಥ ಕಂಟನಕುಂಟೆ	2008	ರೂ. 50
40. ಅಸ್ತಿತ್ವ	– ಎಚ್.ಆರ್. ಶಿವಕುಮಾರ್	2008	ರೂ. 045
41. ಯಕ್ಷರಂಗ	– ರವಿ ರಾ. ಅಂಚನ್	2009	ರೂ. 80
42. ಅರಿವೆಂಬ ಮಾಯೆ	– ರವಿ ರಾ. ಅಂಚನ್	2009	ರೂ. 150
43. ಮಳೆ ಕೋಗಿಲೆ	(ಸಂ)–ಡಾ.ಎಂ. ಬೈರೇಗೌಡ	2009	ರೂ. 150
44. ಮಲೆಯ ಪ್ರಬಂಧಗಳು	–ಬಿಳುಮನೆ ರಾಮದಾಸ್	2009	ರೂ. 100
45. ನೀರದೀವಿಗೆ,	– ಡಾ. ಕೆ.ವೈ. ನಾರಾಯಣಸ್ವಾಮಿ	2009	ರೂ. 150
46. ಮಹಿಳೆ: ಅಸ್ತಿತ್ವದ ಸಂಕಥನ	– ಡಾ. ಕವಿತಾ ರೈ	2009	ರೂ. 250
47. ಶಿಷ್ಯಗಾಥೆ	– ಶ್ರೀಧರ ಕೋಟೆಕಾರ್	2009	ರೂ. 200
48. The Ballad of Sikhs	- Sridhar Kotekar	2009	Rs.250
49. ರಾಗೌ ಕಾವ್ಯ ವಿಮರ್ಶೆ	– ಸಂ. ಡಾ. ಬೆಳ್ಳೂರು ವೆಂಕಟಪ್ಪ	2009	ರೂ. 100
50. ಕವನ ಕೂಡಲಸಂಗಮ	– ಡಾ. ಎಲ್. ಬಸವರಾಜು	2009	ರೂ. 350
51. ಬೆಳಕು–ಬೆರಗು	– ಪ್ರೊ. ಲಿಂಗದೇವರು ಹಳೆಮನೆ	2009	ರೂ. 100
52. ಯಮುನ ಕೋಣವು...	– ಪ್ರೊ. ಎಸ್. ತಮ್ಮಾಜಿರಾವ್ ನಂಗ್ಲಿ	2009	ರೂ. 100
53. ಡಾರ್ವಿನ್ ಕಂಡ ಗಲಪಗಾಸ್ ದ್ವೀಪ	– ಟಿ.ಆರ್. ಅನಂತರಾಮು	2009	ರೂ. 40
54. ಭಕ್ತಿಪಂಥದಲ್ಲಿ ಸ.ಕಾ. ಬೇರುಗಳು,	– ಡಾ. ಎಚ್.ಎಂ. ಮರುಳಸಿದ್ಧಯ್ಯ	2009	ರೂ. 125
55. ದೂರದರ್ಶಕ ಕಂಡ ವಿಶ್ವರೂಪ	– ಟಿ.ಆರ್. ಅನಂತರಾಮು	2009	ರೂ. 150
56. ಪ್ರಕ್ಷುಬ್ಧ ಕಣಿವೆ	– ನ. ರಮೇಶ್, ವಿ.ಎಸ್. ಶ್ರೀಧರ	2009	ರೂ. 150
57. ಪೂರ್ವ ಪಶ್ಚಿಮ ಅಪೂರ್ವರು	– ಪುಸ್ತಕಮನೆ ಹರಿಹರಪ್ರಿಯ	2009	ರೂ. 150
58. ದೊಡ್ಡವರೆಲ್ಲ ಜಾಣರಲ್ಲಾ...!	–ಸ್ನೇಹಪ್ರಿಯ ನಾಗರಾಜ್	2009	ರೂ. 125

59. ಬಾಧೆಯ ವೃಕ್ಷದಲ್ಲಿ ಬೋಧಿಯ ಪರಿಮಳ	–ಜಂಬಣ್ಣ ಅಮರಚಿಂತ	2009	ರೂ. 100
60. ಟ್ರ್ಯಾಕುಗಳ ಮೇಲೆ ಹುಣ್ಣಿಮೆ	–ಬಿ.ಎನ್. ಮಲ್ಲೇಶ್	2009	ರೂ. 45
61. ಬ್ರೇಕಿಂಗ್ ನ್ಯೂಸ್	–ಬಿ.ಎನ್. ಮಲ್ಲೇಶ್	2009	ರೂ. 200
62. ಪಳಯನ್ನರು ಮತ್ತು ದ್ರೌಪದಿ	–ವೇಣುಗೋಪಾಲ	2010	ರೂ. 150
63. ಅಲ್ಲಮನು ಮೈಮೇಲೆ ಬಂದಾಗ...	– ಡಾ. ಎಲ್. ಬಸವರಾಜು	2010	ರೂ. 150
64. ಮೇವರಿಕ್ ಫಾರೆಸ್ಟರ್	– ಎಚ್.ಎ. ಪುರುಷೋತ್ತಮರಾವ್	2010	ರೂ. 150
65. ಮಕ್ಕಳ ಆರೋಗ್ಯ	–ಡಾ. ಪಿ.ಎಸ್. ಶಂಕರ್	2010	ರೂ. 250
66. ಆರೋಗ್ಯ ಪಥದಲ್ಲಿ ಮುನ್ನಡೆ	–ಡಾ. ಪಿ.ಎಸ್. ಶಂಕರ್	2010	ರೂ. 100
67. ಚಿತ್ರಗುಪ್ತ ಚಂಪೂ	– ಡಾ. ಎಲ್. ಬಸವರಾಜು	2010	ರೂ. 100
68. ಪಾಶ್ಚಾತ್ಯ ಚಿಂತಕರ ದೃಷ್ಟಿಯಲ್ಲಿ ಭಾ. ಸಮಾಜ	–ಡಾ. ಎಚ್.ಎಂ.ಎಂ.	2010	ರೂ. 100
69. Objective Plant Nemotology	-B. Manjunath	2010	Rs. 150
70. ಚರಿತ್ರೆಯ ಐಸಿರಿ	–ಡಾ. ಕೆ. ಸಾವಿತ್ರಿ	2010	ರೂ. 150
71. ಅನಾವರಣ	–ಬಿಳುಮನೆ ರಾಮದಾಸ್	2010	ರೂ. 225
72. ದಿಗ್ಭ್ರಾಂತ ಸಮಾಜಕ್ಕೆ .... ಸಂ.1	– ಎಚ್.ಎಂ.ಎಂ.	2010	ರೂ. 450
73. ದಿಗ್ಭ್ರಾಂತ ಸಮಾಜಕ್ಕೆ .... ಸಂ.2	– ಎಚ್.ಎಂ.ಎಂ.	2010	ರೂ. 450
74. Tv Tolls for Teens	-Dr. Rnld. Anil Fernandiz	2010	Rs.. 250
75. ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ	–ಡಾ. ಆರ್. ಚಲಪತಿ	2010	ರೂ. 150
76. Computer Aplication in Business	-Suresh Palimat	2010	Rs. 150
77. Computer Business Aplication	-Suresh Palimat	2010	Rs. 150
78. ಕಥಾಕಥನ	– ಡಾ. ಎಲ್. ಹನುಮಂತಯ್ಯ	2010	ರೂ. 125
79. ಲೋಹಿಯಾವಾದಿ ಡಾ.ಎಂ.ನಾಗಪ್ಪ	–ಡಾ. ಎನ್.ಡಿ. ತಿಪ್ಪೇಸ್ವಾಮಿ	2010	ರೂ. 300
80. ಮಣ್ಣ ಬಳೆನಾದ	–ಡಾ. ಸಿ.ಎಸ್. ದ್ವಾರಕಾನಾಥ್	2010	ರೂ. 150
81. ಹೆಣ್ಣುತನ ಎಂಬ ಕಣ್ಕಟ್ಟು	– ಎಚ್.ಎಸ್. ಶ್ರೀಮತಿ	2010	ರೂ. 300
82. ಜಾಹೀರಾತುಗಳಲ್ಲಿ ಮಹಿಳಾ ಪ್ರಾತಿನಿಧೀಕರಣ	–ಡಾ. ಕಲಾವತಿ ಬಿ.ಜಿ	2010	ರೂ. 250
83. ಹೆಣ್ಣುಬರೆಹದ ಒಳಬಂಡಾಯ	–ಎಚ್.ಎಸ್. ಶ್ರೀಮತಿ	2010	ರೂ. 125
84. Maverick Forester	-Vijayaraghavan	2010	Rs. 150
85. ಬ್ಲಾಗಿಲನು ತೆರೆದು	– ಬಿ.ಎ. ವಿವೇಕ ರೈ	2011	ರೂ. 80
86. ತುಳಿಯುವ ಕಾಲಿಗೆ ಬಿದ್ದೀರ	–ಡಾ. ಎಲ್. ಬಸವರಾಜು	2011	ರೂ. 50
87. ಅಳಿದುಳಿದವರು	–ಬೋಲ ಚಿತ್ತರಂಜನದಾಸ್ ಶೆಟ್ಟಿ	2011	ರೂ. 250
88. ಸಂಸ್ಕೃತಿ ವಿನ್ಯಾಸ	– ಪ್ರೊ. ಶಿವರಾಮಯ್ಯ	2011	ರೂ. 200
89. ಕಾಮರಸಾಯನ	–ರಾಹು	2011	ರೂ. 450
90. SOUTH INDIA: An Expedition....	- Dr. Srinivasa Havanur	2011	Rs. 550
91. ಕ್ಲಿಕ್ [ಅ]ಸ್ಥಿರ ಚಿತ್ರಗಳು	–ಡಿ.ಜಿ. ಮಲ್ಲಿಕಾರ್ಜುನ	2011	ರೂ. 450

92. ಸಮಾಜಕಾರ್ಯದ ಕಣಸುಗಾರ ಎಚ್.ಎಂ.ಎಂ.	2011	ರೂ. 125
93. ಹಂಪೆಯ ಹರಿಹರ ಕಂಡರಿಸಿದ ಭಕ್ತಿ-ಜ್ಞಾನ-ವೈರಾಗ್ಯದ ನುಡಿ ಶಿಲ್ಪಗಳು -ಡಾ. ಎಲ್. ಬಸವರಾಜು	2011	ರೂ. 30
94. ಒಂದು ಬುಡಕಟ್ಟಿನ ಲೋಕದೃಷ್ಟಿ -ಹಿ.ಚಿ. ಬೋರಲಿಂಗಯ್ಯ	2011	ರೂ. 150
95. ಗೋಡೆಯ ಚಿತ್ರ -ಡಾ. ರಂಗನಾಥ ಕಂಟನಕುಂಟೆ	2011	ರೂ. 120
96. Infact... SHE -Dr. Kavitha K	2011	Rs. 300
97. ಕನ್ನಡ ಆಡು ನುಡಿಯ ಸೊಲ್ಲರಿಮೆ:1 ಕೆ.ವಿ. ನಾರಾಯಣ	2011	ರೂ. 50
98. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ-1 ಡಾ. ಎಚ್.ಎಸ್. ಶ್ರೀಮತಿ	2011	ರೂ. 300
100. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ-2 ಡಾ. ಎಚ್.ಎಸ್. ಶ್ರೀಮತಿ	2011	ರೂ. 250
101. ಪ್ರಾಚೀನ ಭಾರತದ ಚರಿತ್ರೆ -ಡಾ. ಎಚ್.ಎಸ್. ಶ್ರೀಮತಿ	2012	ರೂ. 150
102. ಆಧುನಿಕ ಭಾರತದಲ್ಲಿ ಮಹಿಳೆ -ಡಾ. ಎಚ್.ಎಸ್. ಶ್ರೀಮತಿ	2012	ರೂ. 260
103. ನಾನು ಅವನಲ್ಲ... ಅವಳು...! -ಡಾ. ತಮಿಳ್ ಸೆಲ್ವಿ	2012	ರೂ. 200
104. BUSINESS AND ACCOUNTING DICTIONARY-Nagaraju	2012	Rs.300
105. A Historical Discorse -Dr. H.B. Ramesh	2012	Rs. 200
106. ನಿಮ್ಮನೀಗೆ ಗುಡ್ಡದಯ್ಯ -ಎಂ.ಎನ್. ವೆಂಕಟೇಶ	2012	ರೂ. 150
107. ಸ್ತ್ರೀವಾದ: ತಾತ್ತ್ವಿಕತೆ - ಎಚ್.ಎಸ್. ಶ್ರೀಮತಿ	2012	ರೂ. 350
108. ಸ್ತ್ರೀವಾದ : ಅನ್ವಯಿಕತೆ -ಎಚ್.ಎಸ್. ಶ್ರೀಮತಿ	2012	ರೂ. 300
109. ಕುರ್ಚಿ -ಡಾ. ಆರ್. ಶಿವಪ್ಪ	2012	ರೂ. 50
110. ಪಶು-ಪಕ್ಷಿ ಪ್ರಪಂಚ -ಡಾ. ಕೃಷ್ಣಾನಂದ ಕಾಮತ್	2012	ರೂ. 125
111. ಕೀಟ ಜಗತ್ತು -ಡಾ. ಕೃಷ್ಣಾನಂದ ಕಾಮತ್	2012	ರೂ. 125
112. ಕಾವಿ ಕಲೆ -ಡಾ. ಕೃಷ್ಣಾನಂದ ಕಾಮತ್	2012	ರೂ. 100




































ಕಾವಿ ಕಲೆ

ಡಾ. ಕೃಷ್ಣಾನಂದ ಕಾಮತ್ (1934-2002) ಕನ್ನಡ ನಾಡು ಕಂಡ ಅಪೂರ್ವ ಪ್ರತಿಭೆ. ಅಪ್ಪಟ ಮನುಷ್ಯರು. ಸಂಶೋಧಕರು, ಕಾಲುಗಳಿಗೆ ಚಕ್ರ ಕಟ್ಟಿಕೊಂಡುಸುತ್ತಿದ ಅಪರೂಪದ ಕ್ಷೇತ್ರಕಾರ್ಯಕರ್ತರು, ಸೃಜನಶೀಲ ಬರಹಗಾರರು, ಅಪೂರ್ವ ಕುಂಚ ಕಲಾವಿದರು, ಛಾಯಾಗ್ರಾಹಕರು, ಪ್ರಾಣಿ-ಪಕ್ಷಿಗಳ ತಜ್ಞರು, ಒಬ್ಬ ವಿಜ್ಞಾನಿ, ಪಾಕಪ್ರವೀಣರು... ಹೀಗೆ ಬಹು ಆಯಾಮಗಳಲ್ಲಿ ತಮ್ಮ ಜೀವಿತಾವಧಿಯನ್ನು ಸವೆಸಿದ ಅನರ್ಘ್ಯ ರತ್ನ. ಕಾಮತರ ಯಾವುದೇ ಬರವಣಿಗೆಯಲ್ಲೂ ಒಬ್ಬ ಸಂಶೋಧಕನಿರುತ್ತಾನೆ. ಬರಹದ ವಿಷಯ ವಸ್ತು ವಿಚಾರದಲ್ಲಿ ತರ್ಕಬದ್ಧವಾದ, ವೈಜ್ಞಾನಿಕ ದೃಷ್ಟಿಕೋನ ಎದ್ದು ಕಾಣುವ ಅಂಶ. ಲಘು ಹರಟೆಯ ಅವರ ಧಾಟಿ ಓದುಗಸ್ನೇಹಿಯಾಗಿರುತ್ತದೆ. ತುಂಬಾ ಗಹನವಾದ ವಿಚಾರಗಳನ್ನು ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಸರಳ ನಿರೂಪಣೆಯನ್ನು ಕಾಣಬಹುದು. ಹಾಸ್ಯದ ಮೂಲಕವೇ ಗಂಭೀರ ವಿಚಾರಗಳನ್ನು ತಿಳಿಹೇಳುವ ಛಾತಿ ಕೃಷ್ಣಾನಂದ ಕಾಮತರ ಲೇಖನಿ, ಕುಂಚ, ಕ್ಯಾಮೆರಾಗಳಿಗೆ ಇತ್ತು ಎಂಬುದನ್ನು ಅವರನ್ನು ಓದಿಕೊಂಡ ಯಾರಿಗಾದರೂ ಅನಿಸದಿರದು. ಭಾರತದ ಆದಿವಾಸಿ ಬದುಕಿನ ಅನೇಕ ಮಜಲುಗಳನ್ನು ಕಣ್ಣಾರೆ ಕಂಡು ಕಾಮತರು ಬಿಡಿಸಿಟ್ಟಿದ್ದಾರೆ. ಕನ್ನಡ ನಾಡು ಇಂತಹ ಮಹನೀಯರನ್ನು ಪಡೆದು ನಿಜಕ್ಕೂ ಧನ್ಯವಾಗಿದೆ. ಅವರ ಕೃತಿಗಳ ಮರುಮುದ್ರಣದ ಮೂಲಕ ನಮ್ಮನ್ನು ನಾವು ಗೌರವಿಸಿಕೊಳ್ಳುತ್ತಿದ್ದೇವೆ.

ಡಾ. ಎಂ. ಬೈರೇಗೌಡ

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು

ISBN 93-81441-24-3

₹ 100/-

112